ಕಲಿಕಾಫಲ: ಭಾರತದ ಪ್ರಮುಖ ಆರ್ಥಿಕ ವಲಯಗಳು, ಪ್ರಾಥಮಿಕ ವಲಯದ ಅರ್ಥ ಮತ್ತು ಪ್ರಾಮುಖ್ಯತೆ, ಸಾರ್ವಜನಿಕ ಮತ್ತು ಖಾಸಗಿ ವಲಯದ ಪಾತ್ರ , ತೃತೀಯ ವಲಯದ ಪ್ರಾಮುಖ್ಯತೆ ಹಾಗೂ ಕರ್ನಾಟಕ ಅರ್ಥವ್ಯವಸ್ಥೆಯ ಬಗ್ಗೆ ಮಾಹಿತಿ ಪಡೆಯುವರು.

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1)ಭಾರತದ ಜನರ ಪ್ರಮುಖ ಉದ್ಯೋಗ (ಸುಲಭ)

A)ಕೈಗಾರಿಕೆ B)ಕೃಷಿ C)ವ್ಯಾಪಾರ D)ಸಾರಿಗೆ ಸಂಪರ್ಕ

2)ಇವುಗಳಲ್ಲಿ ಪ್ರಾಥಮಿಕ ವಲಯಕ್ಕೆ ಸೇರದ ಉದ್ಯೋಗವೆಂದರೆ (ಸಾಧಾರಣ)

A) ಕೃಷಿ B)ಅರಣ್ಯಗಾರಿಕೆ C)ಕಟ್ಟಡ ನಿರ್ಮಾಣ D)ಮೀನುಗಾರಿಕೆ

3)ಗಣಿಗಾರಿಕೆಯು ಈ ಕೈಗಾರಿಕೆಗೆ ಕಚ್ಚಾ ವಸ್ತುಗಳನ್ನು ಪೂರೈಸುವುದು (ಸಾಧಾರಣ)

A)ಮಾಹಿತಿ ತಂತ್ರಜ್ಞಾನ ಕೈಗಾರಿಕೆಗೆ B) ಕೃಷಿಯಾಧಾರಿತ ಕೈಗಾರಿಕೆಗೆ

C) ಸೇವಾ ವಲಯದ ಕೈಗಾರಿಕೆಗೆ D)ಖನಿಜಾಧಾರಿತ ಕೈಗಾರಿಕೆಗೆ

4) ಇವುಗಳಲ್ಲಿ ಸೇವಾವಲಯಕ್ಕೆ ಸೇರುವ ಉದ್ಯೋಗವೆಂದರೆ (ಸಾಧಾರಣ)

A)ರೇಷ್ಮೆ ಕೃಷಿ B)ಕೋಳಿ ಸಾಕಾಣಿಕೆ C)ಬ್ಯಾಂಕಿಂಗ್ D)ಪುಷ್ಪ ಕೃಷಿ

5)ದ್ವಿತೀಯ ವಲಯವನ್ನು ಹೀಗೆನ್ನುವರು (ಸಾಧಾರಣ)
A) ಕೃಷಿ ವಲಯ B)ತಯಾರಿಕಾ ವಲಯ C)ಸೇವಾ ವಲಯ D)ವ್ಯಾಪಾರ ವಲಯ
6) ಕೆಳಗಿನವುಗಳಲ್ಲಿ ತೃತೀಯ ವಲಯದ ಉದ್ಯೋಗಕ್ಕೆ ಉದಾಹರಣೆಯಾಗಿರುವುದು (ಸಾಧಾರಣ)
A)ಕಟ್ಟಡ ನಿರ್ಮಾಣ B)ಕೈಗಾರಿಕೆ C)ವಿದ್ಯುತ್ ಉತ್ಪಾದನೆ D)ಸಾರಿಗೆ-ಸಂಪರ್ಕ
7)ಇವುಗಳಲ್ಲಿ ಅರಣ್ಯ ಆಧಾರಿತ ಕೈಗಾರಿಕೆ (ಸಾಧಾರಣ)
A) ಹತ್ತಿ ಬಟ್ಟೆ ತಯಾರಿಕೆ B)ಕಾಗದ ತಯಾರಿಕೆ C)ಕಬ್ಬಿಣ ಮತ್ತು ಉಕ್ಕು ತಯಾರಿಕೆ D)ಸಕ್ಕರೆ ತಯಾರಿಕೆ
8)ಸಾರ್ವಜನಿಕ ವಲಯದ ಕೈಗಾರಿಕೆಗಳ ಒಡೆತನವನ್ನು ಹೊಂದಿರುವವರು (ಸುಲಭ)
A)ಖಾಸಗಿ ವ್ಯಕ್ತಿಗಳು B)ವಿದೇಶಿ ಹೂಡಿಕೆದಾರರು C)ಸರ್ಕಾರೇತರ ಸಂಸ್ಥೆಗಳು D)ಸರ್ಕಾರ
9)ಸಾರ್ವಜನಿಕ ವಲಯದ ಕಂಪನಿಗೆ ಉದಾಹರಣೆಯಾಗಿರುವುದು (ಕಠಿಣ)
Aಇನ್ಫೋಸಿಸ್ B)ಟಾಟಾ ಮೋಟರ್ಸ್ C)BHEL D)ರಿಲಯನ್ಸ್
10)ಸಾರ್ವಜನಿಕ ವಲಯದ ಕೈಗಾರಿಕೆಗಳು ದೊಡ್ಡ ಪ್ರಮಾಣದಲ್ಲಿ ವಿಸ್ತರಣೆಯಾಗಲು ಕಾರಣವಾದ ಕೈಗಾರಿಕೆ ನೀತಿ ಜಾರಿಗೆ ಬಂದುದು, (ಸುಲಭ)
A) 1947 ರಲ್ಲಿ B)1956 ರಲ್ಲಿ C) 1991 ರಲ್ಲಿ D)2001 ರಲ್ಲಿ
11) ಮೂಲ ರಾಷ್ಟ್ರದಲ್ಲಿ ಕೇಂದ್ರ ಕಚೇರಿಯನ್ನು ಹೊಂದಿದ್ದು ಎರಡು ಅಥವಾ ಹೆಚ್ಚಿನ ದೇಶಗಳಲ್ಲಿ ಉದ್ಯಮಗಳನ್ನು ಹೊಂದಿರುವ ಕಂಪನಿಗಳನ್ನು ಹೀಗೆನ್ನುವರು (ಸಾಧಾರಣ)
A)ಖಾಸಗಿ ಕಂಪನಿಗಳು B)ಸರ್ಕಾರಿ ಕಂಪೆನಿಗಳು
C)ಬಹು ರಾಷ್ಟ್ರೀಯ ಕಂಪನಿಗಳು D)ಅಂತರರಾಷ್ಟ್ರೀಯ ಕಂಪನಿಗಳು
12)ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಮುಖ ಬಹುರಾಷ್ಟ್ರೀಯ ಕಂಪನಿಯೆಂದರೆ (ಕಠಿಣ)
A)BHEL B)BSNL C)SONY D)HMT
13) 1991ರ ಆರ್ಥಿಕ ಸುಧಾರಣೆಗಳು ಇದಕ್ಕೆ ಹೆಚ್ಚಿನ ಮಹತ್ವ ನೀಡಿದವು (ಕಠಿಣ)
A)ಖಾಸಗಿಕರಣ B) ರಾಷ್ಟ್ರೀಕರಣ C)ಸರ್ಕಾರದ ನಿಯಂತ್ರಣ D)ವಿದೇಶಿ ಹೂಡಿಕೆಯ ನಿಯಂತ್ರಣ
14)ತೃತೀಯ ವಲಯವನ್ನು ಹೀಗೂ ಕರೆಯುವರು (ಸಾಧಾರಣ)
A)ತಯಾರಿಕಾ ವಲಯ B)ಕೈಗಾರಿಕಾ ವಲಯ C)ಕೃಷಿ ವಲಯ D)ಸೇವಾ ವಲಯ
15) ಬ್ಯಾಂಕುಗಳು ಇವರ ನಡುವೆ ಸಂಪರ್ಕವನ್ನು ಏರ್ಪಡಿಸುತ್ತವೆ (ಕಠಿಣ)
A)ಉತ್ಪಾದಕರು ಮತ್ತು ಅನುಭೋಗಿಗಳು B)ಹೂಡಿಕೆದಾರರು ಮತ್ತು ಉಳಿತಾಯಗಾರರು
C)ಸರ್ಕಾರ ಮತ್ತು ಜನರು D)ರೈತರು ಮತ್ತು ಉದ್ಯಮಿಗಳು
16) 2011ರ ಜನಗಣತಿಯ ಪ್ರಕಾರ ಭಾರತೀಯ ಜನರ ನಿರೀಕ್ಷಿತ ಜೀವಿತಾವಧಿ (ಸಾಧಾರಣ)
A)55.4 B)60.1 C)66.9 D)75.3
17) ಸರ್ವ ಶಿಕ್ಷಣ ಅಭಿಯಾನ ಜಾರಿಗೆ ಬಂದ ವರ್ಷ (ಸುಲಭ)
A) 1995 B)2018 C)2001 D)2009
18) 2011ರ ಜನಗಣತಿಯ ಪ್ರಕಾರ ಕರ್ನಾಟಕದ ಸಾಕ್ಷರತೆಯ ಪ್ರಮಾಣ (ಸಾಧಾರಣ)
A) 65.4% B)72.3% C)75.36% D)80.1%
19) ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆ (ಸಾಧಾರಣ)
A) ಚಹಾ B)ಕಾಫಿ C)ತಂಬಾಕು D)ಸೆಣಬು
20) ಕರ್ನಾಟಕದಲ್ಲಿ ಕೃಷಿಯನ್ನು ಅವಲಂಭಿಸಿರುವ ಜನಸಂಖ್ಯಾ ಪ್ರಮಾಣ (ಸಾಧಾರಣ)
A)25% B)35 % C)52 % D)65 %
21)ಕರ್ನಾಟಕದ ಕರಾವಳಿಯ ಉದ್ದ (ಸುಲಭ)
A)270 ಕಿಲೋಮೀಟರ್ B)300 ಕಿಲೋಮೀಟರ್ C)320 ಕಿಲೋಮೀಟರ್ D)350 ಕಿಲೋಮೀಟರ್
22) ಅತಿ ದೊಡ್ಡ ಸಾರ್ವಜನಿಕ ವಲಯದ ಉದ್ಯಮವೆಂದರೆ (ಸಾಧಾರಣ)
A) ಇನ್ಫೋಸಿಸ್ B)BHEL C)HAL D)ITI

23)ಬ್ಯಾಂಕಿಂಗ್ ಉದ್ಯಮದ ತೊಟ್ಟಿಲುಗಳೆಂದು ಕರೆಯಲ್ಪಡುವ ಕರ್ನಾಟಕದ ಜಿಲ್ಲೆಗಳು (ಸುಲಭ)

A)ದಾವಣಗೆರೆ ಮತ್ತು ಚಿತ್ರದುರ್ಗ B)ಚಿಕ್ಕಮಗಳೂರು ಮತ್ತು ಶಿವಮೊಗ್ಗ

C) ದಕ್ಷಿಣ ಕನ್ನಡ ಮತ್ತು ಉಡುಪಿ D)ಬೆಳಗಾವಿ ಮತ್ತು ರಾಯಚೂರು

24)ಕರ್ನಾಟಕದಲ್ಲಿ ನೈರುತ್ಯ ರೈಲ್ವೆ ವಲಯದ ಕೇಂದ್ರ ಕಚೇರಿ ಇರುವ ಸ್ಥಳ (ಸಾಧಾರಣ)

A)ಬೆಂಗಳೂರು B)ಮಂಗಳೂರು C)ಮೈಸೂರು D)ಹುಬ್ಬಳ್ಳಿ

25)ಕರ್ನಾಟಕದ ಅರ್ಥ ವ್ಯವಸ್ಥೆಗೆ ಹೆಚ್ಚಿನ ಆದಾಯ ಒದಗಿಸುತ್ತಿರುವ ವಲಯ (ಸಾಧಾರಣ)

A)ಕೃಷಿ ವಲಯ B)ಕೈಗಾರಿಕಾ ವಲಯ C)ಸೇವಾ ವಲಯ D)ಗಣಿಗಾರಿಕಾ ವಲಯ

II. ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ.

26)ಭಾರತದ ಅರ್ಥವ್ಯವಸ್ಥೆಯನ್ನು ಎಷ್ಟು ವಲಯಗಳಾಗಿ ವರ್ಗೀಕರಿಸಲಾಗಿದೆ? (ಸುಲಭ)

27)ಭಾರತದ ಜನರ ಮುಖ್ಯ ಉದ್ಯೋಗ ಯಾವುದು? (ಸುಲಭ)

28) ದ್ವಿತೀಯ ವಲಯದಲ್ಲಿನ ಉದ್ಯೋಗಗಳನ್ನು ಹೆಸರಿಸಿ. (ಸಾಧಾರಣ)

29)ಕೃಷಿ ಆಧಾರಿತ ಕೈಗಾರಿಕೆಗೆ ಉದಾಹರಣೆ ಬರೆಯಿರಿ. (ಸುಲಭ)

30) ಬಹು ರಾಷ್ಟ್ರೀಯ ಕಂಪನಿ ಎಂದರೇನು? (ಸಾಧಾರಣ)

31)ನೂತನ ಆರ್ಥಿಕ ಸುಧಾರಣೆ ನೀತಿ ಯಾವಾಗ ಜಾರಿಯಾಯಿತು? (ಸಾಧಾರಣ)

32)ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಕರ್ನಾಟಕದ ಬಂದರನ್ನು ಹೆಸರಿಸಿ. (ಕಠಿಣ)

33)ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ಯಾವಾಗ ಸ್ಥಾಪಿಸಲಾಯಿತು? (ಸಾಧಾರಣ)

III. ಈ ಪ್ರಶ್ನೆಗಳನ್ನು ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

34) ಭಾರತದ ಅರ್ಥವ್ಯವಸ್ಥೆಯ ವಲಯಗಳನ್ನು ಹೆಸರಿಸಿ (ಸುಲಭ)

35) ತೃತೀಯ ವಲಯದ ಉದ್ಯೋಗಗಳಾವುವು? (ಸುಲಭ)

36)ಖಾಸಗಿ ವಲಯ ಎಂದರೇನು? ಉದಾಹರಣೆ ಕೊಡಿ (ಸಾಧಾರಣ)

37)ಬಹುರಾಷ್ಟ್ರೀಯ ಕಂಪನಿಗಳಿಗೆ ಉದಾಹರಣೆ ನೀಡಿ. (ಸಾಧಾರಣ)

38) ವಿಮೆಯ ಎರಡು ವಿಧಗಳನ್ನು ಹೆಸರಿಸಿ (ಸುಲಭ)

39)ಸಂಪರ್ಕ ಎಂದರೇನು? ಉದಾಹರಣೆ ನೀಡಿ (ಸಾಧಾರಣ)

40)ಕರ್ನಾಟಕದ ಖಾಸಗಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕೆಗಳನ್ನು ಹೆಸರಿಸಿ (ಕಠಿಣ)

41) ಕೃಷಿಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಬರೆಯಿರಿ (ಸಾಧಾರಣ)

IV ಈ ಪ್ರಶ್ನೆಗಳನ್ನು ಆರು ವಾಕ್ಯಗಳಲ್ಲಿ ಉತ್ತರಿಸಿ.

42) ಪ್ರಾಥಮಿಕ ವಲಯ ಒಳಗೊಂಡಿರುವ ಉದ್ಯೋಗಗಳನ್ನು ಹೆಸರಿಸಿ. (ಸುಲಭ)

43) ಭಾರತದ ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳು ಯಾವುವು? (ಸಾಧಾರಣ)

44) ದ್ವಿತೀಯ ವಲಯ ಎಂದರೇನು? ಇದನ್ನು ಹೇಗೆ ವರ್ಗೀಕರಿಸಲಾಗಿದೆ? (ಸಾಧಾರಣ)

45) ಶಿಕ್ಷಣದ ಪ್ರೋತ್ಸಾಹಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? (ಸಾಧಾರಣ)

46) ಕರ್ನಾಟಕದ ಪ್ರಮುಖ ನೀರಾವರಿ ಯೋಜನೆಗಳನ್ನು ಪಟ್ಟಿ ಮಾಡಿ (ಸುಲಭ)

47) ಕರ್ನಾಟಕದ ಪ್ರಮುಖ ಬೆಳೆಗಳನ್ನು ಹೆಸರಿಸಿ. (ಸುಲಭ)

48) ಕರ್ನಾಟಕದ ಜಲ ಸಾರಿಗೆಯ ಕುರಿತು ಬರೆಯಿರಿ (ಸಾಧಾರಣ)

V. ಈ ಪ್ರಶ್ನೆಗಳನ್ನು ಎಂಟು ವಾಕ್ಯಗಳಲ್ಲಿ ಉತ್ತರಿಸಿ.

49)ಭಾರತದಲ್ಲಿ ಕೃಷಿ ವಲಯದ ಮಹತ್ವ ಬರೆಯಿರಿ. (ಸುಲಭ)

50)ಭಾರತದಲ್ಲಿ ಕೈಗಾರಿಕಾ ವಲಯ ಮಹತ್ವ ಪಡೆದಿದೆ ಎಂದು ಹೇಗೆ ಹೇಳುವಿರಿ? (ಕಠಿಣ)

51)ಕರ್ನಾಟಕದಲ್ಲಿರುವ ಸಾರ್ವಜನಿಕ ವಲಯದ ಉದ್ಯಮಗಳನ್ನು ಪಟ್ಟಿಮಾಡಿ. (ಸಾಧಾರಣ)

52)ಕರ್ನಾಟಕದ ಬ್ಯಾಂಕಿಂಗ್ ಕುರಿತು ಬರೆಯಿರಿ. (ಸಾಧಾರಣ)

ವ್ಯವಹಾರ ಅಧ್ಯಯನ ಅಧ್ಯಾಯ 16
ವ್ಯವಹಾರ ನಿರ್ವಹಣೆ

ಕಲಿಕಾಫಲ: ವ್ಯವಹಾರ ನಿರ್ವಹಣೆ ಮತ್ತು ಮಾರುಕಟ್ಟೆ ನಿರ್ವಹಣೆ ಅರಿಯುವರು. ವ್ಯವಹಾರ ನಿರ್ವಹಣೆ ವ್ಯಾಪ್ತಿ, ತತ್ವ ತಿಳಿಯುವರು.

I) ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1) ಕ್ರಮ ಬದ್ಧವಾಗಿ ಕೆಲಸ ಹಂಚುವುದನ್ನು ಹೀಗೆನ್ನುತ್ತಾರೆ . (ಸಾಧಾರಣ)

A) ನಿರ್ವಹಣೆ B) ನಿಯೋಜನೆ C) ಕಾರ್ಯವಿಭಜನೆ D)ಉಸ್ತುವಾರಿ

2) ಭವಿಷ್ಯದ ಕಾರ್ಯಾಚರಣೆಯನ್ನು ಮುಂದಾಗಿ ನಿರ್ಧರಿಸುವುದು (ಸಾಧಾರಣ))

A) ಸಂಘಟನೆ B) ನಿರ್ವಹಣೆ C) ಸಂಯೋಜನೆ D)ಯೋಜನೆ .

3) ನಿರ್ವಹಣೆಯ ಮೂಲ ಏರ್ಪಾಟುಗಳನ್ನು ನಿರ್ದಿಷ್ಟ ದಿಕ್ಕಿನಲ್ಲಿ ಕೊಂಡೊಯ್ಯುವುದು. (ಕಠಿಣ)

A) ಶ್ರಮ B) ನೇತೃತ್ವ C) ಹಂತ ಸರಪಳಿ D)ನಿರ್ವಹಣೆ .

4] ನಿರ್ವಹಣೆ ಎಂಬುದು ಬೇರೆಯವರಿಂದ ಕೆಲಸಮಾಡಿಸುವ ಒಂದು ಕಲೆಯಾಗಿದೆ" ಈ ಹೇಳಕೆಯನ್ನು ನೀಡಿದವರು (ಸುಲಭ)

A) ಹೆನ್ರಿ ಫಯೋಲ್. B) ಜೆ.ಎಲ್.ಹೇನ್ಸ C) ಆಡಂಸ್ಮಿತ್ D) ಮಾರ್ಷಲ್.

II) ವಿವರವಾಗಿ ಉತ್ತರಿಸಿ :

5) ನಿರ್ವಹಣೆಯ ತತ್ವಗಳಾವುವು? (ಸಾಧಾರಣ)

6) ನಿರ್ಧಾರ ತೆಗೆದುಕೊಳ್ಳುವ ಪ್ರಾಮುಖ್ಯತೆಗಳೇನು? (ಸಾಧಾರಣ)

7) ನಿರ್ವಹಣೆಯ ಕಾರ್ಯಕ್ಷೇತ್ರಗಳನ್ನು ವಿಶ್ಲೇಷಿಸಿ . (ಕಠಿಣ)

8) ವೈಯಕ್ತಿಕ ನಿರ್ಧಾರವು ಗುಂಪು ನಿರ್ಧಾರಕ್ಕಿಂತ ಹೇಗೆ ಭಿನ್ನವಾಗಿದೆ? (ಸಾಧಾರಣ)

9) ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ಸಂಘಟಕ ಗಮನಿಸಬೇಕಾದ ಅಂಶಗಳಾವುವು? (ಸಾಧಾರಣ)

ಭಾಗ-2

ಇತಿಹಾಸ, ಅಧ್ಯಾಯ – 17,
ಅಹೋಮ್ ರಾಜಮನೆತನ, ಮೊಘಲರು ಮತ್ತು ಮರಾಠರು

ಕಲಿಕಾ ಫಲ: ಅಹೋಮ್ ರಾಜಮನೆತನ ಹಾಗೂ ಅವರ ಸಾಧನೆಗಳ ಬಗ್ಗೆ ತಿಳಿಯುವರು.ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ಮೊಘಲರ ಕೊಡುಗೆಗಳನ್ನು ಪ್ರಶಂಶಿಸುವರು.ಮರಾಠ ರಾಜ್ಯದ ಉಗಮ ಹಾಗೂ ಶಿವಾಜಿಯ ಆಡಳಿತವನ್ನು ಅರಿಯುವರು.

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1. ಅಹೋಮ್ ರಾಜವಂಶದ ಸ್ಥಾಪಕ (ಸುಲಭ)
A) ಜಯದ್ವಜ ಸಿಂಹ B) ಉದಯಾದಿತ್ಯ ಸಿಂಹ. C) ಚಕ್ರದ್ವಜ ಸಿಂಹ D) ಸುಕಫಾ
2. ದಿನ್-ಇ -ಇಲಾಹಿ ಎಂಬ ಹೊಸ ಧರ್ಮವನ್ನು ಸ್ಥಾಪಿಸಿದ ಮೊಘಲ್ ಚಕ್ರವರ್ತಿ (ಸುಲಭ)
A) ಅಕ್ಬರ್ B) ಬಾಬರ್ C) ಶಹಜಹಾನ್ D) ಜಹಾಂಗೀರ್
3. ದೆಹಲಿಯ ಐತಿಹಾಸಿಕ ಕೆಂಪು ಕೋಟೆಯನ್ನು ನಿರ್ಮಿಸಿದ ಮೊಘಲ್ ಅರಸ (ಸುಲಭ)
A) ಅಕ್ಬರ್ B) ಬಾಬರ್ C) ಶಹಜಹಾನ್ D) ಜಹಾಂಗೀರ್
4. ಶಿವಾಜಿ ಮತ್ತು ಜೈಸಿಂಗ್ ನಡುವೆ ಏರ್ಪಟ್ಟ ಒಪ್ಪಂದ (ಸಾಧಾರಣ)
A) ರಾಯಘಡ B) ಪುರಂದರಘಡ C) ಪುಣೆ D) ಸಿಂಹಘಡ
5.ಅಹೋಮ್ ಸಾಮ್ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದ ಸೇನಾಪತಿ (ಸಾಧಾರಣ)
A) ಜಯಧ್ವಜ B) ಲಚಿತ್ ಬೋರ್ಫುಕನ್ C) ಚಕ್ರಧ್ವಜ ಸಿಂಘ D) ಗದಾಧರ ಸಿಂಘ್
6. ಮೊದಲ ಪಾಣಿಪತ್ ಕದನ ನಡೆದ ವರ್ಷ (ಸಾಧಾರಣ)
A) ೧೫೨೦ B) ೧೫೨೧ C) ೧೫೨೬ D) ೧೫೩೦
7. ಹಳದಿಘಾಟ್ ಕದನದಲ್ಲಿ ಅಕ್ಬರನಿಂದ ಸೋಲಲ್ಪಟ್ಟ ಅರಸ (ಸಾಧಾರಣ)
A) ರಾಣಾ ಪ್ರತಾಪ B) ರಣಜಿತ್ ಸಿಂಗ್ C) ಜಯಸಿಂಗ್ D) ರಾಜಾ ಸಿಂಗ್
8. ಫತೇಪುರ್ ಸಿಕ್ರಿಯಲ್ಲಿ ಪಂಚಮಹಲ್ ನಿರ್ಮಿಸಿದವರು (ಸುಲಭ)
A) ಬಾಬರ್ B) ಷಹಜಹಾನ್ C) ಔರಂಗಜೇಬ್ D) ಅಕ್ಬರ್

II. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ:

9. ದಾಮ್ ಮತ್ತು ರೂಪಾಯಿ ಎಂಬ ನಾಣ್ಯವನ್ನು ಚಲಾವಣೆಗೆ ತಂದ ಅರಸ ಯಾರು? (ಸಾಧಾರಣ)
10. ಬಾಬರ್ ಯಾವ ಯುದ್ಧದಲ್ಲಿ ಇಬ್ರಾಹಿಂ ಲೋದಿಯನ್ನು ಸೋಲಿಸಿ ಭಾರತದಲ್ಲಿ ಮೊಘಲ್ ಅಧಿಕಾರವನ್ನು ಸ್ಥಾಪಿಸಿದನು? (ಸುಲಭ)
11. ಅಹೋಮಾ ರಾಜವಂಶದ ಪ್ರಮುಖ ರಾಜರನ್ನು ಹೆಸರಿಸಿ? (ಸುಲಭ)
12. ಶಿವಾಜಿಯ ಪಟ್ಟಾಭಿಷೇಕ ಸಮಾರಂಭ ಯಾವ ವರ್ಷದಲ್ಲಿ ನಡೆಯಿತು? (ಸುಲಭ)
13. ಕುದುರೆಗಳಿಗೆ ಮುದ್ರೆಹಾಕಲು ಅಕ್ಬರ್ ಆರಂಭಿಸಿದ ಪ್ರತ್ಯೇಕ ಇಲಾಖೆ ಯಾವುದು? (ಸಾಧಾರಣ)
14. ಅಕ್ಬರ್ ನ ಕಾಲದ ಪ್ರಸಿದ್ಧ ಭೂಕಂದಾಯ ಮಂತ್ರಿ ಯಾರು? (ಸುಲಭ)
15. ಮರಾಠರ ಕಾಲದಲ್ಲಿ ಸಂಗ್ರಹಿಸಲಾಗುತ್ತಿದ್ದ ಪ್ರಸಿದ್ಧ ಭೂಕಂದಾಯಗಳನ್ನು ಹೆಸರಿಸಿರಿ. (ಸಾಧಾರಣ)
16. ಅಹೋಮ ರಾಜಮನೆತನದ ರಾಜಧಾನಿ ಯಾವುದು? (ಸುಲಭ)

III. ಈ ಕೆಳಗಿನ ಪ್ರಶ್ನೆಗಳನ್ನು ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

17. "ಷಹಜಹಾನ್ ಅವಧಿಯನ್ನು 'ಮೊಘಲ್ ಕಲೆ ಮತ್ತು ವಾಸ್ತುಶಿಲ್ಪದ ಸುವರ್ಣಯುಗ' ಎಂದು ಕರೆಯಲಾಗುತ್ತದೆ. ಏಕೆ? (ಕಠಿಣ)
18. ಚಿತ್ರಕಲೆಯಲ್ಲಿ ಮೊಘಲರ ಸಾಧನೆ ಏನು? (ಸಾಧಾರಣ)

19. ಶಿವಾಜಿಯ ಕಂದಾಯ ವ್ಯವಸ್ಥೆಯನ್ನು ವಿವರಿಸಿ. (ಸಾಧಾರಣ)
20. ಸಾಹಿತ್ಯಕ್ಕೆ ಮೊಘಲರ ಕೊಡುಗೆಯನ್ನು ತಿಳಿಸಿ. (ಸಾಧಾರಣ)
21. ಮೊಘಲರ ಅರಸರನ್ನು ಅನುಕ್ರಮವಾಗಿ ಹೆಸರಿಸಿರಿ. (ಸಾಧಾರಣ)
22. ಮರಾಠ ಒಕ್ಕೂಟದಲ್ಲಿದ್ದ ನಾಯಕರುಗಳನ್ನು ಹೆಸರಿಸಿರಿ. (ಸುಲಭ)

IV. ಈ ಕೆಳಗಿನ ಪ್ರಶ್ನೆಗಳನ್ನು ಆರು ವಾಕ್ಯಗಳಲ್ಲಿ ಉತ್ತರಿಸಿ.

23. ಶೇರ್ ಷಾಹನ ಆಡಳಿತ ಪದ್ಧತಿಯೊಂದಿಗೆ ಇಂದಿನ ಆಡಳಿತ ವ್ಯವಸ್ಥೆಯನ್ನು ಹೋಲಿಸಿ ನಿಮ್ಮ ಅಭಿಪ್ರಾಯ ಬರೆಯಿರಿ. (ಕಠಿಣ)
24. 1ನೇ ಬಾಜಿ ರಾವ್ ರ ಸಾಧನೆಗಳನ್ನು ವಿವರಿಸಿ. (ಸಾಧಾರಣ)
25. ಮೊಘಲರ ವಾಸ್ತುಶಿಲ್ಪದ ಪ್ರಮುಖ ನಿರ್ಮಾಣಗಳಾವುವು? (ಸುಲಭ)

V. ಈ ಕೆಳಗಿನ ಪ್ರಶ್ನೆಗಳನ್ನು ಎಂಟು ವಾಕ್ಯಗಳಲ್ಲಿ ಉತ್ತರಿಸಿ:

26. ಮರಾಠಾ ಸಾಮ್ರಾಜ್ಯದ ಸ್ಥಾಪನೆಯು ಭಾರತೀಯ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ತೆರೆಯಿತು. ಈ ಹೇಳಿಕೆಯನ್ನು ಸಮರ್ಥಿಸಿ. (ಕಠಿಣ)
27. ಅಕ್ಬರನ ಆಡಳಿತ ವ್ಯವಸ್ಥೆಯನ್ನು ವಿವರಿಸಿ. (ಸಾಧಾರಣ)
28. ಒಂದನೇ ಮಾಧವರಾವ್ ನ ಸಾಧನೆಗಳಾವುವು? (ಸಾಧಾರಣ)

ಇತಿಹಾಸ, ಅಧ್ಯಾಯ – 18
ಭಕ್ತಿ ಪಂಥ

ಕಲಿವಿನ ಫಲ: ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಭಕ್ತಿಪಂಥದ ಬೆಳವಣಿಗೆಯನ್ನು ಸ್ಮರಿಸುವರು ಪ್ರಮುಖ ಭಕ್ತಿ ಕವಿಗಳ ಸಾಧನೆಗಳ ಪರಿಚಯ ಮಾಡಿಕೊಳ್ಳುವರು ಭಕ್ತಿ ಪಂಥದ ಪರಿಣಾಮಗಳನ್ನು ವಿಶ್ಲೇಷಿಸುವರು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1. ಚೈತನ್ಯರ ತಾತ್ವಿಕ ಚಿಂತನೆಗಳ ಸಂಗ್ರಹ (ಸುಲಭ)
A) ಚೈತನ್ಯಾಮೃತ B) ಚೈತನ್ಯದರ್ಶನ. C) ಚೈತನ್ಯ ಚರಿತಾಮೃತ D) ಚೈತನ್ಯ ಪರಿಚಯ
2. ಕಬೀರರು ಹಿಂದಿ ಭಾಷೆಯಲ್ಲಿ ರಚಿಸಿದ ಪದ್ಯಗಳನ್ನು ಹೀಗೆನ್ನುವರು. (ಸುಲಭ)
A) ದೋಹೆಗಳು B) ಗೀತಾ C) ಭಜನೆಗಳು D) ವಚನಗಳು
3. ಏಕಾಸರಣ ಧರ್ಮ ಅಥವಾ ವೈಷ್ಣವ ಚಳುವಳಿಯನ್ನು ಪ್ರಾರಂಭಿಸಿದ ಸಂತ. (ಸಾಧಾರಣ)
A) ರಮಾನಂದ B) ತುಕಾರಾಮ C) ಶಂಕರದೇವ D) ಚೈತನ್ಯ
4. ಮೀರಾಬಾಯಿ ರಚಿಸಿದ ಈ ಕೀರ್ತನೆಗಳು ಜನಪ್ರಿಯವಾದವು (ಸುಲಭ)
A) ದೋಹಗಳು B) ಗೀತಾ C) ಭಜನೆಗಳು D) ವಚನಗಳು
5.ಕರ್ನಾಟಕ ಸಂಗೀತದ ಪಿತಾಮಹ (ಸುಲಭ)
A) ಕನಕದಾಸರು B) ಪುರಂದರದಾಸರು C) ಕಬೀರದಾಸರು D) ರಮಾನಂದರು
6. "ಲಂಗರ್ ಎಂಬ ಭೋಜನ ಶಾಲೆ ಆರಂಭಿಸಿದವರು. (ಸುಲಭ)
A) ಶಂಕರದೇವ B) ಚೈತನ್ಯ C) ಗುರುನಾನಕ್ D) ರಮಾನಂದರು

II ಈ ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ:

7. ಸೂಫಿ ತತ್ವಶಾಸ್ತ್ರವನ್ನು ಎತ್ತಿಹಿಡಿಯುವ ಕಾವ್ಯ ಕೃತಿಗಳು ಯಾವುವು? (ಸಾಧಾರಣ)
8. ಮೋಹನ ತರಂಗಿಣಿಯನ್ನು ಬರೆದವರು ಯಾರು? (ಸುಲಭ)
9. "ಕಬೀರ್- ಪಂಥಿ"ಗಳು ಎಂದರೇನು? (ಸಾಧಾರಣ)
10. ಸರನಿಯ ಎಂಬ ಪದ್ಧತಿಯನ್ನು ಪ್ರಾರಂಭಿಸಿದವರು ಯಾರು? (ಸಾಧಾರಣ)
11."ಈಸಬೇಕು ಇದ್ದು ಜಯಿಸಬೇಕು, ಮಾನವ ಜನ್ಮ ದೊಡ್ಡದು" ಎಂದು ಹೇಳಿದವರು ಯಾರು? (ಸುಲಭ)
12. "ರಿವಾಯತ್ ಸಾಹಿತ್ಯದ ಹರಿಕಾರ" ಎಂದು ಯಾರನ್ನು ಕರೆಯುತ್ತಾರೆ? (ಸಾಧಾರಣ)

III. ಈ ಕೆಳಗಿನ ಪ್ರಶ್ನೆಗಳನ್ನು ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

13. ಭಕ್ತಿ ಪಂಥದ ಮೂಲ ತತ್ವಗಳು ಅಥವಾ ಬೋಧನೆಗಳು ಯಾವುವು? (ಸಾಧಾರಣ)
14. ರಮಾನಂದರ ಬೋಧನೆಗಳು ಯಾವುವು? (ಸಾಧಾರಣ)
15. ಸಿಖ್ಖರು ಯಾರು? ಅವರ ಪವಿತ್ರ ಗ್ರಂಥ ಯಾವುದು? (ಸುಲಭ)
16. ಭಕ್ತಿ ಚಳುವಳಿಯ ಪರಿಣಾಮಗಳೇನು? (ಕಠಿಣ)

IV. ಈ ಕೆಳಗಿನ ಪ್ರಶ್ನೆಗಳನ್ನು ಆರು ವಾಕ್ಯಗಳಲ್ಲಿ ಉತ್ತರಿಸಿ.

17. ಸೂಫಿ ಸಂತರು ಯಾರು? ಅವರ ಬೋಧನೆಗಳು ಯಾವುವು? (ಸಾಧಾರಣ)
18. ಚೈತನ್ಯರ ಬೋಧನೆಗಳನ್ನು ತಿಳಿಸಿ. (ಸಾಧಾರಣ)

V. ಈ ಕೆಳಗಿನ ಪ್ರಶ್ನೆಗಳನ್ನು ಎಂಟು ವಾಕ್ಯಗಳಲ್ಲಿ ಉತ್ತರಿಸಿ:

19. ಕಬೀರನ ಬೋಧನೆಗಳು ಯಾವುವು? (ಸಾಧಾರಣ)
20. ಅಸ್ಸಾಂನ ಸಾಂಸ್ಕೃತಿಕ ಮತ್ತು ಧಾರ್ಮಿಕ ಇತಿಹಾಸದಲ್ಲಿ ಶ್ರೀಮಂತ ಶಂಕರದೇವನ ಪಾತ್ರವು ಪ್ರಮುಖವಾಗಿದೆ. ವಿವರಿಸಿ (ಕಠಿಣ)

ಇತಿಹಾಸ, ಅಧ್ಯಾಯ – 19
ಯುರೋಪ್ ಮಧ್ಯಯುಗ ಹಾಗೂ ಆಧುನಿಕ ಯುಗ

ಕಲಿಕಾ ಫಲ:

- ಮಧ್ಯಯುಗದ ಊಳಿಗಮಾನ್ಯ ವ್ಯವಸ್ಥೆ ಬಗ್ಗೆ ತಿಳಿಯುವರು
- ಪುನರುಜ್ಜೀವನಕ್ಕೆ ಕಾರಣಗಳು ಮತ್ತು ಪರಿಣಾಮಗಳ ಬಗ್ಗೆ ವಿಶ್ಲೇಷಿಸುವರು
- ಭೌಗೋಳಿಕ ಅನ್ವೇಷಣೆ ಮತ್ತು ಪರಿಣಾಮಗಳನ್ನು ಅರಿಯುವರು.
- ಧಾರ್ಮಿಕ ಸುಧಾರಣೆಗೆ ಕಾರಣ ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವರು
- ಕೈಗಾರಿಕಾ ಕ್ರಾಂತಿ ಮತ್ತು ಅದರ ಪರಿಣಾಮಗಳನ್ನು ವಿವರಿಸುವರು.

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1. ನವೋದಯದ (ಪುನರುಜ್ಜೀವನದ) ಪಿತಾಮಹ (ಸುಲಭ)
A) ಫ್ರಾನ್ಸಿಸ್ಕೊ ಪೆಟ್ರಾರ್ಕ್ B) ಬೊಕಾಚಿಯೊ. C) ಚಾಸರ್ D) ಥಾಮಸ್ ಮೋರ್
2. ಮಾರ್ಟಿನ್ ಲೂಥರ್ ಅವರ ಅನುಯಾಯಿಗಳು (ಸುಲಭ)
A) ಪೂರ್ವ ಸಾಂಪ್ರದಾಯಿಕರು B) ಪ್ರೊಟೆಸ್ಟಂಟ್ C) ಕ್ಯಾಥೋಲಿಕ್ D) ಓರಿಯಂಟಲ್ ಸಾಂಪ್ರದಾಯಿಕರು
3. ಪ್ರತಿ ಸುಧಾರಣಾ ಚಳವಳಿಯ ನಾಯಕ (ಸುಲಭ)
A) ಚಾಸರ್ B) ಫ್ರಾನ್ಸಿಸ್ಕೊ ಪೆಟ್ರಾರ್ಕ್ C) ಮಾರ್ಟಿನ್ ಲೂಥರ್ D) ಇಗ್ನೇಷಿಯಸ್ ಲೊಯೊಲಾ
4. ನೂಲುವ ಸ್ಪಿನ್ನಿಂಗ್ ಜೆನ್ನಿ ಯಂತ್ರದ ಸಂಶೋಧಕ (ಸುಲಭ)
A) ಜೇಮ್ಸ್ ವ್ಯಾಟ್ B) ಕ್ರಾಂಪ್ಟನ್ C) ರಿಚರ್ಡ್ D) ಹಾಗ್ರೀವ್ಸ್
5. ಮಧ್ಯಯುಗದ ಯೂರೋಪ್‌ನಲ್ಲಿ ಭೂಮಿಯನ್ನು ಹಿಡುವಳಿಯಾಗಿ ಪಡೆದ ಅಶಕ್ತ ವ್ಯಕ್ತಿಯನ್ನು ಹೀಗೆನ್ನುವರು. (ಸಾಧಾರಣ)
A) ಸಣ್ಣ ರೈತ B) ಧಣಿ C) ಪ್ರಭು D) ಹಿಡುವಳಿದಾರ
6. ಕಾನ್ಸ್ಟಾಂಟಿನೋಪಲ್ ನಗರವನ್ನು ಟರ್ಕರು ವಶಪಡಿಸಿಕೊಂಡ ವರ್ಷ (ಸುಲಭ)
A) 1453 B) 1454 C) 1463 D) 1498

II. ಈ ಕೆಳಗಿನ ಪ್ರಶ್ನೆಗಳನ್ನು ತಲಾ ಒಂದು ವಾಕ್ಯದಲ್ಲಿ ಉತ್ತರಿಸಿ:

7. 'ಧಾರ್ಮಿಕ ಸುಧಾರಣೆಯ ಬೆಳಗಿನ ನಕ್ಷತ್ರ' ಎಂದು ಯಾರನ್ನು ಕರೆಯಲಾಗುತ್ತದೆ? (ಸುಲಭ)
8. ಯಾವ ದೇಶವನ್ನು ನವೋದಯದ ಮಾತೃಭೂಮಿ ಎಂದು ಕರೆಯಲಾಯಿತು? (ಸಾಧಾರಣ)
9. ಆಫ್ರಿಕನ್ ಖಂಡದ ದಕ್ಷಿಣ ತುದಿಯನ್ನು 'ಕೇಪ್ ಆಫ್ ಗುಡ್ ಹೋಪ್' ಎಂದು ಕರೆದವರು ಯಾರು? (ಸುಲಭ)
10. ಭಾರತಕ್ಕೆ ಸಮುದ್ರ ಮಾರ್ಗವನ್ನು ಯಾರು ಮತ್ತು ಯಾವಾಗ ಕಂಡುಹಿಡಿದರು? (ಸುಲಭ)
11. ಗ್ರಹಗಳ ಸೌರಕೇಂದ್ರೀಯ ಸಿದ್ಧಾಂತವನ್ನು ಪ್ರತಿಪಾದಿಸಿದವನು ಯಾರು? (ಸುಲಭ)
12. ಎಲ್ಲಾ ಆಕಾಶಕಾಯಗಳ ಚಲನೆಗಳು ಗುರುತ್ವಾಕರ್ಷಣೆಯ ನಿಯಂತ್ರಣಕ್ಕೆ ಒಳಪಟ್ಟಿವೆ ಎಂದು ತಿಳಿಸಿದವರು ಯಾರು? (ಸಾಧಾರಣ)
13. ಕೈಗಾರಿಕಾ ಕ್ರಾಂತಿಯೆಂದರೇನು? (ಸಾಧಾರಣ)

III. ಈ ಕೆಳಗಿನ ಪ್ರಶ್ನೆಗಳನ್ನು ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

15. ನವೋದಯ ಅವಧಿಯಲ್ಲಿನ ಸಾಹಿತ್ಯದ ಕೊಡುಗೆಯನ್ನು ವಿವರಿಸಿ? (ಸಾಧಾರಣ)
16. ಭೌಗೋಳಿಕ ಅನ್ವೇಷಣೆಯ ಪರಿಣಾಮಗಳನ್ನು ವಿವರಿಸಿ? (ಕಠಿಣ)
17. ಧಾರ್ಮಿಕ ಸುಧಾರಣಾ ಚಳವಳಿಯಲ್ಲಿ ಮಾರ್ಟಿನ್ ಲೂಥರ್ ರವರ ಪಾತ್ರವನ್ನು ವಿವರಿಸಿ. (ಸಾಧಾರಣ)
18. ಯೂರೋಪ್ ನಲ್ಲಿ ಆಧುನಿಕ ಯುಗದ ಆರಂಭಕ್ಕೆ ಕಾರಣಗಳು ಯಾವುವು? (ಕಠಿಣ)

IV. ಈ ಕೆಳಗಿನ ಪ್ರಶ್ನೆಗಳನ್ನು ಆರು ವಾಕ್ಯಗಳಲ್ಲಿ ಉತ್ತರಿಸಿ.

19. ಕೈಗಾರಿಕಾ ಕ್ರಾಂತಿಗೆ ಕಾರಣಗಳೇನು? (ಕಠಿಣ)
20. ಪುನರುಜ್ಜೀವನಕ್ಕೆ ಕಾರಣಗಳನ್ನು ವಿವರಿಸಿರಿ. (ಕಠಿಣ)
21. ಪುನರುಜ್ಜೀವನ ಕಾಲದ ವಿಜ್ಞಾನವು ಆಧುನಿಕ ವಿಜ್ಞಾನದ ಬೆಳವಣಿಗೆಗೆ ಕಾರಣವಾಯಿತು. ಸಮರ್ಥಿಸಿರಿ. (ಕಠಿಣ)

V. ಈ ಕೆಳಗಿನ ಪ್ರಶ್ನೆಗಳನ್ನು ಎಂಟು ವಾಕ್ಯಗಳಲ್ಲಿ ಉತ್ತರಿಸಿ:

22. ಧಾರ್ಮಿಕ ಸುಧಾರಣೆಗೆ ಕಾರಣಗಳನ್ನು ವಿವರಿಸಿ. (ಸಾಧಾರಣ)
23. ಕೈಗಾರಿಕಾ ಕ್ರಾಂತಿಯ ಪರಿಣಾಮಗಳನ್ನು ತಿಳಿಸಿ. (ಸಾಧಾರಣ)
24. ನವೋದಯದ ವೈಶಿಷ್ಟ್ಯಗಳು ಯಾವುವು? (ಕಠಿಣ)

ಇತಿಹಾಸ, ಅಧ್ಯಾಯ – 20
ಕ್ರಾಂತಿ ಹಾಗೂ ರಾಷ್ಟ್ರ ಪ್ರಭುತ್ವಗಳ ಉದಯ

ಕಲಿವಿನ ಫಲ: ರಾಷ್ಟ್ರೀಯ ಪ್ರಭುತ್ವಗಳ ಉದಯ ಮತ್ತು ಬೆಳವಣಿಗೆ ಬಗ್ಗೆ ಅರಿಯುವರು, ಅಮೆರಿಕ ಸ್ವಾತಂತ್ರ ಸಂಗ್ರಾಮಕ್ಕೆ ಕಾರಣಗಳು ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವರು, ಫ್ರಾನ್ಸಿನ ಮಹಾಕ್ರಾಂತಿಗೆ ಕಾರಣಗಳನ್ನು ತಿಳಿಯುವರು, ಇಟಲಿ ಮತ್ತು ಜರ್ಮನಿಯ ಏಕೀಕರಣದ ಬಗ್ಗೆ ವಿವರಿಸುವರು.

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1. 1774 ರಲ್ಲಿ 13 ವಸಾಹತುಗಳ ಪ್ರತಿನಿಧಿಗಳು ಸಭೆ ಸೇರಿದ ಸ್ಥಳ (ಸುಲಭ)
A) ನ್ಯೂಯಾರ್ಕ್ B) ವಾಷಿಂಗ್ಟನ್ C) ಚಿಕಾಗೋ D) ಫಿಲಿಡೆಲ್ಫಿಯಾ
2. 'ಯಂಗ್ ಇಟಲಿ' ಪಕ್ಷವನ್ನು ರಚಿಸಿದವರು (ಸುಲಭ)
A) ಜೋಸೆಫ್ ಮಜ್ಜಿನಿ B) ಗ್ಯಾರಿಬಾಲ್ಡಿ C) ಕೌಂಟ್ ಕ್ಯಾವೂರ್ D) ಬಿಸ್ಮಾರ್ಕ್
3. 'ಸ್ಪಿರಿಟ್ ಆಫ್ ಲಾಸ್'ನ ಲೇಖಕ (ಸಾಧಾರಣ)
A) ಮಾಂಟೆಸ್ಕ್ಯೂ B) ರೂಸೋ C) ವೋಲ್ಟೇರ್ D) ಕಾರ್ಲೈಲ್
4. 'ರಕ್ತ ಮತ್ತು ಉಕ್ಕಿನ' ತತ್ವವನ್ನು ಪ್ರತಿಪಾದಿಸಿದವರು (ಸಾಧಾರಣ)
A) ಜೋಸೆಫ್ ಮ್ಯಾಜಿನಿ B) ಗ್ಯಾರಿಬಾಲ್ಡಿ C) ಕೌಂಟ್ ಕ್ಯಾವೂರ್ D) ಬಿಸ್ಮಾರ್ಕ್
5. ಆಧುನಿಕ ಯೂರೋಪಿನಲ್ಲಿ ರಾಷ್ಟ್ರರಾಜ್ಯಗಳ ಉಗಮಕ್ಕೆ ಕಾರಣವಾದದ್ದು (ಕಠಿಣ)

A) ವ್ಯಾಪಾರದ ಬೆಳವಣಿಗೆ B) ಊಳಿಗಮಾನ್ಯ ಪದ್ಧತಿ ಅವನತಿ C) ರಾಜಪ್ರಭುತ್ವಗಳ ಉದಯ
D) ಧಾರ್ಮಿಕ ಬಿಕ್ಕಟ್ಟು

6. ಸಪ್ತವಾರ್ಷಿಕ ಕದನವು ಈ ರಾಷ್ಟ್ರಗಳ ನಡುವೆ ನಡೆಯಿತು. (ಸುಲಭ)

A) ಫ್ರಾನ್ಸ್ ಮತ್ತು ರಷ್ಯಾ B) ಫ್ರಾನ್ಸ್ ಮತ್ತು ಇಂಗ್ಲೆಂಡ್ C) ಫ್ರಾನ್ಸ್ ಮತ್ತು ಅಮೇರಿಕಾ D) ಅಮೇರಿಕಾ ಮತ್ತು ಇಂಗ್ಲೆಂಡ್

7. ಅಮೇರಿಕಾ ಸ್ವಾತಂತ್ರ್ಯ ಹೋರಾಟದಲ್ಲಿ ವಸಹಾತುಗಳ ನಾಯಕತ್ವ ವಹಿಸಿದವರು. (ಸುಲಭ)

A) ಜೇಮ್ಸ್ ಆಡಂ B) ಬೆಂಜಮಿನ್ ಫ್ರಾಂಕ್ಲಿನ್ C) ಜಾರ್ಜ್ ವಾಷಿಂಗ್ಟನ್ D) ಥಾಮಸ್ ಜಫರ್ ಸನ್

8. ಬ್ರಿಟನ್ ಈ ಒಪ್ಪಂದದಂತೆ ಅಮೇರಿಕಾದ ೧೩ ವಸಹಾತುಗಳು ಸ್ವತಂತ್ರವೆಂದು ಅಂಗೀಕರಿಸಿತು. (ಸಾಧಾರಣ)

A) ಪ್ಯಾರಿಸ್ ಒಪ್ಪಂದ B) ರೋಂ ಒಪ್ಪಂದ C) ಬರ್ಲಿನ್ ಒಪ್ಪಂದ D) ವಿಯೆನ್ನಾ ಒಪ್ಪಂದ

9. ಫ್ರಾನ್ಸಿನ ಮಹಾಕ್ರಾಂತಿಯ ಸಂದರ್ಭದಲ್ಲಿ ಸಂವಿಧಾನಾತ್ಮಕ ಸರ್ಕಾರವನ್ನು ಪ್ರತಿಪಾದಿಸಿದ ತತ್ವಜ್ಞಾನಿ (ಸಾಧಾರಣ)

A) ರೋಸೋ B) ವಾಲ್ಟೇರ್ C) ಮಾಂಟೆಸ್ಕ್ಯೂ D) ಥಾಂಸ್ ಪೈನ್

10. ಇಟಲಿಯ ಏಕೀಕರಣದ ಶಿಲ್ಪಿಗಳು (ಸಾಧಾರಣ)

A) ಬಿಸ್ಮಾರ್ಕ್, ಗ್ಯಾರಿಬಾಲ್ಡಿ, ಮ್ಯಾಜಿನಿ B) ಕೆವೂರ್, ಗ್ಯಾರಿಬಾಲ್ಡಿ, ಮ್ಯಾಜಿನಿ
C) ಕೆವೂರ್, ಬಿಸ್ಮಾರ್ಕ್, ವಿಕ್ಟರ್ ಇಮ್ಯಾನುಯೆಲ್ D) ಮ್ಯಾಜಿನಿ, ನೆಪೋಲಿಯನ್, ವಿಕ್ಟರ್ ಇಮ್ಯಾನುಯೆಲ್

II. ಈ ಕೆಳಗಿನ ಪ್ರಶ್ನೆಗಳನ್ನು ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ:

11. ಅಮೆರಿಕನ್ನರು ಯಾವ ದಿನವನ್ನು ಸ್ವಾತಂತ್ರ್ಯ ದಿನವೆಂದು ಆಚರಿಸುತ್ತಾರೆ? (ಸುಲಭ)
12. 'ಯಂಗ್ ಇಟಲಿ'ಯನ್ನು ಯಾರು ಸ್ಥಾಪಿಸಿದರು? (ಸುಲಭ)
13. ಫ್ರೆಂಚ್ ಮಹಾಕ್ರಾಂತಿಯ ಸಂದರ್ಭದಲ್ಲಿ ಫ್ರಾನ್ಸಿನ ಅರಸ ಆಗಿದ್ದವನು ಯಾರು? (ಸುಲಭ)
14. ಬಾಸ್ಟೀಲ್ ಪತನ ಯಾವ ವರ್ಷದಲ್ಲಿ ನಡೆಯಿತು? (ಸುಲಭ)
15. ಫ್ರಾನ್ಸ್ ಕ್ರಾಂತಿಗೆ ಪ್ರೇರಣೆ ನೀಡಿದ ಪ್ರಮುಖ ತತ್ವಜ್ಞಾನಿಗಳನ್ನು ಹೆಸರಿಸಿರಿ. (ಸಾಧಾರಣ)
16. ಫ್ರಾನ್ಸ್ ಮಹಾಕ್ರಾಂತಿ ಜನರಿಗೆ ನೀಡಿದ ಪ್ರಮುಖ ಆಶ್ವಾಸನೆಗಳು ಯಾವುವು? (ಕಠಿಣ)
17."ಮಾನವ ಸ್ವಾತಂತ್ರವಾಗಿ ಜನಿಸಿದ. ಆದರೆ ಎಲ್ಲೆಲ್ಲೂ ಸರಪಳಿಯಿಂದ ಬಂಧಿಸಲ್ಪಟ್ಟಿದ್ದಾನೆ." ಈ ಪ್ರಸಿದ್ಧ ಹೇಳಿಕೆಯನ್ನು ನೀಡಿದವರು ಯಾರು? (ಸಾಧಾರಣ)
18.ಕೆಂಪಂಗಿದಳವನ್ನು ಸ್ಥಾಪಿಸಿ ಇಟಲಿಯ ಏಕೀಕರಣಕ್ಕೆ ಪ್ರಯತ್ನಿಸಿದವರು ಯಾರು? ಸಾಧಾರಣ)

III. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

19. ಫ್ರೆಂಚ್ ಕ್ರಾಂತಿಯ ಪರಿಣಾಮಗಳನ್ನು ವಿಶ್ಲೇಷಿಸಿ. (ಕಠಿಣ)
21. ಇಟಲಿಯ ಏಕೀಕರಣದಲ್ಲಿ ಜೋಸೆಫ್ ಮ್ಯಾಜಿನಿಯ ಪಾತ್ರವೇನು? (ಕಠಿಣ)
22. ಫ್ರೆಂಚ್ ಚಿಂತಕರ ಪ್ರಭಾವವು ಫ್ರೆಂಚ್ ಕ್ರಾಂತಿಗೆ ಹೇಗೆ ಕಾರಣವಾಯಿತು ? (ಕಠಿಣ)
23. ಫ್ರಾನ್ಸ್‌ನ ಮಹಾಕ್ರಾಂತಿಗೆ ರಾಜಕೀಯ ಕಾರಣಗಳನ್ನು ವಿಶ್ಲೇಷಿಸಿರಿ. (ಕಠಿಣ)

IV. ಈ ಕೆಳಗಿನ ಪ್ರಶ್ನೆಗಳಿಗೆ ತಲಾ ಆರು ವಾಕ್ಯಗಳಲ್ಲಿ ಉತ್ತರಿಸಿ.

24. ಅಮೇರಿಕನ್ ಸ್ವಾತಂತ್ರ್ಯ ಸಂಗ್ರಾಮದ ಕಾರಣಗಳನ್ನು ತಿಳಿಸಿ. (ಸಾಧಾರಣ)
25. ಫ್ರೆಂಚ್ ಮಹಾಕ್ರಾಂತಿಗೆ ಆರ್ಥಿಕ ಅಂಶಗಳು ಹೇಗೆ ಕಾರಣವಾದವು? (ಕಠಿಣ)

V. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಎಂಟು ವಾಕ್ಯಗಳಲ್ಲಿ ಉತ್ತರಿಸಿ:

26. ಜರ್ಮನಿಯ ಏಕೀಕರಣದ ಶಿಲ್ಪಿ ಯಾರು? ಅವರ ಬಗ್ಗೆ ಟಿಪ್ಪಣಿ ಬರೆಯಿರಿ. (ಸಾಧಾರಣ)
27. ಇಟಲಿಯ ಏಕೀಕರಣದಲ್ಲಿ ಜೋಸೆಫ್ ಕೌಂಟ್ ಕಾವೂರ್ ಅವರ ಪಾತ್ರವೇನು? (ಸಾಧಾರಣ)

ರಾಜ್ಯಶಾಸ್ತ್ರ ಅಧ್ಯಾಯ 21.
ಚುನಾವಣಾ ವ್ಯವಸ್ಥೆ

ಕಲಿಕಾಫಲ: ಭಾರತದ ಚುನಾವಣಾ ಪ್ರಕ್ರಿಯೆ, ರಾಜಕೀಯ ಪಕ್ಷಗಳು, ಪ್ರಜಾಪ್ರಭುತ್ವದ ಅರ್ಥ ಮಹತ್ವ ತಿಳಿಯುವರು.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆ ನೀಡಿದ್ದು ಸರಿಯಾದ ಉತ್ತರ ಆರಿಸಿ ಅವುಗಳ ಕ್ರಮಾಕ್ಷರದೊಂದಿಗೆ ಸರಿಯಾದ ಉತ್ತರ ಬರೆಯಿರಿ

I

1) ಭಾರತ ಚುನಾವಣಾ ಆಯೋಗದ ರಚನೆ ಕುರಿತು ತಿಳಿಸುವ ಸಂವಿಧಾನದ ವಿಧಿ (ಸಾಧಾರಣ)
   A) 320 B) 324 C) 326 D) 330
2) ಸಾರ್ವತ್ರಿಕ ವಯಸ್ಕ ಮತದಾನದ ವಯಸ್ಸನ್ನು 21 ವರ್ಷದಿಂದ 18 ವರ್ಷಕ್ಕೆ ಇಳಿಸಲಾದ ಸಂವಿಧಾನದ ತಿದ್ದುಪಡಿ (ಸಾಧಾರಣ)
   A) 59ನೇ B) 60ನೇ C) 61ನೇ D) 62ನೇ
3) ಇವುಗಳಲ್ಲಿ ಚುನಾವಣಾ ಆಯೋಗಕ್ಕೆ ಸಂಬಂಧಿಸಿದಂತೆ ತಪ್ಪಾಗಿರುವ ಹೇಳಿಕೆ (ಕಠಿಣ)
   A) 1993ರಿಂದ ಚುನಾವಣಾ ಆಯೋಗವು ಒಬ್ಬ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರೆ ಇಬ್ಬರು ಚುನಾವಣಾ ಆಯುಕ್ತರನ್ನು ಒಳಗೊಂಡಿದೆ
   B) ಮುಖ್ಯ ಚುನಾವಣಾ ಆಯುಕ್ತರು ಹೆಚ್ಚು ಅಧಿಕಾರ ಹೊಂದಿರುತ್ತಾರೆ
   C) ಮುಖ್ಯ ಚುನಾವಣಾ ಆಯುಕ್ತರು ಹಾಗು ಇತರೆ ಆಯುಕ್ತರು ಸಮಾನ ಅಧಿಕಾರ ಹೊಂದಿರುತ್ತಾರೆ.
   D) ಆಯುಕ್ತರುಗಳು ಬಹುಮತದ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳಬೇಕು
4) ಚುನಾವಣಾ ಪ್ರಚಾರ ಕಾರ್ಯವು ಮತದಾನ ಮುಕ್ತಾಯವಾಗುವ ಅವಧಿಗಿಂತ ಇಷ್ಟು ಗಂಟೆಗಳ ಮುಂಚಿತವಾಗಿ ಮುಕ್ತಾಯವಾಗುತ್ತದೆ (ಸುಲಭ)
   A) 24 B) 36 C) 48 D) 52

II ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ.

5) ಚುನಾವಣಾ ವ್ಯವಸ್ಥೆಯಲ್ಲಿ "ಮಾದರಿ ನೀತಿ ಸಂಹಿತೆಯ ಅವಧಿ"ಎಂದರೆ ಏನು? (ಸಾಧಾರಣ)
6) ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಯಾರು ನಡೆಸುತ್ತಾರೆ? (ಸುಲಭ)
7) ನೈಜ ಮತದಾರನ ಬದಲಿಗೆ ಅನ್ಯವ್ಯಕ್ತಿಯು ಬಂದು ಮತದಾನ ಮಾಡುವುದನ್ನು ತಡೆಯಲು ಚುನಾವಣಾ ಆಯೋಗ ಕೈಗೊಂಡಿರುವ ಕ್ರಮ ತಿಳಿಸಿ. (ಸುಲಭ)
8) ಚುನಾವಣಾ ಪ್ರಕ್ರಿಯೆ ಯಾವಾಗ ಪ್ರಾರಂಭವಾಗುತ್ತದೆ? (ಸಾಧಾರಣ)
9) 'ಚುನಾವಣಾ ಪ್ರಣಾಳಿಕೆ'ಎಂದರೇನು? (ಸಾಧಾರಣ)
10) ಯಾವ ಚುನಾವಣೆಯಲ್ಲಿ ಮತದಾನಕ್ಕಾಗಿ ವಿದ್ಯುನ್ಮಾನ ಮತಯಂತ್ರಗಳ ಬದಲಾಗಿ ಮತ ಪತ್ರಗಳನ್ನು ಬಳಸಲಾಗುತ್ತಿದೆ? (ಸಾಧಾರಣ)
11) ದೃಷ್ಟಿ ವಿಕಲಚೇತನರಿಗೂ ಮತ ಚಲಾಯಿಸಲು ಅನುಕೂಲವಾಗುವಂತೆ ವಿದ್ಯುನ್ಮಾನ ಮತಯಂತ್ರಗಳ ಮೇಲೆ ಯಾವ ಲಿಪಿಯಲ್ಲಿ ಸಂಕೇತಗಳನ್ನು ಮುದ್ರಿಸಲಾಗಿರುತ್ತದೆ? (ಸಾಧಾರಣ)
12) ಸಮ್ಮಿಶ್ರ ಸರ್ಕಾರ ಎಂದರೇನು? (ಸುಲಭ)
13) ಸರ್ಕಾರ ರಚನೆ ಸಂದರ್ಭದಲ್ಲಿ 'ಬಾಹ್ಯ ಬೆಂಬಲ' ಎಂದರೇನು? (ಸಾಧಾರಣ)
14) ರಾಜಕೀಯ ಪಕ್ಷಗಳಿಗೆ ಮಾನ್ಯತೆ ನೀಡುವ ಸಂಸ್ಥೆ ಯಾವುದು? (ಸುಲಭ)
15) ದಿನಪತ್ರಿಕೆಗಳ ಗುಣಮಟ್ಟ ಹೆಚ್ಚಿಸಲು ಮತ್ತು ಪತ್ರಿಕಾ ಸ್ವಾತಂತ್ರ್ಯದ ರಕ್ಷಣೆಗಾಗಿ ಸ್ಥಾಪಿತವಾಗಿರುವ ಸಂಸ್ಥೆ ಯಾವುದು? (ಸಾಧಾರಣ)

III ಈ ಪ್ರಶ್ನೆಗಳನ್ನು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

16) ಪ್ರಸ್ತುತ ಮತದಾರರ ಪಟ್ಟಿಗೆ ಹೆಸರನ್ನು ಸೇರ್ಪಡೆ ಮಾಡಲು ನಿಗದಿಪಡಿಸಿದ ದಿನಾಂಕಗಳನ್ನು ತಿಳಿಸಿ. (ಸಾಧಾರಣ)

17) "ಪ್ರಜಾಪ್ರಭುತ್ವ ಮಾದರಿಯಲ್ಲಿ ರಾಜಕೀಯ ಪಕ್ಷಗಳು ಅನಿವಾರ್ಯ" ಸಮರ್ಥಿಸಿ (ಕಠಿಣ)

18) ಮತಗಟ್ಟೆಯಲ್ಲಿ ಮತದಾರ ತನ್ನ ಗುರುತಿಗಾಗಿ ತೋರಿಸಬಹುದಾದ ನಾಲ್ಕು ದಾಖಲೆಗಳನ್ನು ತಿಳಿಸಿ. (ಸುಲಭ)

19) 'ಮತ ಪತ್ರ'ದಲ್ಲಿ ಯಾವ ಯಾವ ಅಂಶಗಳನ್ನು ಮುದ್ರಿಸಲಾಗಿರುತ್ತದೆ? (ಸಾಧಾರಣ)

20) 'ಸಾರ್ವಜನಿಕ ಅಭಿಪ್ರಾಯ'ವನ್ನು ಹಂಚಿಕೊಳ್ಳಲು ಇರುವ ಮಾಧ್ಯಮಗಳಾವುವು? (ಸುಲಭ)

IV ಈ ಪ್ರಶ್ನೆಗಳನ್ನು ಆರು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ.

21) ಭಾರತೀಯ ಚುನಾವಣಾ ಆಯೋಗದ ರಚನೆಯನ್ನು ವಿವರಿಸಿ. (ಸಾಧಾರಣ)

22) "ಭಾರತದಲ್ಲಿ ಚುನಾವಣಾ ಪ್ರಕ್ರಿಯೆ ಹಲವು ಹಂತಗಳಿಂದ ಕೂಡಿದೆ" ಸ್ಪಷ್ಟೀಕರಿಸಿ **(ಕಠಿಣ)**

23) ಯಾವುದಾದರೂ ಆರು ರಾಷ್ಟ್ರೀಯ ಪಕ್ಷಗಳನ್ನು ಹೆಸರಿಸಿ. (ಸುಲಭ)

V ಈ ಪ್ರಶ್ನೆಯನ್ನು ಎಂಟು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ.

24) ಚುನಾವಣಾ ಕ್ಷೇತ್ರ ಕುರಿತು ಸಂಕ್ಷಿಪ್ತವಾಗಿ ವಿವರಿಸಿ. (ಕಠಿಣ)

ರಾಜ್ಯಶಾಸ್ತ್ರ ಅಧ್ಯಾಯ 22.

ದೇಶದ ರಕ್ಷಣೆ

ಕಲಿಕಾಫಲ: ನಮ್ಮ ದೇಶದ ರಕ್ಷಣಾ ಪಡೆಗಳ ವಿಧಗಳು, ಸ್ವರೂಪ ಮತ್ತು ಕಾರ್ಯಗಳನ್ನು ವಿವರಿಸುವರು.

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆ ನೀಡಿದ್ದು ಸರಿಯಾದ ಉತ್ತರ ಆರಿಸಿ ಅವುಗಳ ಕ್ರಮಾಕ್ಷರದೊಂದಿಗೆ ಸರಿಯಾದ ಉತ್ತರ ಬರೆಯಿರಿ**

1) 1. ರಕ್ಷಣಾ ಸಚಿವಾಲಯದ ಪ್ರಧಾನ ಕಛೇರಿ ಇರುವ ಸ್ಥಳ (ಸುಲಭ)
   A) ಬೆಂಗಳೂರು B) ಮುಂಬೈ C) ಚಾಂದಿ ಮಂದಿರ್ D) ನವದೆಹಲಿ
2) ಗಡಿ ಭದ್ರತಾ ಪಡೆಯನ್ನು ಸ್ಥಾಪಿಸಿದ ವರ್ಷ (ಸುಲಭ)
   A) 1920 B) 1946 C) 1965 D) 1978
3) ನ್ಯಾಷನಲ್ ಡಿಫೆನ್ಸ್ ಅಕಾಡಮಿ ಇರುವ ಸ್ಥಳ (ಸಾಧಾರಣ)
   A) ಖಡಕ್ ವಾಸ್ಲ B) ದೆಹಲಿ C) ಚೆನ್ನೈ D) ಸಿಕಂದರಾಬಾದ್
4) ನೌಕಾಪಡೆಯ ಮುಖ್ಯಸ್ಥರನ್ನು ಹೀಗೆನ್ನುವರು (ಸುಲಭ)
   A) ಜನರಲ್ B) ಏರ್ ಚೀಫ್ ಮಾರ್ಷಲ್ C) ಅಡ್ಮಿರಲ್ D) ಸಿಐಡಿಎಸ್
5) ಪ್ರಾದೇಶಿಕ ಸೇನಾ ದಿನವಾಗಿ ಆಚರಿಸುವುದು (ಸಾಧಾರಣ)
   A) ಅಕ್ಟೋಬರ್ 9 B) ಜನವರಿ26 C) ಅಕ್ಟೋಬರ್ 8 D) ಡಿಸೆಂಬರ್4

II. ಈ ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ

6) ಕಾರವಾರದ ಬಳಿ ಇರುವ ನೌಕಾ ನೆಲೆಯನ್ನು ಏನೆಂದು ಕರೆಯಲಾಗುತ್ತದೆ ? (ಸುಲಭ)
7) "ಸೇವಾಪರಮೋಧರ್ಮ" ಎಂಬ ಧ್ಯೇಯ ವಾಕ್ಯ ಹೊಂದಿದ ಭಾರತದ ಸೇನಾ ಪಡೆ ಯಾವುದು ? (ಕಠಿಣ)
8) ಭೂಸೇನೆಯ ತರಬೇತಿ ಕಮಾಂಡ್ ಎಲ್ಲಿದೆ? (ಸುಲಭ)
9) ಭಾರತೀಯ ಕರಾವಳಿ ಪಡೆಯ ಪ್ರಧಾನ ಕಛೇರಿ ಎಲ್ಲಿದೆ ? (ಸುಲಭ)
10) ಭಾರತೀಯ ಕರಾವಳಿ ಪಡೆಯ ಧ್ಯೇಯ ವಾಕ್ಯವೇನು ? (ಸಾಧಾರಣ)
11) ಯುದ್ಧ ಕಾಲದಲ್ಲಿ ಭಾರತೀಯ ಸೈನಕರಿಗೆ ನೀಡುವ ಪ್ರಶಸ್ತಿಗಳನ್ನು ಹೆಸರಿಸಿ (ಸಾಧಾರಣ)

III. ಈ ಕೆಳಗಿನ ಪ್ರಶ್ನೆಗಳನ್ನು ಎರಡು-ನಾಲ್ಕು ವಾಕ್ಯದಲ್ಲಿ ಉತ್ತರಿಸಿ

12) ಭೂ ಸೇನೆಯ ಕಾರ್ಯಗಳಾವುವು ? (ಸಾಧಾರಣ)
13) ನಮ್ಮ ರಕ್ಷಣಾ ಸಚಿವಾಲಯದ ಐದು ಇಲಾಖೆಗಳನ್ನು ತಿಳಿಸಿ (ಸುಲಭ)
14) ಸೇನಾ ನೇಮಕಾತಿಗೆ ಇರಬೇಕಾದ ಅರ್ಹತೆಗಳನ್ನು ವಿವರಿಸಿ (ಸಾಧಾರಣ)

15) ನಮ್ಮ ರಕ್ಷಣಾ ಪಡೆಗಳು ಅಂತಾರಾಷ್ಟ್ರೀಯ ಶಾಂತಿ ಕಾಪಾಡುವಲ್ಲಿ ಹೇಗೆ ನೆರವಾಗಿವೆ ? (ಕಠಿಣ)
16) ಎನ್.ಸಿ.ಸಿ ಕೆಡಿಟ್ ಗಳಿಗೆ ಸಿಗುವ ಸೌಲಭ್ಯಗಳಾವುವು ? (ಸಾಧಾರಣ)
17) ಭಾರತೀಯ ವಾಯುಪಡೆಯ ಕಾರ್ಯಾತ್ಮಕ ಕಮಾಂಡುಗಳನ್ನು ಹೆಸರಿಸಿ (ಸಾಧಾರಣ)

IV. ಈ ಕೆಳಗಿನ ಪ್ರಶ್ನೆಗಳನ್ನು ಆರು ವಾಕ್ಯದಲ್ಲಿ ಉತ್ತರಿಸಿ

18) ಭಾರತದ ವಾಯುಪಡೆಯ ತರಬೇತಿ ಕೇಂದ್ರಗಳನ್ನು ತಿಳಿಸಿ (ಸಾಧಾರಣ)
19) "ಭಾರತದ ಎರಡನೇ ಸಾಲಿನ ರಕ್ಷಣಾ ವ್ಯವಸ್ಥೆಯನ್ನು ವಿವಿಧ ಘಟಕಗಳಾಗಿ ವಿಂಗಡಿಸಲಾಗಿದೆ" ಸಮರ್ಥಿಸಿ (ಕಠಿಣ)

V. ಈ ಕೆಳಗಿನ ಪ್ರಶ್ನೆಗಳನ್ನು ಎಂಟು ವಾಕ್ಯದಲ್ಲಿ ಉತ್ತರಿಸಿ

20) "ಭಾರತದ ರೆಡ್ ಕ್ರಾಸ್ ಸಂಸ್ಥೆಯು ಕೆಲ ಮೂಲಭೂತ ತತ್ವಗಳ ಮೇಲೆ ಕಾರ್ಯ ನಿರ್ವಹಿಸುತ್ತಿದೆ" ಸ್ಪಷ್ಟೀಕರಿಸಿ (ಕಠಿಣ)
21) ಭಾರತೀಯ ಭೂಸೇನೆಯ ಕಮಾಂಡ್ ಗಳನ್ನು ಹೆಸರಿಸಿ (ಸಾಧಾರಣ)

ರಾಜ್ಯಶಾಸ್ತ್ರ ಅಧ್ಯಾಯ- 23.

ರಾಷ್ಟ್ರೀಯ ಭಾವೈಕ್ಯತೆ

ಕಲಿಕಾಫಲ: ಸಂವಿಧಾನದಲ್ಲಿ ಪ್ರಸ್ತಾಪಿಸಿರುವ ಮೌಲ್ಯಗಳು ಹಾಗೂ ರಾಷ್ಟ್ರೀಯ ಭಾವೈಕ್ಯತೆಯ ಅಂಶಗಳನ್ನು ಅರಿಯುವರು ಮತ್ತು ಅಳವಡಿಸಿಕೊಳ್ಳುವರು.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆ ನೀಡಿದ್ದು ಸರಿಯಾದ ಉತ್ತರ ಆರಿಸಿ ಅವುಗಳ ಕ್ರಮಾಕ್ಷರದೊಂದಿಗೆ ಸರಿಯಾದ ಉತ್ತರ ಬರೆಯಿರಿ

1) ಭಾರತದ ರಾಷ್ಟ್ರ ಪಕ್ಷಿ (ಸುಲಭ)
A) ನವಿಲು B) ಪಾರಿವಾಳ C) ಕೋಗಿಲೆ D). ಗಿಳಿ
2) ಕೆಳಗಿನವುಗಳಲ್ಲಿ ಭಾರತದ ರಾಷ್ಟ್ರೀಯ ಹಬ್ಬವಾಗಿ ಅಚರಿಸಲ್ಪಡುವುದು (ಸುಲಭ)
A) ಗಣರಾಜ್ಯೋತ್ಸವ B) ಕನ್ನಡ ರಾಜ್ಯೋತ್ಸವ C) ವಾಲ್ಮೀಕಿ ಜಯಂತಿ D). ಶಿಕ್ಷಕರ ದಿನಾಚರಣೆ

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

3) ಭಾರತದ ರಾಷ್ಟ್ರೀಯ ಪ್ರಾಣಿ ಯಾವುದು ? (ಸುಲಭ)
4) ರಾಷ್ಟ್ರೀಯ ಭಾವೈಕ್ಯತೆ ಎಂದರೇನು ? (ಸುಲಭ)
5) ಭಾರತ ಸಂವಿಧಾನದ 8ನೇ ಅನುಸೂಚಿಯ ಮಹತ್ವವೇನು ? (ಕಠಿಣ)
6) ಭಾರತದ ರಾಷ್ಟ್ರೀಯ ಹಬ್ಬಗಳನ್ನು ಹೆಸರಿಸಿ (ಸುಲಭ)

III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ನಾಲ್ಕು ವಾಕ್ಯದಲ್ಲಿ ಉತ್ತರಿಸಿ

7) ರಾಷ್ಟ್ರೀಯತೆಯನ್ನು ನಿರ್ಧರಿಸುವ ಅಂಶಗಳಾವುವು ? (ಸಾಧಾರಣ)
8) ಜಾತ್ಯಾತೀತತೆಯು ರಾಷ್ಟ್ರೀಯ ಐಕ್ಯತೆಯನ್ನು ಹೇಗೆ ಪ್ರೋತ್ಸಾಹಿಸುತ್ತದೆ ? (ಕಠಿಣ)
9) "ಭಾರತವು ವೈವಿಧ್ಯತೆಯ ನಡುವೆಯೂ ಐಕ್ಯತೆಯ ಮೂಲ ಬುನಾದಿ ಹೊಂದಿದೆ" ಸ್ಪಷ್ಟೀಕರಿಸಿ (ಕಠಿಣ)

IV. ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯದಲ್ಲಿ ಉತ್ತರಿಸಿ

10) ಭಾರತದ ವಿವಿಧ ಭಾಗಗಳ ನಡುವೆ ಪರಸ್ಪರ ಅನ್ಯೋನ್ಯತೆ ಇದೆ ಎಂದು ಹೇಗೆ ಹೇಳುವಿರಿ (ಕಠಿಣ)
11) "ಭಾರತದಲ್ಲಿ ರಾಷ್ಟ್ರೀಯ ಐಕ್ಯತೆಯನ್ನು ಹಲವಾರು ಅಂಶಗಳು ವೃದ್ಧಿಸುತ್ತಿವೆ " ದೃಢೀಕರಿಸಿ (ಕಠಿಣ)

V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯದಲ್ಲಿ ಉತ್ತರಿಸಿ

12) ಭಾರತದಲ್ಲಿ ವೈವಿದ್ಯತೆಯಲ್ಲಿ ಐಕ್ಯತೆಯನ್ನು ಮೂಡಿಸುವ ಅಂಶಗಳಾವುವು ? (ಸಾಧಾರಣ)

ರಾಜ್ಯಶಾಸ್ತ್ರಅಧ್ಯಾಯ 24.

ಅಂತರಾಷ್ಟ್ರೀಯ ಸಂಬಂಧಗಳ ಅಧ್ಯಯನ ಒಂದು ಪರಿಚಯ

ಕಲಿಕಾಫಲ: ಅಂತರಾಷ್ಟ್ರೀಯ ಸಂಬಂಧ ಹಾಗೂ ಸಹಕಾರದ ಮಹತ್ವ ಮತ್ತು ಅನಿವಾರ್ಯತೆಯನ್ನು ಅರಿಯುವರು.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆ ನೀಡಿದ್ದು ಸರಿಯಾದ ಉತ್ತರ ಆರಿಸಿ ಅವುಗಳ ಕ್ರಮಾಕ್ಷರದೊಂದಿಗೆ ಸರಿಯಾದ ಉತ್ತರ ಬರೆಯಿರಿ

1) 'ಇಂಟರ್ ನ್ಯಾಶನಲ್ ರಿಲೇಷನ್ಸ್' ಎಂಬ ಪದವನ್ನು ಮೊದಲು ಬಳಸಿದವರು (ಸಾಧಾರಣ)
A) ಕ್ವಿನ್ಸೀ ರೈಟ್ B) ಜೆರಮಿ ಬೆಂಥ್ಯಾಮ್ C) ಹ್ಯಾನ್ಸ ಜೆ ಮಾರ್ಗಂಥೋ D) ವುಡ್ರೋ ವಿಲ್ಸನ್

2) ಅಂತರಾಷ್ಟ್ರೀಯ ಸಂಬಂಧಗಳ ವ್ಯವಸ್ಥಿತ ಅಧ್ಯಯನ ಪ್ರಾರಂಭವಾಗಿದ್ದು (ಸಾಧಾರಣ)

A) ವುಡ್ರೋ ವಿಲ್ಸನ್ ಪೀಠದ ಸ್ಥಾಪನೆಯೊಂದಿಗೆ B) ಸ್ಕೂಲ್ ಆಫ್ ಫಾರಿನ್ ಸರ್ವೀಸ್ ಪ್ರಾರಂಭದ ನಂತರ
C) ವಿಶ್ವಸಂಸ್ಥೆಯ ಸ್ಥಾಪನೆಯೊಂದಿಗೆ D) ಅಂತರ್ ಸರ್ಕಾರದ ಸಂಘಟನೆಗಳ ಪ್ರಾರಂಭದೊಂದಿಗೆ

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

3) ಹ್ಯಾನ್ಸ ಜೆ ಮಾರ್ಗಂಥೋ ಪ್ರಕಾರ ಅಂತರಾಷ್ಟ್ರೀಯ ಸಂಬಂಧ ಎಂದರೇನು ? (ಕಠಿಣ)
4) ಕ್ವಿನ್ಸೀ ರೈಟ್ ರವರ ಪ್ರಕಾರ ಅಂತರರಾಷ್ಟ್ರೀಯ ಸಂಬಂಧ ಎಂದರೇನು? (ಕಠಿಣ)
5) ಸ್ಕೂಲ್ ಆಫ್ ಫಾರಿನ್ ಸರ್ವೀಸ್ ಅನ್ನು ಏಕೆ ಪ್ರಾರಂಭಿಸಲಾಯಿತು ? (ಸಾಧಾರಣ)
6) ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಪ್ರಾಯೋಗಿಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳನ್ನು ಬಳಸಲು ಕಾರಣವೇನು? (ಕಠಿಣ)
7) 'ಪ್ರಿನಿ ಪಲ್ಸ್ ಆಫ್ ಮಾರಲ್ ಅಂಡ್ ಲೆಜಿಸ್ಲೇಶನ್' ಕೃತಿಯನ್ನು ಬರೆದವರು ಯಾರು ? (ಸಾಧಾರಣ)
8) ವುಡ್ರೋ ವಿಲ್ಸನ್ ಪೀಠ ಯಾವ ವಿಶ್ವವಿದ್ಯಾಲಯದಲ್ಲಿ ಪ್ರಾರಂಭವಾಯಿತು ? (ಸುಲಭ)
9) ವುಡ್ರೋ ವಿಲ್ಸನ್ ಪೀಠದ ಮೊದಲ ಅಧ್ಯಕ್ಷರು ಯಾರು ? (ಸುಲಭ)

III ಈ ಕೆಳಗಿನ ಪ್ರಶ್ನೆಗಳನ್ನು ಎರಡು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

10) ಅಂತರಾಷ್ಟ್ರೀಯ ಸಂಬಂಧಗಳ ಅಧ್ಯಯನದಲ್ಲಿ ಅಧಿಕೃತ ಮತ್ತು ಅಧಿಕೃತವಲ್ಲದ ಸಂಸ್ಥೆಗಳ ಪಾತ್ರವೇನು ? (ಕಠಿಣ)
11) ವಿದೇಶಾಂಗ ನೀತಿಯು ಅಂತರಾಷ್ಟ್ರೀಯ ಸಂಬಂಧಗಳ ಅವಿಭಾಜ್ಯ ಭಾಗವಾಗಿದೆ ಹೇಗೆ ? (ಕಠಿಣ)
12) "ಅಂತರಾಷ್ಟ್ರೀಯ ಸಂಬಂಧಗಳ ಅಧ್ಯಯನ ವಿಶ್ವ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ" ವಿಮರ್ಷಿಸಿ. (ಕಠಿಣ)

IV ಈ ಕೆಳಗಿನ ಪ್ರಶ್ನೆಗಳನ್ನು ಆರು ವಾಕ್ಯಗಳಲ್ಲಿ ಉತ್ತರಿಸಿ

13) "ಅಂತರಾಷ್ಟ್ರೀಯ ಸಂಬಂಧಗಳಿಗೆ ತನ್ನದೇ ಆದ ವ್ಯಾಪ್ತಿ ಇದೆ" ಸಮರ್ಥಿಸಿ. (ಕಠಿಣ)
14) ಆಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನವು ವಿಶ್ವ ಎದುರಿಸುತ್ತಿರುವ ಪ್ರಮುಖ ಸವಾಲುಗಳ ಕುರಿತು ಜ್ಞಾನ ನೀಡುತ್ತದೆ. ಹೇಗೆ? (ಕಠಿಣ)
15) ಅಂತರಾಷ್ಟ್ರೀಯ ಸಂಬಂಧಗಳ ಅಧ್ಯಯನದ ಮಹತ್ವವನ್ನು ವಿವರಿಸಿ (ಸಾಧಾರಣ)

V ಈ ಕೆಳಗಿನ ಪ್ರಶ್ನೆಗಳನ್ನು ಎಂಟು ವಾಕ್ಯಗಳಲ್ಲಿ ಉತ್ತರಿಸಿ

16) ಅಂತರಾಷ್ಟ್ರೀಯ ಸಂಬಂಧಗಳ ಸ್ವರೂಪವನ್ನು ವಿವರಿಸಿ. (ಸಾಧಾರಣ)

ಸಮಾಜಶಾಸ್ತ್ರ ಅಧ್ಯಾಯ 25
ಸಾಮಾಜೀಕರಣ ಹಾಗೂ ಕುಟುಂಬದ ಸಂಬಂಧಗಳು

ಕಲಿಕಾ ಫಲ: ಸಾಮಾಜೀಕರಣದ ಅರ್ಥ ಹಾಗೂ ಅದರ ಮಹತ್ವ ತಿಳಿಯುವರು
• ವ್ಯಕ್ತಿಯ ಮೇಲೆ ಸಾಮಾಜೀಕರಣದ ಪ್ರಭಾವವನ್ನು ಅರ್ಥೈಸಿಕೊಳ್ಳುವರು
• ಸಾಮಾಜೀಕರಣದ ನಿಯೋಗಿಗಳನ್ನು ಪಟ್ಟಿಮಾಡುವರು

I ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1)ಮಾನವನು ಸಾಮಾಜಿಕ ವ್ಯಕ್ತಿಯಾಗಿ ರೂಪಗೊಳ್ಳುವ ಪ್ರಕ್ರಿಯೆ (ಸುಲಭ)
A)ವಿಕಾಸ B)ಸಾಮಾಜೀಕರಣ C)ಬೆಳವಣಿಗೆ D)ನಾಗರೀಕರಣ

2)ಸಾಮಾಜೀಕರಣ ಪ್ರಕ್ರಿಯೆ ಮೊದಲು ಇಲ್ಲಿ ಪ್ರಾರಂಭವಾಗುವುದು (ಸುಲಭ)
A)ನಗರ B)ಶಾಲೆ C)ಕುಟುಂಬ D)ಗ್ರಾಮ

3)ಮಗುವಿನ ಮೊದಲ ಗುರು (ಸುಲಭ)
A) ಶಿಕ್ಷಕರು B)ಹಿರಿಯ ಸಹೋದರ C) ತಂದೆ D)ತಾಯಿ

4)ಸಾಮಾಜೀಕರಣವು ಸಾರ್ವತ್ರಿಕ ಪ್ರಕ್ರಿಯೆಯಾಗಿದ್ದು ಇದು ಸಂಭವಿಸುವುದು (ಸಾಧಾರಣ)
A)ಬಾಲ್ಯದಲ್ಲಿ ಮಾತ್ರ B)ಶಾಲೆಯಲ್ಲಿ ಮಾತ್ರ C)ಮದುವೆಯ ನಂತರ D)ವ್ಯಕ್ತಿಯ ಜೀವನ ಪರ್ಯಂತ

5)ಸಾಮಾಜೀಕರಣದ ಮೇಲೆ ಪ್ರಭಾವ ಬೀರುವ ಸಮೂಹ ಮಾಧ್ಯಮದ ಸಾಧನವೆಂದರೆ (ಸುಲಭ)
A)ತರಗತಿ B)ಸ್ನೇಹಿತರ ಗುಂಪು C)ದೂರದರ್ಶನ D)ಕುಟುಂಬದ ಸದಸ್ಯರು

6)ಸಾಮಾಜೀಕರಣದಲ್ಲಿ ಶಾಲೆಯ ಪ್ರಭಾವವು ಈ ರೀತಿಯಲ್ಲಿ ಇರುತ್ತದೆ (ಸಾಧಾರಣ)
A)ಅಂಕ ಮತ್ತು ಶ್ರೇಣಿಗಳನ್ನು ಮಾತ್ರ ನೀಡುತ್ತದೆ
B)ಸಾಂಪ್ರದಾಯಿಕ ಕಸುಬುಗಳನ್ನು ಉತ್ತೇಜಿಸುತ್ತದೆ
C)ವಿದ್ಯಾರ್ಥಿಗಳನ್ನು ಸಂಸ್ಕೃತಿಯಿಂದ ಬೇರ್ಪಡಿಸುತ್ತದೆ
D)ವಿದ್ಯಾರ್ಥಿಗಳ ವರ್ತನೆ, ಜ್ಞಾನ ಮತ್ತು ಮನೋಭಾವನೆಗಳನ್ನು ಬದಲಾಯಿಸುತ್ತದೆ

7)ಸಾಮಾಜೀಕರಣ ಪ್ರಕ್ರಿಯೆಯಲ್ಲಿ ನೆರೆಹೊರೆಯವರ ಪ್ರಭಾವ ಹೆಚ್ಚಾಗಿ ಕಂಡುಬರುವುದು (ಸುಉಭ)
A)ಗ್ರಾಮದಲ್ಲಿ B) ನಗರದಲ್ಲಿ C)ಶಾಲೆಯಲ್ಲಿ D)ಕಚೇರಿಯಲ್ಲಿ

8)ಗಂಡು ಮತ್ತು ಹೆಣ್ಣುಗಳ ನಡುವಿನ ತಾರತಮ್ಯವನ್ನು ಹೀಗೆನ್ನುವರು (ಸಾಧಾರಣ)
A)ಮಾನವ ತಾರತಮ್ಯ B)ಲಿಂಗ ತಾರತಮ್ಯ C)ಜಾತಿ ತಾರತಮ್ಯ D)ವರ್ಗ ತಾರತಮ್ಯ

9)ಲಿಂಗ ತಾರತಮ್ಯವನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮವೆಂದರೆ (ಕಠಿಣ)
A)ಮಹಿಳೆಯರನ್ನು ಮನೆ ಕೆಲಸಕ್ಕೆ ಸೀಮಿತಗೊಳಿಸುವುದು
B)ಸಾಂಪ್ರದಾಯಕ ಕುಟುಂಬದ ನಿಯಮಗಳನ್ನು ಉತ್ತೇಜಿಸುವುದು
C)ಪುರುಷರಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡುವುದು
D)ಮಹಿಳೆಯರಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶ ಕಲ್ಪಿಸುವುದು

10)ಇತ್ತೀಚಿನ ದಿನಗಳಲ್ಲಿ ಯುವ ಜನಾಂಗವು ಸಂಸ್ಕೃತಿ ಹಾಗೂ ಮೌಲ್ಯಗಳಿಂದ ದೂರ ಸರಿಯುತ್ತಿರಲು ಮುಖ್ಯ ಕಾರಣ (ಕಠಿಣ)
A)ಶಿಕ್ಷಣ B)ವೈಜ್ಞಾನಿಕ ದೃಷ್ಟಿಕೋನ C)ಕೈಗಾರಿಕೀಕರಣ D)ಆಧುನಿಕತೆಯ ಪ್ರಭಾವ

II. ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ.

11)ಸಾಮಾಜಿಕರಣವನ್ನು ಅರ್ಥೈಸಿ. (ಸಾಧಾರಣ)

12)ಸಾಮಾಜಿಕರಣವು ಸಾರ್ವತ್ರಿಕ ಪ್ರಕ್ರಿಯೆ ಎಂದು ಹೇಗೆ ಹೇಳುವಿರಿ. (ಕಠಿಣ)
13)ಸಾಮಾಜಿಕರಣದ ಎರಡು ಪ್ರಮುಖ ಮಾಧ್ಯಮಗಳು ಯಾವುವು? (ಸುಲಭ)
14)ಶ್ರಮ ವಿಭಜನೆ ಎಂದರೇನು? (ಸಾಧಾರಣ)
15)ಸಾಮಾಜಿಕರಣದಲ್ಲಿ ಲಿಂಗ ಸಮಾನತೆಗೆ ಸಹಾಯಕವಾಗುವ ಆರ್ಥಿಕ ಅಂಶ ಯಾವುದು? (ಕಠಿಣ)
16)ಸಮೂಹ ಮಾಧ್ಯಮಗಳನ್ನು ಹೆಸರಿಸಿ. (ಸುಲಭ)
17) ವ್ಯತ್ಯಾಸ ತೋರುವ ಸಾಮಾಜೀಕರಣ ಎಂದರೇನು? (ಕಠಿಣ)

III. ಈ ಪ್ರಶ್ನೆಗಳನ್ನು ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

18)ಸಾಮಾಜೀಕರಣದ ಪ್ರಮುಖ ನಿಯೋಗಿಗಳು ಯಾವುವು? (ಸುಲಭ)
19)ಧರ್ಮವು ಸಾಮಾಜೀಕರಣದ ಪ್ರಮುಖ ನಿಯೋಗಿಯಾಗಿದೆ ಹೇಗೆ? (ಕಠಿಣ)
20) ಸಾಮಾ ೀಕರಣದಲ್ಲಿ ಸಮವಯಸ್ಕ ಗುಂಪಿನ ಪ್ರಭಾವವೇನು? (ಸಾಧಾರಣ)
21)ನೈತಿಕ ಶಿಕ್ಷಣವು ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಪ್ರಮುಖವಾಗಿದೆ ಹೇಗೆ? (ಕಠಿಣ)
22)ಇತ್ತೀಚಿನ ದಿನಗಳಲ್ಲಿ ಸ್ತ್ರೀಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿರುವ ಕ್ಷೇತ್ರಗಳನ್ನು ಹೆಸರಿಸಿ. (ಸಾಧಾರಣ)
23)ಲಿಂಗ ಸಮಾನತೆಯನ್ನು ತರುವಲ್ಲಿ ಸಹಾಯಕವಾದ ಅಂಶಗಳನ್ನು ಪಟ್ಟಿ ಮಾಡಿ. (ಸಾಧಾರಣ)

IV. ಈ ಪ್ರಶ್ನೆಗಳನ್ನು ಆರು ವಾಕ್ಯಗಳಲ್ಲಿ ಉತ್ತರಿಸಿ.

24)ಸಾಮಾಜೀಕರಣವನ್ನು ವ್ಯಕ್ತಿಯ ಜೀವನದ ವಿಶಿಷ್ಟ ಲಕ್ಷಣವೆಂದು ಪರಿಗಣಿಸಲಾಗಿದೆ ಏಕೆ? (ಕಠಿಣ)
25)ಸಾಮಾಜೀಕರಣದಲ್ಲಿ ಕುಟುಂಬದ ಪಾತ್ರವೇನು? (ಸಾಧಾರಣ)
26) ಸಾಮಾಜೀಕರಣವನ್ನು ನೆರೆಹೊರೆಯು ಹೇಗೆ ಪ್ರಭಾವಿಸುತ್ತದೆ? (ಕಠಿಣ)

V. ಈ ಪ್ರಶ್ನೆಗಳನ್ನು ಎಂಟು ವಾಕ್ಯಗಳಲ್ಲಿ ಉತ್ತರಿಸಿ.

27)ಸಾಮಾಜೀಕರಣದ ಪ್ರಮುಖ ಕಾರ್ಯಗಳು ಯಾವುವು? (ಸಾಧಾರಣ)
28) ಸಾಮಾಜೀಕರಣದಲ್ಲಿ ಶಾಲೆಯ ಪಾತ್ರವನ್ನು ವಿವರಿಸಿ. (ಸಾಧಾರಣ)

ಸಮಾಜಶಾಸ್ತ್ರ ಅಧ್ಯಾಯ 26.
ಸಮುದಾಯ

ಕಲಿಕಾ ಫಲ: ಸಮುದಾಯದ ಪದದ ಅರ್ಥವನ್ನು ತಿಳಿಯುವರು
• ನಗರ - ಪದದ ಅರ್ಥ ಹಾಗೂ ನಗರ ಸಮುದಾಯದ ಲಕ್ಷಣಗಳನ್ನು ವಿವರಿಸುವರು
• ಕೈಗಾರಿಕೀಕರಣ - ನಗರೀಕರಣದ ಸಂಬಂಧವನ್ನು ತುಲನೆಮಾಡುವರು.
• ಗ್ರಾಮೀಣ ಹಾಗೂ ಆದಿವಾಸಿ ಸಮುದಾಯದ ಲಕ್ಷಣಗಳನ್ನು ವರ್ಗೀಕರಿಸುವರು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1) ಸಮುದಾಯವೆಂದರೆ (ಸಾಧಾರಣ)
A)ಅನಿರೀಕ್ಷಿತವಾಗಿ ಸೇರಿದ ಜನರ ಗುಂಪು
B)ಸಾಮಾನ್ಯ ಗುರುತು ಮತ್ತು ಮೌಲ್ಯಗಳನ್ನು ಹೊಂದಿರುವ ಜನರ ಗುಂಪು
C)ದೊಂಬಿಯಲ್ಲಿ ತೊಡಗಿರುವ ಜನರು
D) ಅಲೆಮಾರಿ ಜೀವನ ನಡೆಸುವವರು

2) ಕೈಗಾರಿಕೀಕರಣವು ಇದನ್ನು ಒಳಗೊಂಡಿದೆ (ಕಠಿಣ)
A)ಕೃಷಿ ಚಟುವಟಿಕೆಗಳ ಬೆಳವಣಿಗೆ B)ಜನಸಂಖ್ಯೆ ಹೆಚ್ಚಳ
C)ಉತ್ಪಾದನಾ ತಂತ್ರಜ್ಞಾನದಲ್ಲಿನ ಬದಲಾವಣೆ D)ಶಿಕ್ಷಣದ ಹೆಚ್ಚಳ

3)2011ರ ಜನಗಣತಿಯ ಪ್ರಕಾರ ನಗರ ಸಮುದಾಯದ ಕನಿಷ್ಠ ಜನಸಂಖ್ಯೆಯ ಪ್ರಮಾಣ (ಸುಲಭ)

A)10000 B)25000 C)50000 D)100000

4)ಗ್ರಾಮೀಣ ಸಮುದಾಯವು ಪ್ರಮುಖವಾಗಿ ಇದನ್ನು ಅವಲಂಬಿಸಿದೆ (ಸಾಧಾರಣ)

A)ಕೈಗಾರಿಕೆ B)ಕೃಷಿ C)ತಂತ್ರಜ್ಞಾನ D)ವಾಣಿಜ್ಯ ವ್ಯಾಪಾರ

5)ನಗರ ಸಮುದಾಯದ ಪ್ರಮುಖ ಲಕ್ಷಣ (ಸಾಧಾರಣ)

A)ಸಾಮಾಜಿಕ ವೈವಿಧ್ಯತೆ B)ಚಿಕ್ಕಗಾತ್ರ C)ಕೃಷಿಯ ಪ್ರಾಧಾನ್ಯತೆ D)ಸಾಮಾಜಿಕ ಐಕ್ಯತೆ

6)ನಗರೀಕರಣವು ಇದಕ್ಕೆ ಅವಕಾಶ ಮಾಡಿಕೊಡುತ್ತದೆ (ಕಠಿಣ)

A)ಕೈಗಾರಿಕಾ ಬೆಳವಣಿಗೆಯ ಹಿನ್ನಡೆ B)ಸಾಂಪ್ರದಾಯಕ ಜೀವನ ಶೈಲಿಗೆ ಪ್ರೋತ್ಸಾಹ

C)ಸಾಮಾಜಿಕ ಚಲನೆ D)ಸಾಂಪ್ರದಾಯಿಕ ದೃಷ್ಟಿಕೋನ

7)ಭಾರತೀಯ ಸಮಾಜದ ಆಧಾರ ಸ್ತಂಭ ಈ ಸಮುದಾಯವಾಗಿದೆ (ಸಾಧಾರಣ)

A)ನಗರ ಸಮುದಾಯ B)ಮಹಾನಗರ ಸಮುದಾಯ C)ಬುಡಕಟ್ಟು ಸಮುದಾಯ D)ಗ್ರಾಮ ಸಮುದಾಯ

8)ಬುಡಕಟ್ಟು ಸಮುದಾಯಗಳು ಹೆಚ್ಚಾಗಿ ಇಲ್ಲಿ ಕಂಡುಬರುತ್ತದೆ (ಸಾಧಾರಣ)

A)ಮಹಾನಗರ B)ಕೈಗಾರಿಕಾ ನಗರ C)ಕರಾವಳಿ ಪ್ರದೇಶ D)ಕಾಡು, ಕಣಿವೆ, ಬೆಟ್ಟ

9)ಆಫ್ರಿಕಾದ ನಂತರ ಅತಿ ಹೆಚ್ಚು ಬುಡಕಟ್ಟು ಸಮುದಾಯಗಳು ಕಂಡುಬರುವ ದೇಶ (ಸಾಧಾರಣ)

A)ಚೀನಾ B)ಭಾರತ C) ರಷ್ಯಾ D)ಬ್ರೆಜಿಲ್

10) ಗ್ರಾಮ ಸಮುದಾಯದ ಪ್ರಮುಖ ಲಕ್ಷಣವೆಂದರೆ (ಸಾಧಾರಣ)

A)ಸಾಮಾಜಿಕ ವೈವಿಧ್ಯತೆ B)ಹೆಚ್ಚಿನ ಸಾಕ್ಷರತೆ C)ಕೈಗಾರಿಕೆಗಳಿಗೆ ಪ್ರಾಧಾನ್ಯತೆ D)ಅನೌಪಚಾರಿಕ ನಿಯಂತ್ರಣ

11) ಗ್ರಾಮಗಳ ಜನರು ನಗರಗಳಿಗೆ ವಲಸೆ ಹೋಗಲು ಪ್ರಮುಖ ಕಾರಣವೆಂದರೆ (ಸಾಧಾರಣ)

A)ಭೂಮಿಯ ಲಭ್ಯತೆ B)ಉದ್ಯೋಗದ ಅವಕಾಶಗಳು C)ಸರ್ಕಾರದ ನೀತಿಗಳು D)ಜನಸಂಖ್ಯೆ ಕಡಿಮೆ ಆಗಿರುವುದು

12) ಗ್ರಾಮೀಣ ಕೈಗಾರಿಕೆಗಳು ಅವನತಿ ಹೊಂದಲು ಪ್ರಮುಖ ಕಾರಣವೆಂದರೆ

A)ಕೃಷಿಯ ವಿಸ್ತರಣೆ B)ಕೈಗಾರಿಕೀಕರಣ ಮತ್ತು ನಗರೀಕರಣ C) ನಗರಗಳಿಗೆ ವಲಸೆ D)ಜನಸಂಖ್ಯೆ ಹೆಚ್ಚಳ

13)ಭಾರತದ ಈಶಾನ್ಯ ವಲಯದ ಆದಿವಾಸಿಗಳ ಜನಾಂಗಕ್ಕೆ ಸೇರಿದವರು (ಸುಲಭ)

A)ದ್ರಾವಿಡರು B)ಆರ್ಯರು C)ಮಂಗೋಲರು D)ಮೆಡಿಟರೇನಿಯನ್ನರು

14)ಸಾಮಾನ್ಯವಾಗಿ ನಿರ್ದಿಷ್ಟ ಭೂಪ್ರದೇಶ ಭಾಷೆ ಸಂಸ್ಕೃತಿ, ಸಾಮ್ಯತೆ ಮತ್ತು ಸಾಮಾಜಿಕ ಸಂಘಟನೆಯನ್ನು ಹೊಂದಿದ ಸಮೂಹ (ಕಠಿಣ)

A)ನಗರ ಸಮುದಾಯ B)ಬುಡಕಟ್ಟು ಆದಿವಾಸಿ ಸಮುದಾಯ C) ಗ್ರಾಮ ಸಮುದಾಯ D)ಮಹಾನಗರ ಸಮುದಾಯ

15)ಗ್ರಾಮ ಸಮುದಾಯದ ಪ್ರಮುಖ ಸಮಸ್ಯೆಗಳೆಂದರೆ (ಸಾಧಾರಣ)

A)ವ್ಯಕ್ತಿವಾದ, ವಿಲಾಸವಾದ B)ಅನಕ್ಷರತೆ, ಬಡತನ ಮತ್ತು ನಿರುದ್ಯೋಗ

C) ಅನಾಮಿಕತೆ, ಹೆಚ್ಚಿನ ಸಾಮಾಜಿಕ ಚಲನೆ D)ಸಾಮಾಜಿಕ ಐಕ್ಯತೆ ಮತ್ತು ಸರಳತೆ

II. ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ.

16)ಸಮುದಾಯ ಎಂದರೇನು? (ಸಾಧಾರಣ)

17)ಗ್ರಾಮೀಣ ಜನರ ಪ್ರಮುಖ ಉದ್ಯೋಗ ಯಾವುದು? (ಸುಲಭ)

18)ನಗರ ಸಮುದಾಯವನ್ನು ಅರ್ಥೈಸಿ. (ಸಾಧಾರಣ)

19)ಕೈಗಾರಿಕೀಕರಣವು ಯಾವುದನ್ನು ಸೂಚಿಸುತ್ತದೆ? (ಕಠಿಣ)

20)ಕೈಗಾರಿಕೀಕರಣದ ಪ್ರಮುಖ ಪರಿಣಾಮ ಯಾವುದು? (ಕಠಿಣ)

21)ನಗರಗಳಲ್ಲಿ ಸಾಮಾಜಿಕ ವೈವಿಧ್ಯತೆ ಕಂಡುಬರಲು ಕಾರಣವೇನು? (ಕಠಿಣ)

22)ಹೆಚ್ಚಿನ ಅನಕ್ಷರತೆ ಕಂಡುಬರುವ ಸಮುದಾಯ ಯಾವುದು? (ಸುಲಭ)

23)ಭಾರತದಲ್ಲಿ ಕಂಡು ಬರುವ ಬುಡಕಟ್ಟು ಜನರ ಪ್ರವರ್ಗಗಳನ್ನು ಹೆಸರಿಸಿ. (ಸಾಧಾರಣ)

III. ಈ ಪ್ರಶ್ನೆಗಳನ್ನು ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

24)ಸಮುದಾಯದ ಲಕ್ಷಣಗಳನ್ನು ತಿಳಿಸಿ. (ಸಾಧಾರಣ)

25)ಭಾರತೀಯ ಬುಡಕಟ್ಟು ಜನಾಂಗವನ್ನು ಹೇಗೆ ವಿಭಾಗಿಸಲಾಗಿದೆ? (ಸಾಧಾರಣ)

26)ಈಶಾನ್ಯ ವಲಯ ಆದಿವಾಸಿಗಳು ಕಂಡುಬರುವ ರಾಜ್ಯಗಳನ್ನು ಹೆಸರಿಸಿ. (ಸುಲಭ)

27) ದಕ್ಷಿಣ ಭಾರತದ ಆದಿವಾಸಿಗಳ ಜನಾಂಗಗಳನ್ನು ಹೆಸರಿಸಿ. (ಸಾಧಾರಣ)

28)ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ವಾಸಿಸುವ ಬುಡಕಟ್ಟು ಗುಂಪನ್ನು ಹೆಸರಿಸಿ (ಸಾಧಾರಣ)

IV ಈ ಪ್ರಶ್ನೆಗಳನ್ನು ಆರು ವಾಕ್ಯಗಳಲ್ಲಿ ಉತ್ತರಿಸಿ.

29) ನಗರ ಸಮುದಾಯದ ಲಕ್ಷಣಗಳಾವುವು? (ಸಾಧಾರಣ)

30) ಗ್ರಾಮ ಸಮುದಾಯದ ಪ್ರಮುಖ ಸಮಸ್ಯೆಗಳು ಯಾವುವು? (ಸಾಧಾರಣ)

31) ಭಾರತದಲ್ಲಿ ಗ್ರಾಮ ಸಮುದಾಯವು ಮಹತ್ವದ್ದಾಗಿದೆ. ಹೇಗೆ? (ಕಠಿಣ)

32) ಕೈಗಾರಿಕೀಕರಣವು ಭಾರತೀಯರ ಸಾಮಾಜಿಕ ವಾತಾವರಣವನ್ನು ಹೇಗೆ ಬದಲಾಯಿಸಿದೆ? (ಕಠಿಣ)

V. ಈ ಪ್ರಶ್ನೆಗಳನ್ನು ಎಂಟು ವಾಕ್ಯಗಳಲ್ಲಿ ಉತ್ತರಿಸಿ.

33) ಗ್ರಾಮ ಸಮುದಾಯದ ಲಕ್ಷಣಗಳನ್ನು ಬರೆಯಿರಿ (ಸಾಧಾರಣ)

34) ಬುಡಕಟ್ಟು ಜನಾಂಗದ ವಿಶಿಷ್ಟ ಲಕ್ಷಣಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)

ಭೂಗೋಳಶಾಸ್ತ್ರ ಅಧ್ಯಾಯ 27.

ಕರ್ನಾಟಕದ ಖನಿಜ ಸಂಪನ್ಮೂಲ

ಕಲಿಕಾಫಲ: ಕರ್ನಾಟಕದಲ್ಲಿ ದೊರೆಯುವ ಖನಿಜಗಳ ಪರಿಚಯ ಪಡೆಯುವರು. ಅವುಗಳ ಹಂಚಿಕೆ ಮತ್ತು ಉತ್ಪಾದನೆ ಬಗ್ಗೆ ಮಾಹಿತಿ ಪಡೆಯುವರು.

I ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1) ಕಬ್ಬಿಣ ತಯಾರಿಕೆಯಲ್ಲಿ ಮಿಶ್ರಲೋಹವಾಗಿ ಬಳಸುವ ಬಹು ಉಪಯೋಗಿ ಖನಿಜ. (ಸುಲಭ)

A) ಕಬ್ಬಿಣ B) ಬಾಕ್ಸೈಟ್, C) ಮ್ಯಾಂಗನೀಸ್ D)ಚಿನ್ನ .

2) ಕಬ್ಬಿಣ ಉತ್ಪಾದನೆಯಲ್ಲಿ ಕರ್ನಾಟಕದಲ್ಲಿ ಪ್ರಥಮ ಸ್ಥಾನ ಹೊಂದಿದ ಜಿಲ್ಲೆ. (ಸುಲಭ)

A) ಬೆಂಗಳೂರು B) ವಿಜಯಪುರ C) ಚಿಕ್ಕಮಗಳೂರು D)ಬಳ್ಳಾರಿ .

3) ಬಾಕ್ಸೈಟ್ ಉತ್ಪಾದನೆಯ ಪ್ರಮುಖ ಜಿಲ್ಲೆ (ಸುಲಭ)

A) ಚಿತ್ರದುರ್ಗ, B) ಬೆಳಗಾವಿ, C) ದಕ್ಷಿಣ ಕನ್ನಡ, D)ಕೋಲಾರ .

4) ಹಾಸನ ಜಿಲ್ಲೆಯ ಕೆಂಪಿನಕೋಟೆಯಲ್ಲಿ ಈ ಖನಿಜ ನಿಕ್ಷೇಪಗಳಿವೆ. (ಸಾಧಾರಣ)

A) ಕಬ್ಬಿಣ, B) ಅಲುಮಿನಿಯಮ್ . C) ಮ್ಯಾಂಗನೀಸ್, D)ಚಿನ್ನ .

5) ಹೊಂದಿಸಿ ಬರೆಯಿರಿ (ಸಾಧಾರಣ)

ಅ	ಬ
1. ಮ್ಯಾಂಗನೀಸ್	ಎ. ಅಲ್ಯೂಮೀನಿಯಂ
2. ಹಟ್ಟಿ	ಬಿ. ಇಂಡಿಯನ್ ಅಲ್ಯೂಮೀನಿಯಂ ಕಂಪನಿ
3. ಬಾಕ್ಸೈಟ್	ಸಿ. ಕೆ.ಜಿ ಎಫ್
4. ಬೆಳಗಾವಿ	ಡಿ. ಕರ್ನಾಟಕದ ಅತಿದೊಡ್ಡ ಚಿನ್ನದ ಗಣಿ
	ಇ. ಬಹು ಉಪಯೋಗಿ ಖನಿಜ

II) ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ.

6) ಕುದುರೆಮುಖ ಗಣಿಗಾರಿಕೆ ನಿಷೇಧಕ್ಕೆ ಕಾರಣವೇನು? (ಸಾಧಾರಣ)

7) ಮ್ಯಾಂಗನೀಸ್ ಬಹುಪಯೋಗಿ ಲೋಹವಾಗಿದೆ. ಏಕೆ? (ಕಠಿಣ)

8) ಕರ್ನಾಟಕವನ್ನು ಚಿನ್ನದ ನಾಡು ಎಂದು ಏಕೆ ಕರೆಯುತ್ತಾರೆ ? (ಸುಲಭ)

9) ಬಾಕ್ಸೈಟ್ ಬೇಡಿಕೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತಿ ಏಕೆ? (ಕಠಿಣ)

III) ಈ ಪ್ರಶ್ನೆಗಳನ್ನು ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

10 ಕರ್ನಾಟಕದಲ್ಲಿ ಚಿನ್ನದ ಗಣಿಗಾರಿಕೆಯ ಹಂಚಿಕೆಯನ್ನು ವಿಶ್ಲೇಷಿಸಿ . (ಸಾಧಾರಣ)
11 ನಮ್ಮ ರಾಜ್ಯದಲ್ಲಿ ಕಬ್ಬಿಣದ ಅದಿರು ಸಿಗುವ ಪ್ರದೇಶಗಳನ್ನು ಪಟ್ಟಿಮಾಡಿ (ಸಾಧಾರಣ)
12 ಕೋಷ್ಟಕ ರಚಿಸಿ (ಸಾಧಾರಣ)

ಕ್ರ.ಸಂ	ಪ್ರಮುಖ ಖನಿಜಗಳು	ದೊರೆಯುವ ಪ್ರದೇಶ/ ಜಿಲ್ಲೆಗಳು

13 ಕುದುರೆಮುಖದಲ್ಲಿ ಕಬ್ಬಿಣದ ಗಣಿಗಾರಿಕೆ ಸ್ಥಗಿತಗೊಳಿಸಲಾಗಿದೆ. ಚರ್ಚಿಸಿ (ಸಾಧಾರಣ)

ಭೂಗೋಳಶಾಸ್ತ್ರ ಅಧ್ಯಾಯ 28.

ಕರ್ನಾಟಕದ ಸಾರಿಗೆ ವ್ಯವಸ್ಥೆ.

ಕಲಿಕಾಫಲ: ಕರ್ನಾಟಕದಲ್ಲಿನ ಸಾರಿಗೆಯ ಮಹತ್ವ ,ಸಾರಿಗೆಯ ವಿಧಗಳು,ಪ್ರಮುಖ ಹೆದ್ದಾರಿಗಳು ಹಾಗೂ ರೈಲು ಮಾರ್ಗಗಳ ಬಗ್ಗೆ ತಿಳಿಯುವರು.

I ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1) ಪ್ರಾಚೀನ ಕಾಲದಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದ ಉದ್ದೇಶ. (ಸಾಧಾರಣ)

A) ಸರಕು ಸಾಗಾಣೆ B) ಸೈನಿಕರ ಮತ್ತು ಆಡಳಿತ ನಿರ್ವಹಣೆ C) ಪ್ರಯಾಣಿಕರ ನಿರ್ವಹಣೆ D)ಕೈಗಾರಿಕೆಗಳ ನಿರ್ವಹಣೆ .

2) ರಾಜ್ಯಗಳ ರಾಜಧಾನಿ ಮತ್ತು ಬಂದರುಗಳನ್ನು ಸಂಪರ್ಕಿಸುವ ರಸ್ತೆ (ಸಾಧಾರಣ)

A) ರಾಜ್ಯ ಹೆದ್ದಾರಿ B) ಕಾರಿಡಾರ್ ರಸ್ತೆ C) ರಾಷ್ಟ್ರೀಯ ಹೆದ್ದಾರಿ D)ಜಿಲ್ಲಾ ರಸ್ತೆಗಳು .

3) ಕಡಿಮೆ ದರದಲ್ಲಿ ದೂರದ ಊರಿಗೆ ಪ್ರಯಾಣಿಸುವ ಸಾರಿಗೆ. (ಸುಲಭ)

A) ರಸ್ತೆ ಸಾರಿಗೆ B) ವಾಯು ಸಾರಿಗೆ C) ಜಲ ಸಾರಿಗೆ D)ರೈಲು ಸಾರಿಗೆ

4) ಮೆಟ್ರೋ ರೈಲು ಮಾರ್ಗ ನಿರ್ಮಿಸಿದ ಪ್ರಮುಖ ಉದ್ದೇಶ. (ಸುಲಭ)

A) ಪ್ರವಾಸ, B) ನಗರ ಸಂಚಾರ C) ಟ್ರಾಫಿಕ್ ಸಮಸ್ಯೆ ನಿರ್ವಹಣೆ D)ಅಗ್ಗದ ನಗರ ಪ್ರಯಾಣ .

5) ಅತಿ ಉದ್ದದ ರಾಜ್ಯ ಹೆದ್ದಾರಿ ಹೊಂದಿರುವ ಕರ್ನಾಟಕದ ಜಿಲ್ಲೆ. (ಸಾಧಾರಣ)

A) ದಕ್ಷಿಣ ಕನ್ನಡ B) ಬೆಳಗಾವಿ C) ಬೆಂಗಳೂರು D)ವಿಜಯಪುರ .

II) ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ :

6) ಬೆಂಗಳೂರು ನಗರ ಜಿಲ್ಲೆ ಅತಿ ಕಡಿಮೆ ಉದ್ದದ ರಾಜ್ಯ ಹೆದ್ದಾರಿ ಹೊಂದಿದೆ ಏಕೆ? (ಸಾಧಾರಣ)

7) ಹಸಿರು ಕ್ಷೇತ್ರದ ವಿಮಾನ ನಿಲ್ದಾಣ ಎಂದು ಯಾವ ವಿಮಾನ ನಿಲ್ದಾಣವನ್ನು ಕರೆಯಲಾಗಿದೆ? (ಸುಲಭ)

8) ವಾಯುಸಾರಿಗೆಯು ಇತರ ಸಾರಿಗೆಗಳಿಗಿಂತ ಹೇಗೆ ಭಿನ್ನವಾಗಿದೆ ? (ಕಠಿಣ)

9) ನವಮಂಗಳೂರು ಬಂದರನ್ನು ಕರ್ನಾಟಕದ ಹೆಬ್ಬಾಗಿಲು ಎಂದು ಏಕೆ ಕರೆಯುವರು? (ಸಾಧಾರಣ)

III) ಈ ಪ್ರಶ್ನೆಗಳನ್ನು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :

10) ರಸ್ತೆ ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ . (ಸಾಧಾರಣ)

11) 'ಸಾರಿಗೆ ದೇಶದ ಆರ್ಥಿಕತೆಯ ಜೀವನಾಡಿ'. ಸಮರ್ಥಿಸಿ. (ಕಠಿಣ)

12) ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಸಾರಿಗೆಯು ಇತರ ಸಾರಿಗೆಗಳಿಗಿಂತ ಹೆಚ್ಚು ಸೂಕ್ತವಾಗಿದೆ.ಏಕೆ? (ಸಾಧಾರಣ)

13) ಕರ್ನಾಟಕದ ಪ್ರಮುಖ ಬಂದರುಗಳನ್ನು ಕೆಳಗಿನ ನಕ್ಷೆಯಲ್ಲಿ ಗುರುತಿಸಿ. (ಕಠಿಣ)



ಭೂಗೋಳಶಾಸ್ತ್ರ ಅಧ್ಯಾಯ 29.

ಕರ್ನಾಟಕದ ಕೈಗಾರಿಕೆಗಳು.

ಕಲಿಕಾಫಲ: ಕರ್ನಾಟಕದ ಕೈಗಾರಿಕೆಗಳು,ಕೈಗಾರಿಕಾವಲಯಗಳು, ಕೈಗಾರಿಕೆಗಳ ಹಂಚಿಕೆ,ಉತ್ಪಾದನೆ , ಪ್ರಮುಖ ಕೈಗಾರಿಕೆಗಳ ಬಗ್ಗೆ ಮಾಹಿತಿ ಪಡೆಯುವರು. ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳ ಮಹತ್ವ ಅರಿಯುವರು.

I ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1) ಕರ್ನಾಟಕದ ಮ್ಯಾಂಚೆಸ್ಟರ್ ಎಂದು ಕರೆಯಲ್ಪಡುವ ಜಿಲ್ಲೆ (ಸುಲಭ)
A) ಹಾವೇರಿ B) ದಾವಣಗೆರೆ C) ಬೆಂಗಳೂರು D)ಮೈಸೂರು .

2) ಸಿದ್ಧ ಉಡುಪಿನ ಪಾರ್ಕ್ ಸ್ಥಾಪನೆಯ ಉದ್ದೇಶ . (ಕಠೀಣ)
A) ಸ್ಥಳೀಯರ ಬೇಡಿಕೆ ಪೂರೈಸುವುದು. B) ಜನರಿಗೆ ಉದ್ಯೋಗ ಕಲ್ಪಿಸುವುದು.
C) ವಿದೇಶಗಳಿಗೆ ರಫ್ತು ಮಾಡುವುದು . D)ಜವಳಿ ಉದ್ಯಮ ಬೆಳೆಸುವುದು

3) ಅತಿ ಹೆಚ್ಚು ಕೈಗಾರಿಕೆಗಳನ್ನು ಹೊಂದಿರುವ ಪ್ರದೇಶ . (ಸಾಧಾರಣ)
A) ಬೆಳಗಾವಿ - ಧಾರವಾಡ . B) ಮೈಸೂರು .ಮಂಡ್ಯ -
C) ಬೆಂಗಳೂರು- ಕೋಲಾರ -, D)ದಕ್ಷಿಣ ಕನ್ನಡ - .ಉಡುಪಿ -

4) ಕರ್ನಾಟಕದ ಸಿಲಿಕಾನ್ ಕಣಿವೆ (ಸುಲಭ)
A) ಮಂಗಳೂರು B) ಬೆಳಗಾವಿ C) ಬೆಂಗಳೂರು D)ದಾವಣಗೆರೆ

II) ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ :

5) ಇತ್ತೀಚೆಗೆ ಸಿಮೆಂಟ್ ಬೇಡಿಕೆ ಹೆಚ್ಚಾಗಲು ಕಾರಣವೇನು? (ಕಠಿಣ)

6) ಹತ್ತಿ ಗಿರಣಿಗಳು ಈಗ ಮುಚ್ಚಲ್ಪಡುತ್ತಿವೆ. ಏಕೆ? (ಕಠಿಣ)

7) ಸಕ್ಕರೆ ಕೈಗಾರಿಕೆಯ ಉಪ ಉದ್ಯಮಗಳಾವುವು? (ಸಾಧಾರಣ)

III) ಈ ಪ್ರಶ್ನೆಗಳನ್ನು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :

8) ಕೈಗಾರಿಕೆಗಳು ದೇಶದ ಆರ್ಥಿಕ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತದೆ .ಸ್ಪಷ್ಟೀಕರಿಸಿ - (ಕಠಿಣ)

9) ಕೈಗಾರಿಕಾ ಬೆಳವಣಿಗೆಯ ಅಗತ್ಯತೆಗಳನ್ನು ವಿಶ್ಲೇಷಿಸಿ. (ಸಾಧಾರಣ)

10) ಕೈಗಾರಿಕೆಗಳ ಸ್ಥಾನೀಕರಣಕ್ಕೆ ಅಗತ್ಯವಾದ ಅಂಶಗಳನ್ನು ಪಟ್ಟಿಮಾಡಿ. (ಸಾಧಾರಣ)

11) 'ಕೈಗಾರಿಕೀಕರಣ ಇಲ್ಲವೇ ವಿನಾಶ' ಈ ಹೇಳಿಕೆಯನ್ನು ಸಮರ್ಥಿಸಿ (ಕಠಿಣ)

12) "ಸಿಮೆಂಟ್ ಕೈಗಾರಿಕೆ ನಗರೀಕರಣ ಮತ್ತು ಕೈಗಾರಿಕೀಕರಣದ ಪ್ರತೀಕ " ಸ್ಪಷ್ಟೀಕರಿಸಿ. (ಕಠಿಣ)

13) ಕರ್ನಾಟಕದ ಕೈಗಾರಿಕಾ ವಲಯಗಳನ್ನು ಪಟ್ಟಿಮಾಡಿ. (ಸಾಧಾರಣ)

14) ಕರ್ನಾಟಕದ ನಕ್ಷೆಯಲ್ಲಿ ಕೆಳಗಿನ ಸ್ಥಳಗಳನ್ನು ಗುರುತಿಸಿ (ಕಠಿಣ)

1. ಭದ್ರಾವತಿ 2. ಕರ್ನಾಟಕದ ಮ್ಯಾಂಚೆಸ್ಟರ್ 3. ಸಿಲಿಕಾನ್ ಕಣಿವೆ 4. ಬೆಳಗಾವಿ

ಭೂಗೋಳಶಾಸ್ತ್ರ ಅಧ್ಯಾಯ 30.

ಕರ್ನಾಟಕದ ಪ್ರವಾಸಿ ಕೇಂದ್ರಗಳು.

ಕಲಿಕಾಫಲ: ಕರ್ನಾಟಕದ ನೈಸರ್ಗಿಕ ಹಾಗೂ ಸಾಂಸ್ಕೃತಿಕ ತಾಣಗಳ ಪರಿಚಯ ಪಡೆಯುವರು. ಅವುಗಳ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವ ಅರಿಯುವರು.

I ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1) ನಂದಿಗಿರಿಧಾಮ ವಿರುವ ಜಿಲ್ಲೆ. (ಸುಲಭ)
A) ಬೆಂಗಳೂರು ಗ್ರಾಮಾಂತರ B) ಮೈಸೂರು C) ಚಿಕ್ಕಬಳ್ಳಾಪುರ D)ಕೋಲಾರ .

2) 'ಕರ್ನಾಟಕದ ನಯಾಗರ' ಎಂದು ಕರೆಯಲ್ಪಡುವ ಜಲಪಾತ . (ಸುಲಭ)
A) ಜೋಗ ಜಲಪಾತ B) ಗೋಕಾಕ್ ಜಲಪಾತ C) ಉಂಚಳ್ಳಿ ಜಲಪಾತ D)ಅಬ್ಬಿ ಜಲಪಾತ .

3) 'ಅರಮನೆಗಳ ನಗರ' ಎಂದು ಹೆಸರಾದ ಸ್ಥಳ . (ಸುಲಭ)
A) ಹಂಪಿ B) ಚಿತ್ರದುರ್ಗ C) ಮೈಸೂರು D)ಬೆಂಗಳೂರು

4) 1974ರಲ್ಲಿ ಕರ್ನಾಟಕ ಸರ್ಕಾರ ಪ್ರವಾಸೋದ್ಯಮ ನಿಗಮ ಸ್ಥಾಪಿಸಿರುವ ಮುಖ್ಯ ಉದ್ದೇಶ (ಸಾಧಾರಣ)
A) ಲಾಭ ಗಳಿಸಲು B) ಉದ್ಯೋಗ ಸೃಷ್ಟಿಸಲು
C) ಪ್ರವಾಸಿ ಕೇಂದ್ರಗಳನ್ನು ಸಂರಕ್ಷಿಸಲು D)ಪ್ರವಾಸಿಗರಿಗೆ ಮೂಲ ಸೌಲಭ್ಯ ಒದಗಿಸಲು

II) ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿರಿ :

5) ಕರ್ನಾಟಕ ಪ್ರವಾಸೋದ್ಯಮ ನಿಗಮ ಸ್ಥಾಪನೆಯ ಉದ್ದೇಶವೇನು? (ಸಾಧಾರಣ)
6) ಗಾಂಧಿ ಭವನ ಇರುವ ಗಿರಿಧಾಮ ಯಾವುದು? (ಸುಲಭ)
7) ಅತಿ ಹೆಚ್ಚು ಜಲಪಾತಗಳನ್ನು ಹೊಂದಿದ ಕರ್ನಾಟಕದ ಜಿಲ್ಲೆ ಯಾವುದು? (ಸುಲಭ)
8) ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಧ್ಯೇಯ ವಾಕ್ಯವೇನು? (ಸಾಧಾರಣ)

III) ಈ ಪ್ರಶ್ನೆಗಳನ್ನು ನಾಲ್ಕು ವಾಕ್ಯ**ಗಳ**ಲ್ಲಿ ಉತ್ತರಿಸಿ :

9) ಪ್ರವಾಸೋದ್ಯಮ ಬೆಳವಣಿಗೆಗೆ ಅಗತ್ಯವಿರುವ ಸಂಗತಿಗಳನ್ನು ವಿಶ್ಲೇಷಿಸಿ . (ಕಠಿಣ)

10) ಪ್ರವಾಸದಿಂದಾಗುವ ಲಾಭಗಳೇನು ? (ಸಾಧಾರಣ)

11) ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸಮರ್ಥಿಸಿ. (ಕಠಿಣ)

ಅಧ್ಯಾಯ 31

ಹಣ ಮತ್ತು ಸಾಲ

ಕಲಿಕಾಫಲ: ಹಣದ ವಿಕಾಸ ಮತ್ತು ಕಾರ್ಯಗಳನ್ನು ತಿಳಿಯುವರು. ಬ್ಯಾಂಕುಗಳು ಅವುಗಳ ಕಾರ್ಯ, ವಿವಿಧ ಠೇವಣಿಗಳ ಪರಿಚಯ ಪಡೆಯುವರು. ಭಾರತದ ಕೇಂದ್ರ ಬ್ಯಾಂಕ್ ಸ್ಥಾಪನೆ ಮತ್ತು ಕಾರ್ಯಗಳ ಬಗ್ಗೆ ತಿಳಿಯುವರು.

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1)ವಸ್ತು ವಿನಿಮಯ ಪದ್ಧತಿಯು (ಕಠಿಣ)
A)ಹಣದ ಸಹಾಯದಿಂದ ಕೊಳ್ಳುವುದು ಮತ್ತು ಮಾರುವುದು B)ಸರಕುಗಳನ್ನು ಸರಕುಗಳಿಗೆ ವಿನಿಮಯ ಮಾಡುವುದು
C)ಕಾಗದ ಹಣವನ್ನು ಬಳಸುವುದು D)ಬ್ಯಾಂಕಿಂಗ್ ವ್ಯವಹಾರ ಮಾಡುವುದು

2)ಭಾರತದ ರೂಪಾಯಿ ಸಂಸ್ಕೃತದ ಈ ಪದದಿಂದ ಬಂದಿದೆ. (ಸುಲಭ)
A) ರೂಪ B) ರೂಪ್ಯಾ C)ರಾಷ್ಟ್ರ D)ರೂಪಾಯ್

3)ಹಣದ ಪ್ರಾಥಮಿಕ ಕಾರ್ಯವೆಂದರೆ (ಸಾಧಾರಣ)
A)ಮನರಂಜನೆ ನೀಡುವುದು B)ಹಣದುಬ್ಬರ ಉಂಟು ಮಾಡುವುದು
C)ವಿನಿಮಯ ಮಾಧ್ಯಮ D)ಸುಲಭ ಸಾಗಾಣಿಕೆ

4)ಲೋಹದ ಹಣಕ್ಕೆ ಉದಾಹರಣೆ ಎಂದರೆ (ಸುಲಭ)
A)ಡೆಬಿಟ್ ಕಾರ್ಡ್ B)ಚಿನ್ನದ ನಾಣ್ಯಗಳು C)ಕರೆನ್ಸಿ ನೋಟುಗಳು D)ಚೆಕ್ಕುಗಳು

5)ಭಾರತದಲ್ಲಿ ನೋಟು ಚಲಾವಣೆಯ ಏಕಸ್ವಾಮ್ಯ ಅಧಿಕಾರ ಹೊಂದಿರುವುದು (ಸುಲಭ)
A) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ B)ಭಾರತೀಯ ರಿಸರ್ವ್ ಬ್ಯಾಂಕ್
C)ವಾಣಿಜ್ಯ ಬ್ಯಾಂಕುಗಳು D)ಕೇಂದ್ರ ಸರ್ಕಾರ

6)ಬ್ಯಾಂಕುಗಳ ಚೆಕ್ಕುಗಳು, ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್ ಗಳು ಈ ಹಣಕ್ಕೆ ಉದಾಹರಣೆಯಾಗಿವೆ (ಸಾಧಾರಣ)
A)ವಸ್ತುರೂಪದ ಹಣ B)ಕಾಗದದ ಹಣ C)ಬ್ಯಾಂಕ್ ಹಣ D)ಲೋಹದ ಹಣ

7) ಪ್ರಾಥಮಿಕವಾಗಿ NABARD ಈ ವಲಯಗಳಿಗೆ ಹಣಕಾಸು ಸೌಲಭ್ಯವನ್ನು ಒದಗಿಸುತ್ತದೆ. (ಸಾಧಾರಣ)
A)ಕೃಷಿ B)ಬ್ಯಾಂಕಿಂಗ್ C)ಮಾಹಿತಿ ತಂತ್ರಜ್ಞಾನ D)ಕೈಗಾರಿಕೆ

8) ಬ್ಯಾಂಕುಗಳು ಅತಿ ಹೆಚ್ಚು ಬಡ್ಡಿ ದರ ನೀಡುವ ಠೇವಣಿ ಎಂದರೆ (ಸಾಧಾರಣ)
A)ಚಾಲ್ತಿ ಖಾತೆ B)ಉಳಿತಾಯ ಖಾತೆ C)ನಿಶ್ಚಿತ ಠೇವಣಿ ಖಾತೆ D)ಆವರ್ತ ಠೇವಣಿ ಖಾತೆ

9)ಭಾರತೀಯ ರಿಸರ್ವ್ ಬ್ಯಾಂಕ್ ರಾಷ್ಟ್ರೀಕರಣಗೊಂಡ ವರ್ಷ (ಸುಲಭ)
A)1935 B)1949 C)1980 D)1969

10)ಭಾರತದ ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹೊಂದಿರುವುದು (ಸಾಧಾರಣ)
A)ಹಣಕಾಸು ಇಲಾಖೆ B)ರಾಜ್ಯ ಸರ್ಕಾರ C)ಭಾರತೀಯ ರಿಸರ್ವ್ ಬ್ಯಾಂಕ್ D)ಯೋಜನಾ ಆಯೋಗ

11)ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳಲ್ಲಿ ಇದು ಸೇರಿಲ್ಲ (ಕಠಿಣ)

A)ನೋಟುಗಳನ್ನು ಚಲಾವಣೆಗೆ ತರುವುದು B) ಸಾಲವನ್ನು ನಿಯಂತ್ರಿಸುವುದು

C)ವಿದೇಶಿ ವ್ಯಾಪಾರವನ್ನು ನಡೆಸುವುದು D)ಬ್ಯಾಂಕುಗಳನ್ನು ನಿಯಂತ್ರಿಸುವುದು.

II) ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ :

12)ಹಣವನ್ನು ಅರ್ಥೈಸಿ. (ಸಾಧಾರಣ)

13)ವಸ್ತು ವಿನಿಮಯ ಪದ್ಧತಿ ಎಂದರೇನು? (ಸುಲಭ)

14)ಬ್ಯಾಂಕ್ ಹಣಕ್ಕೆ ಉದಾಹರಣೆ ಬರೆಯಿರಿ (ಸಾಧಾರಣ)

15)ಭಾರತದ ಕೇಂದ್ರ ಬ್ಯಾಂಕಿನ ಹೆಸರೇನು? (ಸುಲಭ)

16)ಕೈಗಾರಿಕೆಗಳಿಗೆ ದೀರ್ಘಾವಧಿ ಸಾಲ ನೀಡುವ ಹಣಕಾಸು ಸಂಸ್ಥೆಗಳನ್ನು ಹೆಸರಿಸಿ. (ಸಾಧಾರಣ)

17)ಭಾರತದಲ್ಲಿ ಬ್ಯಾಂಕುಗಳನ್ನು ಯಾವ ವರ್ಷದಲ್ಲಿ ರಾಷ್ಟ್ರೀಕರಿಸಲಾಗಿದೆ? (ಸಾಧಾರಣ)

18)ಭಾರತೀಯ ರಿಸರ್ವ್ ಬ್ಯಾಂಕನ್ನು ಯಾವಾಗ ಸ್ಥಾಪಿಸಲಾಯಿತು? (ಸುಲಭ)

19) ಭಾರತದಲ್ಲಿ ಉಳಿತಾಯ ಬ್ಯಾಂಕುಗಳಿಗೆ ಉದಾಹರಣೆ ಬರೆಯಿರಿ. (ಸಾಧಾರಣ)

20)ಚಾಲ್ತಿ ಖಾತೆಯ ವಿಶೇಷತೆ ಏನು? (ಕಠಿಣ)

21)ಭಾರತೀಯ ರಿಸರ್ವ್ ಬ್ಯಾಂಕಿನ ವಿವಿಧ ಹೆಸರುಗಳನ್ನು ಹೆಸರಿಸಿ. (ಸಾಧಾರಣ)

III. ಈ ಪ್ರಶ್ನೆಗಳನ್ನು ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

22)ಹಣದ ಕಲ್ಪನೆಯನ್ನು ವಿವರಿಸಿ. (ಕಠಿಣ)

23)ವಸ್ತುವಿನಿಮಯ ಪದ್ಧತಿಯ ಅನಾನುಕೂಲಗಳನ್ನು ಪಟ್ಟಿ ಮಾಡಿ (ಸಾಧಾರಣ)

24) ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಗಿಂತ ಹೇಗೆ ಭಿನ್ನವಾಗಿದೆ? (ಸಾಧಾರಣ)

25)ಹಣದ ಪ್ರಾಥಮಿಕ ಕಾರ್ಯಗಳನ್ನು ಹೆಸರಿಸಿ (ಸಾಧಾರಣ)

26) ಸಾಲ ಎಂದರೇನು? ಸಾಲದ ವಿಧಗಳನ್ನು ಪಟ್ಟಿ ಮಾಡಿ. (ಸಾಧಾರಣ)

27)ಸರ್ಕಾರದ ಬ್ಯಾಂಕ್ ಆಗಿ ಆರ್ ಬಿ ಐ ನ ಪಾತ್ರವೇನು? (ಕಠಿಣ)

IV. ಈ ಪ್ರಶ್ನೆಗಳನ್ನು ಆರು ವಾಕ್ಯಗಳಲ್ಲಿ ಉತ್ತರಿಸಿ.

28) ಅರ್ಥ ವ್ಯವಸ್ಥೆಯಲ್ಲಿ ಬ್ಯಾಂಕುಗಳ ಪ್ರಾಮುಖ್ಯತೆಯನ್ನು ಬರೆಯಿರಿ. (ಸಾಧಾರಣ)

29)ಭಾರತದಲ್ಲಿನ ಬ್ಯಾಂಕುಗಳ ವಿಧಗಳನ್ನು ಪಟ್ಟಿ ಮಾಡಿ. (ಸಾಧಾರಣ)

30) ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳನ್ನು ಹೆಸರಿಸಿ. (ಸಾಧಾರಣ)

V. ಈ ಪ್ರಶ್ನೆಗಳನ್ನು ಎಂಟು ವಾಕ್ಯಗಳಲ್ಲಿ ಉತ್ತರಿಸಿ.

31) ಹಣದ ವಿಕಾಸದ ವಿವಿಧ ಹಂತಗಳನ್ನು ತಿಳಿಸಿ. (ಸಾಧಾರಣ)

32)ಹಣದ ಕಾರ್ಯಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)

33)ಭಾರತೀಯ ರಿಸರ್ವ್ ಬ್ಯಾಂಕ್ ನ ಕಾರ್ಯಗಳು ಯಾವುವು? (ಸಾಧಾರಣ)

ಅರ್ಥಶಾಸ್ತ್ರ ಅಧ್ಯಾಯ 32
ಶ್ರಮ ಮತ್ತು ಉದ್ಯೋಗ

ಕಲಿಕಾಫಲ: ಶ್ರಮದ ಅರ್ಥ,ಲಕ್ಷಣಗಳು,ವಿಧಗಳು,ಶ್ರಮ ವಿಭಜನೆಯ ಅನುಕೂಲ, ಅನಾನುಕೂಲಗಳು, ಸ್ತ್ರೀ-ಪುರುಷರ ಅಸಮಾನತೆ, ನಿರುದ್ಯೋಗ, ಪ್ರಕಾರ ಅದರ ಅನಾನುಕೂಲಗಳು, ಜೀತ ಮತ್ತು ಬಾಲಕಾರ್ಮಿಕ ಪದ್ಧತಿ, ವಿಮೋಚನಾ ನೀತಿಗಳನ್ನು ತಿಳಿಯುವರು.

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1) ಸರಕು ಸೇವೆಗಳ ಉತ್ಪಾದನೆಗಾಗಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಕೆಲಸ ಮಾಡುವ ಸಾಮರ್ಥ್ಯ (ಕಠಿಣ)

A)ಬಂಡವಾಳ B) ಶ್ರಮ C)ಗೇಣಿ D)ಲಾಭ

2) ಈ ಕೆಳಗಿನವುಗಳಲ್ಲಿ ಶ್ರಮ ಎಂದು ಪರಿಗಣಿಸದಿರುವುದು (ಕಠಿಣ)

A)ದಾದಿಯರ ಸೇವೆ B)ತಾಯಿ ತನ್ನ ರೋಗಿಷ್ಟ ಮಗುವನ್ನು ಆರೈಕೆ ಮಾಡುವುದು
C)ಕಾರ್ಮಿಕರ ಕೆಲಸ D)ಶಿಕ್ಷಕರ ಕೆಲಸ.

3)ಶ್ರಮವನ್ನು ಇವರಿಂದ ಬೇರ್ಪಡಿಸಲು ಸಾಧ್ಯವಿಲ್ಲ (ಸಾಧಾರಣ)
A)ಮಾಲೀಕರಿಂದ B)ಬಂಡವಾಳಗಾರರಿಂದ C)ಶ್ರಮಿಕರಿಂದ D)ಸರ್ಕಾರದಿಂದ

4)ಒಂದು ದೇಶದ ಶ್ರಮಶಕ್ತಿಯ ಗಾತ್ರವನ್ನು ನಿರ್ಧರಿಸುವ ವಯೋಗುಂಪು (ಸಾಧಾರಣ)
A)15 ರಿಂದ 60 B)18 ರಿಂದ 65 C)20 ನಿಂದ 60 D)25 ರಿಂದ 60

5)ಕೆಲಸದ ಸ್ವರೂಪದ ಮೇಲೆ ಶ್ರಮವನ್ನು ಹೀಗೆ ವಿಂಗಡಿಸಲಾಗಿದೆ (ಕಠಿಣ)
A)ವೃತ್ತಿಪರ ಮತ್ತು ಆಡಳಿತಾತ್ಮಕ ಶ್ರಮ B) ಕೌಶಲ್ಯ ಸಹಿತ ಮತ್ತು ಕೌಶಲ್ಯ ರಹಿತ ಶ್ರಮ
C)ದೈಹಿಕ ಶ್ರಮ ಮತ್ತು ಮಾನಸಿಕ ಶ್ರಮ D)ಉತ್ಪಾದಕ ಮತ್ತು ಪುನರುತ್ಪಾದಕ ಶ್ರಮ

6)ಶ್ರಮ ವಿಭಜನೆಯು ಇದಕ್ಕೆ ಅವಕಾಶ ಮಾಡಿಕೊಡುತ್ತದೆ (ಕಠಿಣ)
A) ಉತ್ಪಾದನೆಯ ಗುಣಮಟ್ಟ ಕಡಿಮೆ ಮಾಡುತ್ತದೆ B)ಜವಾಬ್ದಾರಿಯನ್ನು ಹೆಚ್ಚಿಸುತ್ತದೆ
C)ಲಾಭವನ್ನು ಹೆಚ್ಚಿಸುತ್ತದೆ D)ಉತ್ಪಾದನಾ ವೆಚ್ಚವನ್ನು ಹೆಚ್ಚಿಸುತ್ತದೆ

7)ಗ್ರಾಮೀಣ ಭಾಗದಲ್ಲಿ ಕಂಡು ಬರುವ ಪ್ರಮುಖ ನಿರುದ್ಯೋಗದ ವಿಧವೆಂದರೆ (ಸಾಧಾರಣ)
A)ಕೈಗಾರಿಕಾ ನಿರುದ್ಯೋಗ B)ಋತುಮಾನದ ನಿರುದ್ಯೋಗ
C) ಶೈಕ್ಷಣಿಕ ನಿರುದ್ಯೋಗ D)ಸೇವಾ ವಲಯದ ನಿರುದ್ಯೋಗ

8)ಕೌಶಲ್ಯ ರಹಿತ ಉದ್ಯೋಗ ಇದಕ್ಕೆ ಕಾರಣವಾಗುತ್ತದೆ (ಕಠಿಣ)
A) ಹೆಚ್ಚಿನ ದಕ್ಷತೆ B)ಹೆಚ್ಚಿನ ಕೂಲಿ C)ಕಡಿಮೆ ಕೂಲಿ D)ಹೆಚ್ಚಿನ ಜವಾಬ್ದಾರಿ

9)ಪುನರುತ್ಪಾದನಾ ಶ್ರಮಕ್ಕೆ ಉದಾಹರಣೆ ಎಂದರೆ (ಕಠಿಣ)
A)ಶಾಲೆಯಲ್ಲಿ ಶಿಕ್ಷಕನ ಬೋಧನೆ ಮಾಡುವುದು B)ಮಹಿಳೆಯರು ಕೈಗಾರಿಕೆಯಲ್ಲಿ ಕೆಲಸ ಮಾಡುವುದು
C)ಮನೆಯಲ್ಲಿ ತಾಯಿ ತನ್ನ ಮಗುವಿನ ಆರೈಕೆ ಮಾಡುವುದು D)ಆಸ್ಪತ್ರೆಯಲ್ಲಿ ವೈದ್ಯರು ರೋಗಿಗೆ ಚಿಕಿತ್ಸೆ ನೀಡುವುದು

10) ಶ್ರಮ ವಿಭಜನೆಯ ಪ್ರಮುಖ ಅನಾನುಕೂಲ (ಕಠಿಣ)
A) ಶ್ರಮದ ದಕ್ಷತೆ ಹೆಚ್ಚುತ್ತದೆ B)ಉತ್ಪಾದನೆ ಗುಣಮಟ್ಟ ಹೆಚ್ಚಾಗುತ್ತದೆ
C) ಕೆಲಸದಲ್ಲಿ ಏಕತಾನತೆ ಉಂಟಾಗುತ್ತದೆ D)ಸರಾಸರಿ ವೆಚ್ಚ ಕಡಿಮೆ ಯಾಗುತ್ತದೆ

11) ಮಹಿಳೆಯರ ಸಾಮಾಜಿಕ ಆರ್ಥಿಕ ಸ್ಥಾನಮಾನವನ್ನು ಪ್ರಭಾವಿಸುವ ಅಂಶವೆಂದರೆ (ಕಠಿಣ)
A) ಮಹಿಳೆಯರು ಕೆಲಸದಲ್ಲಿ ಕಡಿಮೆ ಭಾಗವಹಿಸುವುದು B)ಮಹಿಳೆಯರಿಗೆ ಹೆಚ್ಚಿನ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವುದು C)ಲಿಂಗ ತಾರತಮ್ಯ D)ಮಹಿಳೆಯರನ್ನು ಮನೆಗೆ ಸೀಮಿತಗೊಳಿಸುವುದು

12)ಭಾರತದಲ್ಲಿ ನಿರುದ್ಯೋಗ ಹೆಚ್ಚಳಕ್ಕೆ ಪ್ರಮುಖ ಕಾರಣ (ಸುಲಭ)
A) ಕೌಶಲ್ಯ ಸಹಿತ ಕಾರ್ಮಿಕರ ಕೊರತೆ B) ಜನಸಂಖ್ಯೆ ಹೆಚ್ಚಳ
C)ಹೆಚ್ಚಿನ ಕೂಲಿ D)ಕೈಗಾರಿಕಾ ಪ್ರಗತಿ

13)ಜೀತ ಪದ್ಧತಿ ರದ್ಧತಿ ಕಾಯ್ದೆ ಜಾರಿಗೆ ಬಂದ ವರ್ಷ (ಸಾಧಾರಣ)
A) 1976 B)1996 C)1986 D)1972

14) 1986ರ ಬಾಲಕಾರ್ಮಿಕ ನಿಷೇಧ ಕಾಯ್ದೆಯು ಈ ವಯಸ್ಸಿನ ಒಳಗಿನ ಮಕ್ಕಳನ್ನು ಅಪಾಯಕಾರಿ ಉದ್ಯೋಗಗಳಲ್ಲಿ ದುಡಿಯಲು ನೇಮಿಸಿಕೊಳ್ಳುವುದನ್ನು ನಿಷೇಧಿಸಿದೆ (ಸುಲಭ)
A)18 ವರ್ಷದೊಳಗಿನ B)16 ವರ್ಷದೊಳಗಿನ C)14 ವರ್ಷದೊಳಗಿನ D)12 ವರ್ಷದೊಳಗಿನ

II) ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ :

16)ಶ್ರಮವನ್ನು ಅರ್ಥೈಸಿ. (ಸಾಧಾರಣ)

17)ಉತ್ಪಾದನಾಂಗಗಳು ಯಾವುವು? (ಸುಲಭ)

18)ಕೌಶಲ್ಯ ರಹಿತ ಶ್ರಮಕ್ಕೆ ಉದಾಹರಣೆ ಬರೆಯಿರಿ. (ಸಾಧಾರಣ)

19)ಪುನರುತ್ಪಾದನಾ ಶ್ರಮ ಎಂದರೇನು? (ಸಾಧಾರಣ)

20) ಶ್ರಮ ವಿಭಜನೆಯ ಮಹತ್ವವೇನು? (ಸಾಧಾರಣ)
21)ಗ್ರಾಮೀಣ ಜನರು ನಗರಗಳಿಗೆ ವಲಸೆ ಬರಲು ಪ್ರಮುಖ ಕಾರಣವೇನು? (ಸಾಧಾರಣ)
22)ಋತುಮಾನದ ನಿರುದ್ಯೋಗಕ್ಕೆ ಪ್ರಮುಖ ಕಾರಣವೇನು? (ಕಠಿಣ)
23)ಬಾಲಕಾರ್ಮಿಕ ಎಂದರೆ ಯಾರು? (ಸುಲಭ)
24)ಬಾಲಕಾರ್ಮಿಕ ನಿಷೇಧ ಕಾಯ್ದೆಯನ್ನು ಯಾವಾಗ ಜಾರಿಗೆ ತರಲಾಯಿತು? (ಸುಲಭ)
25)ನಿರುದ್ಯೋಗ ಎಂದರೇನು? (ಸುಲಭ)

III. ಈ ಪ್ರಶ್ನೆಗಳನ್ನು ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

26)ಶ್ರಮದ ವಿಧಗಳು ಯಾವುವು? (ಸಾಧಾರಣ)
27)ಜೀತ ಕಾರ್ಮಿಕ ಎಂದರೆ ಯಾರು? ಜೀತ ಕಾರ್ಮಿಕ ಪದ್ಧತಿ ರದ್ದತಿ ಕಾಯ್ದೆಯನ್ನು ಯಾವಾಗ ಜಾರಿಗೊಳಿಸಲಾಗಿದೆ? (ಸಾಧಾರಣ)
28)ಮರೆ ಮಾಚಿದ ನಿರುದ್ಯೋಗ ಮತ್ತು ಋತುಮಾನದ ನಿರುದ್ಯೋಗದ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ. (ಕಠಿಣ)

IV. ಈ ಪ್ರಶ್ನೆಗಳನ್ನು ಆರು ವಾಕ್ಯಗಳಲ್ಲಿ ಉತ್ತರಿಸಿ.

29)ಶ್ರಮದ ಲಕ್ಷಣಗಳನ್ನು ಪಟ್ಟಿ ಮಾಡಿ. (ಸಾಧಾರಣ)
30) ಉತ್ಪಾದನೆಯಲ್ಲಿ ಶ್ರಮದ ಮಹತ್ವವನ್ನು ಬರೆಯಿರಿ. (ಕಠಿಣ)
31) ಉತ್ಪಾದನಾಶ್ರಮವು ಪುನರುತ್ಪಾದನ ಶ್ರಮಕ್ಕಿಂತ ಹೇಗೆ ಭಿನ್ನವಾಗಿದೆ? (ಕಠಿಣ)

V. ಈ ಪ್ರಶ್ನೆಗಳನ್ನು ಎಂಟು ವಾಕ್ಯಗಳಲ್ಲಿ ಉತ್ತರಿಸಿ

32)ಶ್ರಮ ವಿಭಜನೆಯ ಅನುಕೂಲಗಳು ಮತ್ತು ಅನಾನುಕೂಲಗಳನ್ನು ಪಟ್ಟಿ ಮಾಡಿ. (ಸಾಧಾರಣ)
33. ನಿರುದ್ಯೋಗದ ವಿಧಗಳನ್ನು ಪಟ್ಟಿ ಮಾಡಿ. (ಸಾಧಾರಣ)
34) ಲಿಂಗ ತಾರತಮ್ಯ ಕುರಿತು ಬರೆಯಿರಿ. (ಕಠಿಣ)

ವ್ಯವಹಾರ ನಿರ್ವಹಣೆ ಅಧ್ಯಾಯ 33.

ಮಾರುಕಟ್ಟೆ ನಿರ್ವಹಣೆ

ಕಲಿಕಾಫಲ: ಮಾರುಕಟ್ಟೆ ಅರ್ಥ,ವಿಧಗಳು,ಪ್ರಾಮುಖ್ಯತೆ,ಗ್ರಾಹಕರ ಹಕ್ಕುಗಳು, ಗ್ರಾಹಕ ವೇದಿಕೆಗಳ ಪರಿಚಯ ಪಡೆಯುವರು.

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಸಂಪೂರ್ಣ ಉತ್ತರವನ್ನು ಬರೆಯಿರಿ.

1) ಎಲ್ಲಿ ಬೇಕಾದರು ಮಾರಾಟ ಮತ್ತು ಕೊಳ್ಳುವಿಕೆ ನಡೆಯುವ ಮಾರುಕಟ್ಟೆ (ಸಾಧಾರಣ)

A) ಭೌಗೋಳಿಕ ಮಾರುಕಟ್ಟೆ, B) ಚಿಲ್ಲರೆ ಮಾರುಕಟ್ಟೆ .

C) ಸಾಂಪ್ರದಾಯಿಕ ಮಾರು ಕಟ್ಟೆ . D)ಅಸಾಂಪ್ರದಾಯಕ ಮಾರುಕಟ್ಟೆ .

2) ಸರಕು ಸೇವೆಗಳ ವಿಶಿಷ್ಟ ಲಕ್ಷಣಗಳನ್ನು ಹೊಂದಿದ ಪರ್ಯಾಯ ಸಂಯೋಜನೆ (ಸಾಧಾರಣ)

A) ಉತ್ಪನ್ನ ಮಿಶ್ರಣ B) ಬೆಲೆ ಮಿಶ್ರಣ C) ಸ್ಥಳ ಮಿಶ್ರಣ D)ಪ್ರವರ್ತನೆ ಮಿಶ್ರಣ .

3) ಗ್ರಾಹಕ ಕಾಯ್ದೆ ಜಾರಿಗೊಳಿಸಿದ ಉದ್ದೇಶ (ಸಾಧಾರಣ)

A) ಗ್ರಾಹಕ ಜಾಗೃತಿ B) ಮಧ್ಯವರ್ತಿಗಳ ನಿಯಂತ್ರಣ C) ಕರಾರುಗಳ ರೂಪಿಸಲು D)ಗ್ರಾಹಕರಿಗೆ ನ್ಯಾಯ ಒದಗಿಸಲು .

4) ಒಂದು ಕೋಟಿಗಿಂತ ಕಡಿಮೆ ಮೌಲ್ಯದ ದೂರುಗಳನ್ನು ಸ್ವೀಕರಿಸುವ ಗ್ರಾಹಕ ವೇದಿಕೆ . (ಸಾಧಾರಣ)

A) ರಾಜ್ಯ ಆಯೋಗ B) ಜಿಲ್ಲಾ ಆಯೋಗ C) ರಾಷ್ಟ್ರೀಯ ಆಯೋಗ D)ಅಂತರಾಷ್ಟ್ರೀಯ ಆಯೋಗ .

5) ನೀವು ಓರ್ವ ಹಣ್ಣಿನ ವ್ಯಾಪಾರಿಯಾಗಿ ದೇಶದ ಬೇರೆ ಬೇರೆ ಪ್ರದೇಶದಲ್ಲಿ ಬೆಳೆದ ಹಣ್ಣುಗಳನ್ನು ತಂದು ನಿಮ್ಮ ಪ್ರದೇಶದಲ್ಲಿ ಮಾರಿದರೆ, (ಕಠಿಣ)

A)ರಾಷ್ಟ್ರೀಯ ಮಾರುಕಟ್ಟೆ B)ಪ್ರಾದೇಶಿಕ ಮಾರುಕಟ್ಟೆ C)ಸ್ಥಳೀಯ ಮಾರುಕಟ್ಟೆ D)ಅಂತರರಾಷ್ಟ್ರೀಯ ಮಾರುಕಟ್ಟೆ

6) ಫ್ಲಿಪ್ ಕಾರ್ಟ್, ಅಮೆಜಾನ್,ಮೀಶೋಗಳಲ್ಲಿ ವಸ್ತುಗಳನ್ನು ಕೊಳ್ಳುವುದು (ಸಾಧಾರಣ)

A)ಅಂತರ್ಜಾಲ ಮಾರುಕಟ್ಟೆ B)ಟೆಲಿ ಶಾಪಿಂಗ್ C)ಪ್ರಾಸ್ತಾವಿಕ ಮಾರುಕಟ್ಟೆ D)ಅಂಚೆ ಮಾರುಕಟ್ಟೆ

II) ಈ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿರಿ :

7) ಮಾರುಕಟ್ಟೆಯ ಸರಕಿನ ಆಧಾರದ ಮೇಲೆ ವಿಂಗಡಣೆಯನ್ನು ವಿಶ್ಲೇಷಿಸಿ. (ಕಠಿಣ)

8) ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಮಾರುಕಟ್ಟೆ ವ್ಯತ್ಯಾಸ ಬರೆಯಿರಿ . (ಸಾಧಾರಣ)

9) ಮಾರುಕಟ್ಟೆಯ ಕಾರ್ಯಗಳನ್ನು ಪಟ್ಟಿ ಮಾಡಿ . (ಸಾಧಾರಣ)

10) ಗ್ರಾಹಕರ ಹಕ್ಕುಗಳನ್ನು ಚರ್ಚಿಸಿರಿ. (ಸಾಧಾರಣ)

11) ನೀವು ಆನ್ ಲೈನ್ ವ್ಯಾಪಾರದಲ್ಲಿ ವಹಿಸಬೇಕಾದ ಮುನ್ನೆಚ್ಚರಿಕೆಯ ಕ್ರಮಗಳಾವುವು? (ಸಾಧಾರಣ)

12) ನೀವೊಬ್ಬ ಗ್ರಾಹಕನಾಗಿ ನೀವು ನಿರೀಕ್ಷಿಸುವ ಮಾರುಕಟ್ಟೆ ವ್ಯವಸ್ಥೆಯ ಸುಧಾರಣೆಗಳನ್ನು ಪಟ್ಟಿಮಾಡಿ (ಕಠಿಣ)

ಸಮಾಜ ವಿಜ್ಞಾನ

ಮಾದರಿ ಉತ್ತರಗಳು

1.ಪಾಶ್ಚಾತ್ಯ ಧರ್ಮಗಳು

I.
1. A) ಕಾನ್ಸ್ಟಂಟೈನ್
2. B) ಖಲೀಫರು
3. C) ಅಬ್ರಹಾಂ
4. D) ಪಾರ್ಸಿ
5. C) ಇಸ್ರೇಲ್
6. A) ಗಾಥಾ

II.
7. ಯಹೂದಿ
8. ಗೋಲ್ಗೊಥಾ
9. ಪಾರ್ಸಿ ಧರ್ಮ ದೇವರು ಅಹುರಾ ಮಜ್ದಾ. ಉಪವಾಸ, ಬ್ರಹ್ಮಚರ್ಯೆ ಮತ್ತು ಪರಿಶುದ್ಧತೆ ಅವರ ಆಚರಣೆಗಳು.
10. ಅಡಾಲ್ಫ್ ಹಿಟ್ಲರ್,
11. ಅಪೋಸಲ್ಸ್
12. ನೀನು ಅಲ್ಲಾನ (ದೇವರ) ಪ್ರವಾದಿ.

III.

13).. ಯಹೂದಿ, ಜೊರಾಸ್ಟ್ರಿಯನ್ ಧರ್ಮ, ಕ್ರಿಶ್ಚಿಯನ್ ಧರ್ಮ ಮತ್ತು ಇಸ್ಲಾಂ ಪಾಶ್ಚಿಮಾತ್ಯ ಪ್ರದೇಶಗಳಲ್ಲಿ ಹುಟ್ಟಿಕೊಂಡವು.

14).
- ಒಬ್ಬ ದೇವರಲ್ಲಿ ನಂಬಿಕೆ.
- ದೇವರ ಸಂದೇಶಗಳು ದೇವಧೂತನ ಮೂಲಕವ್ಯಕ್ತವಾಗುವುದು ಎಂಬುವುದರಲ್ಲಿ ನಂಬಿಕೆ.
- ಪ್ರವಾದಿಯ ಚಿಂತನೆಗಳನ್ನು ಸಂಕಲಿಸಿದ ಪವಿತ್ರ ಗ್ರಂಥದ ಅನುಸರಣೆ.
- ಅದರಲ್ಲಿ ನಿರ್ಧಿಷ್ಟ ವಿಧಿ-ನಿಷೇಧಗಳ ಪಾಲನೆ.
- ನಿರ್ದಿಷ್ಟ ಸ್ಥಳದಲ್ಲಿ ಸಾಮೂಹಿಕ ಪ್ರಾರ್ಥನೆ.

15.
- ಯೇಸುವಿನ ಶಿಲುಬೆಗೇರಿಸಿದ ನಂತರ, ಅವರ ಶಿಷ್ಯರನ್ನು ಹಿಂಸಿಸಲಾಯಿತು.
- ಅವರಲ್ಲಿ ಕೆಲವರನ್ನು ಶಿಲುಬೆಗೇರಿಸಲಾಯಿತು.
- ಚಕ್ರವರ್ತಿ ಕಾನ್ಸ್ಟಂಟೈನ್ ಸಮಯದಲ್ಲಿ, ಕ್ರಿಶ್ಚಿಯನ್ ಧರ್ಮವನ್ನು ರಾಜ್ಯ ಧರ್ಮವಾಗಿ ಸ್ವೀಕರಿಸಲಾಯಿತು.
- ತರುವಾಯ, ಕ್ರಿಶ್ಚಿಯನ್ ಧರ್ಮವು ಯುರೋಪಿನಾದ್ಯಂತ ಹರಡಿತು.
- ಇಂದು, ಕ್ರಿಶ್ಚಿಯನ್ ಚರ್ಚುಗಳು ಪ್ರಪಂಚದಾದ್ಯಂತ ಕಂಡುಬರುತ್ತವೆ ಮತ್ತು ಹೆಚ್ಚಿನ ಸಂಖ್ಯೆಯ ಅನುಯಾಯಿಗಳನ್ನು ಹೊಂದಿವೆ.

16.
- ಕಲಿಮಾ - ಅಲ್ಲಾಹನಲ್ಲಿ ಮಾತ್ರ ನಂಬಿಕೆ. ಮುಹಮ್ಮದ್ ಅವರ ಪ್ರವಾದಿ.
- ನಮಾಜ್ - ದಿನಕ್ಕೆ ಐದು ಬಾರಿ ಅಲ್ಲಾಹನಿಗಾಗಿ ಪ್ರಾರ್ಥನೆ.
- ರೋಜಾ - ರಂಜಾನ್ ತಿಂಗಳಲ್ಲಿ ಉಪವಾಸ.

- ಜಕಾತ್ - ಆದಾಯದ ನಿರ್ದಿಷ್ಟ ಮೊತ್ತವನ್ನು ಬಡವರಿಗೆ ದಾನ ಮಾಡಬೇಕು.
- ಹಜ್ - ಜೀವಿತಾವಧಿಯಲ್ಲಿ ಒಮ್ಮೆ ಮೆಕ್ಕಾಗೆ ತೀರ್ಥಯಾತ್ರೆ.

17.

- ದೇವರು ಒಬ್ಬನೇ , ಆತನೇ ಅಲ್ಲಾ. ಅಲ್ಲಾನನ್ನು ಒಲಿಸಿಕೊಳ್ಳಲು ಸರಳ ಪ್ರಾರ್ಥನೆಯೊಂದು ಸಾಕು.
- ಪ್ರಾಮಣಿಕತೆ ಮತ್ತು ನೀತಿಯುತ ಜೀವನ ನಡೆಸಬೇಕು.
- ದುಷ್ಕೃಟಗಳಿಂದ ದೂರವಿರಬೇಕು.
- ದೀನ ದುರ್ಬಲರ ಬಗ್ಗೆ ಕರುಣೆ ಹಾಗೂ ಸ್ತ್ರೀಯರ ಬಗ್ಗೆ ಗೌರವ ವಿರಬೇಕು.

IV.

18.

- 'ಯಾವೆ' ಹೊರತುಪಡಿಸಿ ಬೇರೆ ದೇವರಿಲ್ಲ
- ವಿಗ್ರುಹಗಳನ್ನು ಪೂಜಿಸಬೇಡಿ.
- ದೇವರ ಹೆಸರಿಗೆ ಕಳಂಕ ತರಬೇಡಿ
- 'ಸಬ್ಬತ್' ಅನ್ನು ಪವಿತ್ರ ದಿನವೆಂದು ಕಾಣುವುದು.
- ನಿಮ್ಮ ತಾಯಿ ಮತ್ತು ತಂದೆಯನ್ನು ಗೌರವಿಸಿ.
- ವ್ಯಭಿಚಾರ ಸಲ್ಲದು
- ಕೊಲೆ ಮಾಡಬೇಡಿ.
- ಕದಿಯಬೇಡಿ.
- ಸುಳ್ಳು ಹೇಳಬೇಡಿ.
- ಅಸೂಯೆಪಡಬೇಡಿ.

19.

- ದೇವರು ಒಬ್ಬನೇ, ದಯಾಮಯನಾದ ದೇವರು ಸರ್ವ ಜೀವರಾಶಿಗಳ ತಂದೆ
- ಪ್ರತಿಯೊಬ್ಬರಲ್ಲೂ ಸಹೋದರತ್ವ ಭಾವನೆ ಇರಬೇಕು
- ನಾವು ಕಷ್ಟದಲ್ಲಿರುವವರನ್ನು ಪ್ರೀತಿಸಿದರೆ ದೇವರನ್ನು ಪ್ರೀತಿಸಿದಂತೆ.
- ಪರರಿಂದ ಯಾವುದೇ ನಿರೀಕ್ಷೆಯಿಲ್ಲದೆ ಇತರರಿಗೆ ಸೇವೆ ಸಲ್ಲಿಸಬೇಕು.
- ಮಾನವ ಸೇವೆಯು ದೇವರ ಸೇವೆಗೆ ಸಮನಾದುದು.
- ಮಾನವ ತನ್ನ ತಪ್ಪುಗಳಿಗಾಗಿ ಪಶ್ಚಾತ್ತಾಪಪಟ್ಟರೆ ದೇವರು ಅವನನ್ನು ಕ್ಷಮಿಸುವನು.
- ನಿಮ್ಮ ಶತ್ರುವನ್ನು ಪ್ರೀತಿಸಿ. ನಿಮಗೆ ಹಾನಿ ಮಾಡಲು ಪ್ರಯತ್ನಿಸುವ ಜನರಿಗೆ ಒಳ್ಳೆಯದನ್ನು ಮಾಡಿ.

V.

20.

- ಪೈಗಂಬರರು 570 ರಲ್ಲಿ ಮೆಕ್ಕಾದಲ್ಲಿ ಜನಿಸಿದರು.
- ಅಬ್ದುಲ್ಲಾ ಮತ್ತು ಅಮೀನಾ ಅವರ ಪೋಷಕರು.
- ಅವರು ತಮ್ಮ ಚಿಕ್ಕಪ್ಪನ ಆರೈಕೆಯಲ್ಲಿ ಬೆಳೆದರು.
- ಅವರು ತಮ್ಮ ವ್ಯಾಪಾರಕ್ಕಾಗಿ ಬಹಳ ದೂರ ಪ್ರಯಾಣಿಸಬೇಕಾಯಿತು.
- ನಂತರ ಮುಹಮ್ಮದ್ ಖದೀಜಾ ಎಂಬ ಶ್ರೀಮಂತ ವಿಧವೆಯ ಮನೆಯಲ್ಲಿ ಸೇವೆ ಸಲ್ಲಿಸಲು ನೇಮಕಗೊಂಡರು.
- ನಂತರ, ಅವರು ಆ ವಿಧವೆಯನ್ನು ವಿವಾಹವಾದರು.
- ಅವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ನಾಲ್ಕು ಹೆಣ್ಣುಮಕ್ಕಳಿದ್ದರು.
- ಮಹಮ್ಮದ್ ಒಬ್ಬಂಟಿಯಾಗಿ ಆತ್ಮಾವಲೋಕನ ಮತ್ತು ಧ್ಯಾನ ಮಾಡುವ ಅಭ್ಯಾಸವನ್ನು ಹೊಂದಿದ್ದರು.
- ಅವರು ಮೆಕ್ಕಾದ ಹೀರಾ ಪರ್ವತದ ಗುಹೆಯಲ್ಲಿ ಧ್ಯಾನ ಮಾಡುತ್ತಿದ್ದರು.
- ಒಮ್ಮೆ, ಅವನು ಧ್ಯಾನ ಮಾಡುತ್ತಿದ್ದಾಗ, ಅವನಿಗೆ ದೇವದೂತನ ಧ್ವನಿ ಕೇಳಿಸಿತು.
- ದೇವದೂತನು ಮಹಮ್ಮದ್ ಅಲ್ಲಾಹನ (ದೇವರ) ಪ್ರವಾದಿ ಎಂದು ಹೇಳಿದನು.

- ಅವನು ಕೇಳಿದ ದೈವಿಕ ಸತ್ಯವನ್ನು ವ್ಯಕ್ತಪಡಿಸಿದನು.
- ಈ ಉಪದೇಶಗಳನ್ನು ಅವನ ಅನುಯಾಯಿಗಳು ಸಂಕಲಿಸಿದ್ದಾರೆ. ಇದು ಇಸ್ಲಾಂನ ಪವಿತ್ರ ಗ್ರಂಥ, "ಕುರಾನ್".
- ಮೆಕ್ಕಾದ ಸಾಂಪ್ರದಾಯಿಕ ಸಮುದಾಯವು ಪ್ರವಾದಿಯನ್ನು ವಿರೋಧಿಸಲು ಪ್ರಾರಂಭಿಸಿತು.
- 622 ರಲ್ಲಿ ಅವನು ಮೆಕ್ಕಾದಿಂದ ಮದೀನಾಕ್ಕೆ ಪ್ರಯಾಣಿಸಿದರು.
- ಈ ಪ್ರಯಾಣವು ಇತಿಹಾಸದಲ್ಲಿ 'ಹಿಜಿರಾ' ಎಂದು ಜನಪ್ರಿಯವಾಯಿತು.

.

21.

- ಯಹೂದಿಗಳು ಡೇವಿಡ್ ನನ್ನು ತಮ್ಮ ಆದಿದೊರೆ ಎಂದು ಪರಿಗಣಿಸುತ್ತಾರೆ.
- ಅವನು ತನಗಿಂತ ಅನೇಕ ಪಟ್ಟು ಬಲಶಾಲಿಯಾಗಿದ್ದ ಗೊಲಾಯತ್‌ನನ್ನು ಸೋಲಿಸಿ ಯಹೂದಿಗಳ ಆರಸನಾದನು.
- ಅವನ ಮಗ, ಪ್ರಸಿದ್ಧ ರಾಜ ಸಾಲೊಮನ್ ದೀರ್ಘಕಾಲ ಆಳ್ವಿಕೆ ನಡೆಸಿದನು.
- ಸಾಲೊಮನ್ ತನ್ನ ರಾಜ್ಯದಲ್ಲಿ ಯಹೂದಿಗಳ ಮೊದಲ ದೇವಾಲಯವನ್ನು ನಿರ್ಮಿಸಿದನು.
- ರಾಜ ಸಾಲೊಮನ್ ಮರಣದ ನಂತರ ರಾಜ್ಯವು ಎರಡು ಭಾಗವಾಯಿತು.
- ಇವುಗಳಲ್ಲಿ, ಒಂದನ್ನು ಇಸ್ರೇಲ್ ಎಂದು ಕರೆಯಲಾಗುತ್ತಿತ್ತು ಮತ್ತು ಇನ್ನೊಂದು ಜೂಡಾ
- ಮುಂದಿನ ಹಲವಾರು ಶತಮಾನಗಳಲ್ಲಿ ಇಸ್ರೇಲ್ ಮತ್ತು ಜೂಡಾ ಪ್ರದೇಶಗಳು ನಿರಂತರವಾಗಿ ದಾಳಿಗೊಳಗಾದವು
- ಈ ಕಾರಣದಿಂದಾಗಿ, ಯಹೂದಿಗಳು ಮಧ್ಯಪ್ರಾಚ್ಯದಲ್ಲಿ ಮಾತ್ರವಲ್ಲದೆ ಯುರೋಪ್, ಏಷ್ಯಾ ಮತ್ತು ಆಫ್ರಿಕನ್ ಖಂಡಗಳಲ್ಲಿಯೂ ನೆಲೆಸಬೇಕಾಯಿತು.
- ಹೀಗೆ, ಯಹೂದಿಗಳ ನಾಗರಿಕತೆಯು ಅವರ ಅಸ್ತಿತ್ವಕ್ಕಾಗಿ ಹೋರಾಟದ ಕಥೆಯಾಗಿದೆ.
- ಎರಡನೇ ಮಹಾಯುದ್ಧದ ಸಮಯದಲ್ಲಿ, ಜರ್ಮನ್ ಸರ್ವಾಧಿಕಾರಿ ಅಡಾಲ್ಫ್ ಹಿಟ್ಲರ್ 60 ಲಕ್ಷ ಯಹೂದಿಗಳನ್ನು ಕೊಂದನು.
- ಎರಡನೇ ಮಹಾಯುದ್ಧದ ಅಂತ್ಯದ ನಂತರ, ವಿಶ್ವಸಂಸ್ಥೆಯ ಸಹಾಯದಿಂದ, ಯಹೂದಿಗಳಿಗಾಗಿ ಪ್ರತ್ಯೇಕ ರಾಷ್ಟ್ರ "ಇಸ್ರೇಲ್" ರಚನೆಯಾಯಿತು.
- ಹೀಗೆ, ಪ್ರಪಂಚದಾದ್ಯಂತ ಹರಡಿಹೋಗಿದ್ದ ಯಹೂದಿಗಳು 3,000 ವರ್ಷಗಳ ನಂತರ ತಮ್ಮ ಮಾತೃಭೂಮಿಯನ್ನು ಪಡೆದರು.
- ಯಹೂದಿಗಳ ಮೂಲ ಪವಿತ್ರ ಪುಸ್ತಕ ಹೀಬ್ರೂ ಬೈಬಲ್. ಇದನ್ನು “ಓಲ್ಡ್ ಟೆಸ್ಟ್ ಮೆಂಟ್” ಎಂದೂ ಕರೆಯುತ್ತಾರೆ.
- ಟೋರಾಗಳು ಯಹೂದ್ಯರ ರಿಲಿಜನ್ ಗ್ರಂಥಗಳಾಗಿವೆ.

22.

- ಜೀಸಸ್ (ಯೇಸು)ರ ಜನನ ಸ್ಥಳವು ಜ್ಯೂಡಿಯಾ ಪ್ರಾಂತ್ಯದ ಬೆತ್ಲಹೆಂ.
- ಜೀಸಸ್‌ರು, ಜೋಸೆಫ್ ಮತ್ತು ಮೇರಿ ಎಂಬ ಬಡ ದಂಪತಿಗಳ ಏಕೈಕ ಪುತ್ರ.
- ಜೀಸಸ್ ಅರಾಮಿಕ್ ಮತ್ತು ಸೆಮಿಟಿಕ್ ಭಾಷೆಗಳನ್ನು ಬಲ್ಲವರಾಗಿದ್ದರು.
- ಇದೇ ಸಮಯದಲ್ಲಿ ಯಹೂದಿಗಳು ತಮ್ಮನ್ನು ಕಷ್ಟಗಳಿಂದ ರಕ್ಷಿಸುವ ‘ಮಸೀಹ’ ಅಥವಾ ‘ಮಹಾರಕ್ಷಕ’ನ ಆಗಮನವನ್ನು ನಿರೀಕ್ಷಿಸುತ್ತಿದ್ದರು.
- ಈ ಆಗಮನದ ಕಲ್ಪನೆ ಧಾರ್ಮಿಕ ಪ್ರವರ್ತಕರಾದ ಜಾನ್ ಎಂಬ ವ್ಯಕ್ತಿಯದಾಗಿತ್ತು.
- ಜಾನ್ ತಮ್ಮ ಬಳಿಗೆ ಬರುವ ವ್ಯಕ್ತಿಗಳಿಗೆ ದೀಕ್ಷಾ ಸ್ನಾನ ಮಾಡಿಸುವುದರ ಮೂಲಕ ದೀಕ್ಷೆ ನೀಡುತ್ತಿದ್ದರು.
- ಯೇಸು ಕ್ರಿಸ್ತರು ಸಹ ತಮ್ಮ 30 ನೇ ವಯಸ್ಸಿನಲ್ಲಿ ಜಾನ್‌ನಿಂದ ದೀಕ್ಷಾಸ್ನಾನಕ್ಕೆ ಒಳಗಾದರು.
- ಯೇಸು ಕ್ರಿಸ್ತರು ಇಸ್ರೇಲ್ ದೇಶದಲ್ಲೆಲ್ಲಾ ಸಂಚರಿಸುತ್ತಾ ಮತ ಪ್ರಚಾರ ಹಾಗೂ ಬೋಧನೆಯಲ್ಲಿ ತೊಡಗಿದರು.
- ಕಾಲಾನಂತರದಲ್ಲಿ ಯಹೂದಿಗಳು ಯೇಸು ಕ್ರಿಸ್ತರನ್ನು ತಮ್ಮ ಧಾರ್ಮಿಕ ಮುಖಂಡನನ್ನಾಗಿ ಸ್ವೀಕರಿಸಿದರು.
- ಯೇಸು ಕ್ರಿಸ್ತರು ಮೊದಲು 12 ಜನ ಶಿಷ್ಯರನ್ನು ಹೊಂದಿದ್ದರು. ಅವರನ್ನು ‘ಅಪೋಸಲ್ಸ್’ಎಂದು ಕರೆಯಲಾಗಿದೆ.

- ಧಾರ್ಮಿಕ ಡಂಭಾಚಾರಗಳನ್ನು ವಿರೋಧಿಸಿದ ಕಾರಣಕ್ಕಾಗಿ ಯಹೂದಿ ಸಂಪ್ರದಾಯವರ್ಗ ಅವರನ್ನು ವಿರೋಧಿಸಿತು.
- ರೋಮ್‌ನ ರಾಜ್ಯಪಾಲನು ಯೇಸುವಿಗೆ ಶಿಲುಬೆಗೇರಿಸುವ ಮರಣದಂಡನೆಯನ್ನು ನೀಡಿದನು.
- ಅದರಂತೆ ಗೊಲ್ಗೋಥಾ ಎಂಬಲ್ಲಿ ಯೇಸುವನು ಶಿಲುಬೆಗೇರಿಲಾಯಿತು.

ಅಧ್ಯಾಯ-2. 6 ರಿಂದ 14 ನೇ ಶತಮಾನದವರೆಗೆ ಭಾರತ

I.

1. A) ಹರಿಚಂದ್ರು
2. B) ದೇವಗಿರಿ
3. A) ರಜಿಯಾ ಸುಲ್ತಾನ
4. D) ಮೊಹಮ್ಮದ್ ಘೋರಿ
5. D) ಪೃಥ್ವಿರಾಜ ರಾಸೋ
6. A) ಸಹನಾ-ಇ-ಮಂಡಿ

II.

7. ಲಲಿತಾದಿತ್ಯ ಮುಕ್ತಪೀಡ.
8. ಮೂಲರಾಜ II
9. ಮಲಿಕ್ ಕಾಫರ್
10. ಢಂಗ
11. ಲಲಿತಾದಿತ್ಯನ ನಂತರ ಬಂದಂತಹ ರಾಜರುಗಳು ಅವನಷ್ಟು ಪ್ರತಿಭಾಶಾಲಿಗಳಾಗಿರಲಿಲ್ಲ.
12. ವಿಶಾಲವಾದ ಸಾಮ್ರಾಜ್ಯ ನಿರ್ವಹಣೆ ಮತ್ತು ಮಂಗೋಲರ ದಾಳಿಗಳಿಂದ ರಾಜಧಾನಿಯನ್ನು ರಕ್ಷಿಸುವುದಾಗಿತ್ತು.

III.

13.

- ಉಜ್ಜಯಿನಿಯನ್ನು ಆಳಿದ ನಾಗಭಟ್ಟ ಅರಬ್ ಆಕ್ರಮಣವನ್ನು ಎದುರಿಸುವಲ್ಲಿ ಯಶಸ್ವಿಯಾದನು.
- ಅವನು ತನ್ನ ಪ್ರದೇಶವನ್ನು ಗುಜರಾತ್ ಮತ್ತು ಮಾಳ್ವ, ರಜಪೂತಾನದ ಸ್ವಲ್ಪ ಭಾಗದವರಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು.

14.

- ಲಲಿತಾದಿತ್ಯನ ಆಸ್ಥಾನಕವಿಯಾಗಿದ್ದ ಕಲ್ಹಣನ ಇತಿಹಾಸ ಗ್ರಂಥವಾದ “ರಾಜತರಂಗಿಣಿ”ಯಲ್ಲಿ ಲಲಿತಾದಿತ್ಯನ ಬಹಳಷ್ಟು

ವಿವರಗಳು ಸಿಗುತ್ತವೆ.

- ಅಲ್ಲದೆ ಅಲ್‌ಬೆರೂನಿ ಬರೆದ “ತಾರಿಖ್ ಇ ಹಿಂದ್” ಕೃತಿಯೂ ಲಲಿತಾದಿತ್ಯನ ಸಾಹಸಗಳನ್ನು ಮುಕ್ತವಾಗಿ ಕೊಂಡಾಡುತ್ತದೆ.
- ಚೀನಾದ ಬಹಳಷ್ಟು ಐತಿಹಾಸಿಕ ಗ್ರಂಥಗಳಲ್ಲಿ ಈತನ ಉಲ್ಲೇಖಗಳನ್ನು ನಾವು ಗಮನಿಸಬಹುದು.

15.

- ಇಲ್ತಾಮಷ್ ತನ್ನ ರಾಜ್ಯವನ್ನು ಇಕ್ತಾಗಳು (ಪ್ರಾಂತ್ಯಗಳು) ಆಗಿ ವಿಂಗಡಿಸಿದನು ಮತ್ತು ಆಡಳಿತವನ್ನು ನಡೆಸಲು ಇಕ್ತಾಧಾರ್‌ಗಳನ್ನು (ಪ್ರಾಂತೀಯ ಅಧಿಕಾರಿಗಳು) ನೇಮಿಸಿದನು.
- ಆಡಳಿತಾತ್ಮಕ ವಿಷಯಗಳಲ್ಲಿ ಅವನಿಗೆ ಸಲಹೆ ನೀಡಲು ಅವನು ನಲವತ್ತು ಸರ್ದಾರರ ಗುಂಪನ್ನು ನೇಮಿಸಿದನು.
- ಪ್ರಧಾನ ಮಂತ್ರಿ ಮತ್ತು ನ್ಯಾಯಾಧೀಶರು ಅವನಿಗೆ ಸಲಹೆ ನೀಡುತ್ತಿದ್ದರು.
- ಇಲ್ತಾಮಷ್ ಚಿನ್ನ ಮತ್ತು ಬೆಳ್ಳಿ ನಾಣ್ಯಗಳನ್ನು ಚಲಾವಣೆಗೆ ತಂದನು.

16.

- ಕಂದಾಯ ಸುಧಾರಣೆಗಳು

- ಮಹಮ್ಮದ್ ಬಿನ್ ತುಘಲಕನು ಕೃಷಿ ಇಲಾಖೆಯನ್ನು ಸ್ಥಾಪಿಸಿದನು.
- ಉಳುಮೆ ಮಾಡದ ಭೂಮಿಯನ್ನು ಕೃಷಿಯೋಗ್ಯವನ್ನಾಗಿ ಮಾಡಲಾಯಿತು.
- ತನ್ನ ರಾಜಧಾನಿಯ ಬದಲಾವಣೆ
- ಸಾಂಕೇತಿಕ ನಾಣ್ಯಗಳ ಪ್ರಯೋಗ.

17.

- ಅಧಿಕ ತೆರಿಗೆ ಭಾರ ಜನರ ಮೇಲಿತ್ತು.
- ಸಾರಿಗೆ ಸಂಪರ್ಕ ಕಷ್ಟವಾದದ್ದರಿಂದ ಬೆಲೆಗಳು ಎಲ್ಲಾ ಭಾಗದಲ್ಲೂ ಏಕರೂಪದಲ್ಲಿರಲಿಲ್ಲ.
- ಕೃಷಿಯು ಸಂಪತ್ತಿನ ಮೂಲವಾಗಿತ್ತು.
- ದೆಹಲಿಯಲ್ಲಿ ಸುಲ್ತಾನರು ತಮ್ಮದೇ ಆದ ಕಾರ್ಖಾನೆಗಳನ್ನು ಹೊಂದಿದ್ದರು.
- ಚಿನ್ನ-ಬೆಳ್ಳಿ ಸಾಮಾಗ್ರಿ ತಯಾರಿಕೆ, ಕಸೂತಿ ಹಾಕುವಿಕೆ, ಬಟ್ಟೆ ತಯಾರಿಕೆ, ಬಣ್ಣ ಹಾಕುವಿಕೆ ಮೊದಲಾದ ಕೈಗಾರಿಕೆಗಳಿದ್ದವು.

18.

- ಎರಡನೆಯ ತರೈನ್ ಕಾಳಗದ ನಂತರ ಭಾರತದ ಮೇಲಿನ ಆಕ್ರಮಣಗಳ ಉಸ್ತುವಾರಿಯನ್ನು ಪಡೆದನು.
- ಐಬಕ್‌ನು ಮಹಮ್ಮದ್ ಘೋರಿಯ ಕಾಲದಲ್ಲಿ ಉತ್ತರ ಭಾರತದ ಉತ್ತರಾಧಿಕಾರಿಯಾದನು.
- ಘೋರಿಯ ನಂತರ ಸ್ವತಂತ್ರನಾಗಿ ಆಳಿದನು.
- ಅಧಿಕಾರ ವಹಿಸಿಕೊಂಡ ಮೇಲೆ ತನ್ನ ಸ್ಥಾನವನ್ನು ಪ್ರಬಲಗೊಳಿಸಿಕೊಳ್ಳಲು ತಾಜುದ್ದೀನ ಇಲ್ದೋಜ್‌ನ ಮಗಳನ್ನು ಇವನು ಮದುವೆಯಾದನು.
- ಐಬಕ್‌ನು ದೆಹಲಿಯಲ್ಲಿ ಕುವ್ವಾ -ಉಲ್-ಇಸ್ಲಾಂ ಮಸೀದಿಯನ್ನು ಕಟ್ಟಿಸಿದನು.
- ಇವನು ಅಲ್ಲಿಯೇ ಕುತುಬ್ ಮಿನಾರ್ ನಿರ್ಮಿಸಲು ಪ್ರಾರಂಭಿಸಿದನು.
- 'ತಾಜುಲ್ ಮಾಸಿರ್' ಐಬಕ್‌ನ ಬಗ್ಗೆ ಮಾಹಿತಿ ನೀಡುವ ಕೃತಿಯಾಗಿದೆ.

IV.

19.

- ಅಜ್ಮೀರ್‌ನಿಂದ ಬಂದ ಪೃಥ್ವಿರಾಜ್ ಚೌಹಾಣ್ ಈ ರಾಜವಂಶದ ಅತ್ಯಂತ ಪ್ರಸಿದ್ಧ ರಾಜ.
- ಬುಂದೇಲ್‌ಖಂಡದ ಚಂದೇಲ ರಾಜರನ್ನು ಅವನು ಸೋಲಿಸಿದನು.
- ಮೊದಲ ತರೈನ್ ಯುದ್ಧದಲ್ಲಿ ಅವನು ಮೊಹಮ್ಮದ್ ಘೋರಿಯನ್ನು ಸೋಲಿಸಿದನು.
- ಜಯಚಂದ್ರನ ವಿಶ್ವಾಸಘಾತುಕತನದಿಂದಾಗಿ ಎರಡನೇ ತರೈನ್ ಯುದ್ಧದಲ್ಲಿ ಸೋತನು.
- ಇದರಿಂದಾಗಿ, ಅವನ ರಾಜಧಾನಿ ದೆಹಲಿಯು ಮೊಹಮ್ಮದ್ ಘೋರಿಯ ಪಾಲಾಯಿತು.
- ಪೃಥ್ವಿರಾಜ್ ಚೌಹಾಣ್ ತನ್ನ ಧೈರ್ಯ ಮತ್ತು ಸಾಹಸಮಯ ಸ್ವಭಾವಕ್ಕೆ ಹೆಸರುವಾಸಿಯಾಗಿದ್ದನು. ಅದನ್ನು ಹಿಂದಿ ಮಹಾಕಾವ್ಯವಾದ 'ಪೃಥ್ವಿರಾಜರಾಸೋ'ದಲ್ಲಿ ವಿವರಿಸಲಾಗಿದೆ.
- ಅವನ ಕೆಲವು ತಪ್ಪು ನಿರ್ಧಾರಗಳು ಅವನ ಪತನಕ್ಕೆ ಕಾರಣವಾಯಿತು.

20.

- ರಜಪೂತ ರಾಜರು ಉತ್ತರ ಭಾರತದ ಚಿತ್ತೋಡ, ಮಾಂಡು, ರಣಥಂಬೋರ್, ಜೋಧ್‌ಪುರ ಮತ್ತು ಗ್ವಾಲಿಯರ್ ನಲ್ಲಿ ಬೃಹತ್ ಕೋಟೆಗಳನ್ನು ನಿರ್ಮಿಸಿದರು.
- ಜೈಪುರ, ಗ್ವಾಲಿಯರ್ ಮತ್ತು ಉದಯಪುರದ ಅರಮನೆಗಳು ಮತ್ತು ಮೌಂಟ್ ಅಬುವಿನಲ್ಲಿ ದಿಲಾವರ್ ದೇವಾಲಯ, ವಿಮಲ ವಸಾಯಿ ಲೂನಾ ವಸಾಯಿ ದೇವಾಲಯಗಳು ಕಲಾತ್ಮಕ ವಾಸ್ತುಶಿಲ್ಪದ ನಿರ್ಮಾಣಗಳಾಗಿವೆ.
- ಚಂದೇಲರು ಮಧ್ಯಪ್ರದೇಶದಲ್ಲಿ ಪ್ರಸಿದ್ಧ ಖಜುರಾಹೊ ಮತ್ತು ಖಂಡರಾಯ ದೇವಾಲಯವನ್ನು ನಿರ್ಮಿಸಿದರು.
- ಶೈವ ಮತ್ತು ಮೌಂಟ್ ಅಬು ಬಸದಿ, ವೈಷ್ಣವ ದೇವಾಲಯಗಳು ಅವರ ಕಾಲದಲ್ಲಿ ಪ್ರಮುಖ ನಿರ್ಮಾಣಗಳಾಗಿದ್ದವು.
- ಅವರು ಚಿತ್ರಕಲೆಯನ್ನು ಸಹ ಪ್ರೋತ್ಸಾಹಿಸಿದರು.
- ಅವರ ಚಿತ್ರಕಲೆ ಶೈಲಿಯನ್ನು 'ರಾಜಸ್ಥಾನಿ' ಮತ್ತು 'ಪಹಾರಿ' ಚಿತ್ರಕಲೆ ಶಾಲೆಗಳು ಎಂದು ಕರೆಯಲಾಗುತ್ತದೆ.

- ರಾಜಸ್ಥಾನಿ ಶೈಲಿಯ ಚಿತ್ರಕಲೆಯನ್ನು ಮೇವಾರ್, ಬಿಕನೇರ್, ಜೋಧ್‌ಪುರ, ಜೈಸಲ್ಮೇರ್ ಮತ್ತು ಭುನಿಯಲ್ಲಿ ಕಾಣಬಹುದು.
- ಪಹಾರಿ ಶೈಲಿಯ ಚಿತ್ರಕಲೆಯನ್ನು ಖಾಸೋಲಿ, ಜಮ್ಮು ಮತ್ತು ಗರ್ವಾಲ್‌ನಲ್ಲಿ ಕಾಣಬಹುದು.

21.

- ಅವಿಧೇಯ ತುರ್ಕಿ ಸರದಾರರ ದುರಾಡಳಿತ ನಿಯಂತ್ರಿಸಿದನು.
- ಮಂಗೋಲರ ದಾಳಿಯನ್ನು ತಡೆಗಟ್ಟಿ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿದನು.
- ಆಸ್ಥಾನದ ದರ್ಬಾರಿನಲ್ಲಿ ಸಂಪ್ರದಾಯ ಮತ್ತು ಶಿಷ್ಟಾಚಾರಗಳನ್ನು ತಂದನು.
- ಪರ್ಶಿಯನ್ ಶೈಲಿಯ ಆಡಂಬರದ ವೇಷಭೂಷಣ ಧರಿಸುತ್ತಿದ್ದನು.
- ತನ್ನನ್ನು ದೇವರ ಪ್ರತಿನಿಧಿಯೆಂದು ಸಾರಿ ನಿರಂಕುಶ ರಾಜಪ್ರಭುತ್ವ ಜಾರಿಗೆ ತಂದನು.
- ಅನುಭವಿ ಹಾಗೂ ವಿಶ್ವಾಸಿಕ ಸೇನಾಪತಿಗಳ ನೇತೃತ್ವದಲ್ಲಿ ಸೈನ್ಯವನ್ನು ಪುನರ್ ಸಂಘಟಿಸಿದನು.
- ಮಂಗೋಲರ ದಾಳಿ ತಡೆಗಟ್ಟಲು ವಾಯುವ್ಯ ಗಡಿ ಭಾಗದಲ್ಲಿ ಕೋಟೆಗಳನ್ನು ಕಟ್ಟಿಸಿದನು.
- ದಕ್ಷ ಆಡಳಿತಗಾರನಾಗಿದ್ದ ಬಲ್ಬನ್ನನ ನಂತರದ ಸುಲ್ತಾನ್ ಕೈಕುಬಾದ್ ಆತನು ವಜೀರನಿಂದ ಕೊಲೆಯಾದನು.

V.

22.

- ಲಲಿತಾದಿತ್ಯ ಮುಕ್ತಾಪೀಡನು 36 ವರ್ಷಗಳ ಕಾಲ (ಕ್ರಿ.ಶ. 724-760) ಆಳ್ವಿಕೆ ನಡೆಸಿದರು.
- ಕಾರ್ಕೋಟ ಸಾಮ್ರಾಜ್ಯದ ಗಡಿಗಳನ್ನು ವಿಸ್ತರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.
- ಲಲಿತಾದಿತ್ಯ ಹುಟ್ಟಿನಿಂದಲೇ ಧೈರ್ಯಶಾಲಿ ಮತ್ತು ಮಹತ್ವಾಕಾಂಕ್ಷೆಯುಳ್ಳವರಾಗಿದ್ದರು.
- ಅವರು ಕನೌಜ್‌ನ ಯಶೋವರ್ಮನನ್ನು ಸೋಲಿಸಿದರು.
- ಶಾಹಿ ರಾಜವಂಶವನ್ನು ಸೋಲಿಸುವ ಮೂಲಕ ಕಾಬೂಲ್ ಮೇಲೆ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದರು.
- ವಿಂಧ್ಯಾಚಲದ ಅನೇಕ ರಾಜರೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಉಳಿಸಿಕೊಂಡು ಈ ಭಾಗಗಳಲ್ಲಿ ಯಾರೂ ಅವರ ಶತ್ರುಗಳಾಗದಂತೆ ನೋಡಿಕೊಂಡರು.
- ಅವರು ರಾಷ್ಟ್ರಕೂಟರೊಂದಿಗೆ ಸಹ ಸ್ನೇಹ ಸಂಬಂಧಗಳನ್ನು ಬೆಳೆಸಿಕೊಂಡರು
- ಅವರು ತಮ್ಮ ಸಾಮ್ರಾಜ್ಯದ ಪ್ರಭಾವವನ್ನು ಪೂರ್ವದಲ್ಲಿ ಬಂಗಾಳದವರೆಗೆ ವಿಸ್ತರಿಸಿದರು.
- ಲಲಿತಾದಿತ್ಯ ಚೀನಾದ ಟಾಂಗ್ ರಾಜರೊಂದಿಗೆ ಸ್ನೇಹ ಬೆಳೆಸಿದರು.
- ಅವರ ಸಹಾಯದಿಂದ, ಅವರು ಟಿಬೆಟಿಯನ್ನರ ವಿರುದ್ಧ ಹೋರಾಡಿದರು ಮತ್ತು ಅವರ ನಿಯಂತ್ರಣದಲ್ಲಿದ್ದ ವಾಯುವ್ಯ ಭಾರತದ ಅನೇಕ ರಾಜ್ಯಗಳನ್ನು ಸ್ವತಂತ್ರಗೊಳಿಸಿದರು.

23.

- ಅಲ್ಲಾವುದ್ದೀನ್ ಖಿಲ್ಜಿಯು ಧಾರ್ಮಿಕ ದತ್ತಿಗಳು, ಇನಾಮ್‌ಗಳು (ಉಡುಗೊರೆ) ಭೂಮಿ ಮತ್ತು ಸಬ್ಸಿಡಿಯನ್ನು ರದ್ದುಗೊಳಿಸಿದರು.
- ಪರಿಣಾಮಕಾರಿ ಗೂಢಚರ್ಯ ವ್ಯವಸ್ಥೆ ಸ್ಥಾಪಿಸಿದರು.
- ಮದ್ಯ, ಮಾದಕ ದ್ರವ್ಯಗಳು ಮತ್ತು ಪಗಡೆ ಆಟವನ್ನು ನಿಷೇಧಿಸಿದರು.
- ಸರದಾರರ ಕೂಟವನ್ನು, ಅಂತರಜಾತಿ ವಿವಾಹ ನಿಷೇಧಿಸಿದನು.
- ಸಣ್ಣ ಭೂಮಾಲೀಕರು ಮತ್ತು ದೊಡ್ಡ ಭೂಮಾಲೀಕರು ತೆರಿಗೆ ಪಾವತಿಸಬೇಕಾಗಿತ್ತು.
- ರೈತರಿಂದ ನಿಗದಿತ ತೆರಿಗೆಗಳನ್ನು ಸಂಗ್ರಹಿಸಲು ಕಂದಾಯ ಅಧಿಕಾರಿಗಳನ್ನು ನೇಮಿಸಿದರು.
- ಸೈನಿಕರಿಗೆ ನಗದು ರೂಪದಲ್ಲಿ ಸಂಬಳ ನೀಡಲಾಗುತ್ತಿತ್ತು.
- 'ಧಾಗ್' ಎಂದು ಕರೆಯಲ್ಪಡುವ ಕುದುರೆಗಳನ್ನು ಮುದ್ರೆ ಮಾಡುವ ಪ್ರಕ್ರಿಯೆಯು ಜಾರಿಗೆ ಬಂದಿತು.
- ಸಾಮಾನ್ಯ ಜನರಿಗೆ ದ್ವಿದಳ ಧಾನ್ಯಗಳು, ಧಾನ್ಯಗಳು, ಅಡುಗೆ ಎಣ್ಣೆ, ಸಕ್ಕರೆ, ಉಪ್ಪು ಮತ್ತು ಇಂಧನವನ್ನು ನ್ಯಾಯಯುತ ಬೆಲೆಯಲ್ಲಿ ಪಡೆಯುವ ವ್ಯವಸ್ಥೆಯನ್ನು ರಚಿಸಿದರು.
- ಕುದುರೆಗಳು ಮತ್ತು ಗುಲಾಮರನ್ನು ಮಾರಾಟ ಮಾಡಲು ಮಾರುಕಟ್ಟೆಗಳನ್ನು ಸ್ಥಾಪಿಸಿದರು.

24.

- ದೆಹಲಿ ಸುಲ್ತಾನರು ಭಾರತದಲ್ಲಿ 'ಇಂಡೋ-ಇಸ್ಲಾಮಿಕ್' ಎಂಬ ಹೊಸ ಶೈಲಿಯ ವಾಸ್ತುಶಿಲ್ಪವನ್ನು ಪರಿಚಯಿಸಿದರು.

- ಕಮಾನುಗಳು, ಗುಮ್ಮಟಗಳು ಹಾಗೂ ಮಿನಾರ್‌ಗಳು ಈ ಶೈಲಿಯ ಮುಖ್ಯ ಲಕ್ಷಣಗಳು.
- ದೆಹಲಿ ಸುಲ್ತಾನರು ಕೋಟೆ, ಮಸೀದಿ, ಅರಮನೆ, ಸಾರ್ವಜನಿಕ ಕಟ್ಟಡ, ಮದರಸಾ, ಧರ್ಮಶಾಲೆಗಳನ್ನು ನಿರ್ಮಿಸಿದರು.
- ಇಂಡೋ-ಇಸ್ಲಾಮಿಕ್ ಶೈಲಿಗೆ ಉದಾಹರಣೆಗಳೆಂದರೆ, ದೆಹಲಿಯ ಕುವತ್-ಉಲ್-ಇಸ್ಲಾಂ ಮಸೀದಿ, ಕುತುಬ್ ಮಿನಾರ್, ಅಲೈ ದರವಾಜಾ, ಜಮೈತ್ ಖಾನಾ ಮಸೀದಿಗಳು. ಇತ್ಯಾದಿ

ಅಧ್ಯಾಯ- **3. ಭಾರತದ ಧಾರ್ಮಿಕ ಸುಧಾರಕರು**

I.

1. D) ಶಂಕರಾಚಾರ್ಯ
2. C) ಬಸವೇಶ್ವರ
3. A) ವಿಷ್ಣುವರ್ಧನ
4. A) ದ್ವೈತ
5. B) ರಾಮಾನುಜಾಚಾರ್ಯರು
6. C) ಬಸವೇಶ್ವರ

II

7. ಸಂತ ರಮಾನಂದ ಮತ್ತು ರಾಯಿದಾಸರು
8. ಅನುಭವ ಮಂಟಪ
9. ಗೋವಿಂದ ಭಗವತ್ಪಾದರು.
10. ಕರ್ನಾಟಕದ ಉಡುಪಿ ಸಮೀಪದ ಪಾಜಕ ಗ್ರಾಮ

11.ಜ್ಞಾನ ಮಾರ್ಗ

12. ತುಳುವ ಮತ್ತು ಅರವೀಡು ದೊರೆಗಳು

III

13.

- ಬದರಿನಾಥ - ಉತ್ತರ ಪ್ರದೇಶ ಜ್ಯೋತಿರ್ಮಠ (ಉತ್ತರ)
- ಗೋವರ್ಧನ ಮಠ - ಪುರಿ, ಒರಿಸ್ಸಾ (ಪೂರ್ವ)
- ಕಾಳಿಕಾ ಮಠ - ದ್ವಾರಕಾ, ಗುಜರಾತ್ (ಪಶ್ಚಿಮ)
- ಶಾರದ ಪೀಠ - ಶೃಂಗೇರಿ (ದಕ್ಷಿಣ)

14.

ಶೈವ ಚೋಳ ರಾಜ ರಾಮಾನುಜಾಚಾರ್ಯರನ್ನು ಪದೇ ಪದೇ ತೊಂದರೆಗೊಳಿಸುತ್ತಿದ್ದ. ಆ ಸಮಯದಲ್ಲಿ ಕರ್ನಾಟಕದ ಹೊಯ್ಸಳ ರಾಜ ವಿಷ್ಣುವರ್ಧನ ಅವರನ್ನು ಕರ್ನಾಟಕಕ್ಕೆ ಆಹ್ವಾನಿಸಿದರು. ರಾಮಾನುಜಾಚಾರ್ಯರು ಮೇಲುಕೋಟೆಗೆ ತೆರಳಿ ಚೆಲುವನಾರಾಯಣಸ್ವಾಮಿ ದೇವಸ್ಥಾನವನ್ನು ಸ್ಥಾಪಿಸಿದರು.

15.

ದ್ವೈತ ತತ್ವವನ್ನು ಪ್ರಚಾರ ಮಾಡಿದ ಮಧ್ವಾಚಾರ್ಯರ ಶಿಷ್ಯರಲ್ಲಿ ಪದ್ಮನಾಭತೀರ್ಥ, ನರಹರಿತೀರ್ಥ, ವಿಜಯೇಂದ್ರತೀರ್ಥ ಮತ್ತು ವಾದಿರಾಜತೀರ್ಥರು ಪ್ರಮುಖರು.

16.

- ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು (ವೃತ್ತಿಯನ್ನು) ನಿಷ್ಠೆಯಿಂದ ಮಾಡಿ ಬದುಕಬೇಕು.
- ಕೆಲಸ (ಕಾಯಕ) ನಮ್ಮ ನಿಜವಾದ ದೇವರು, ಆದ್ದರಿಂದ ಕೆಲಸವೇ ಪೂಜೆ (ಕಾಯಕವೇ ಕೈಲಾಸ).
- ಸ್ವಾವಲಂಬನೆಗಾಗಿ ಕಾಯಕ ತತ್ವ ಅಥವಾ ಕಾಯಕ ಧರ್ಮವನ್ನು ಪ್ರತಿಪಾದಿಸಿದರು.
- ಬಸವಣ್ಣನವರು 'ಕಾಯ'ಕ್ಕೆ ಒತ್ತು ನೀಡಿದರು ಮತ್ತು ಕೆಲಸದ ಸಂಸ್ಕೃತಿಯ ತತ್ವವನ್ನು ಎತ್ತಿಹಿಡಿದರು.
- ಕೆಲಸದಲ್ಲಿ ಯಾವುದೇ ಮೇಲು ಅಥವಾ ಕೀಳು ಇಲ್ಲ ಎಂದು ಘೋಷಿಸಿದರು.

- ಯಾವುದೇ ಕೆಲಸ ಕನಿಷ್ಠವಲ್ಲ ಮತ್ತು ಎಲ್ಲಾ ಕೆಲಸಗಳು ಶ್ರೇಷ್ಠ.
- ಶ್ರಮದ ಘನತೆಯನ್ನು ಎತ್ತಿಹಿಡಿದರು

17.

- ಶಂಕರಭಾಷ್ಯ, ಆನಂದ ಲಹರಿ, ಸೌಂದರ್ಯ ಲಹರಿ, ಶಿವಾನಂದ ಲಹರಿ, ವಿವೇಕ ಚೂಡಾಮಣಿ, ಪ್ರಬುದ್ಧ ಸುಧಾಕರ ಹಾಗೂ ದಕ್ಷಿಣಾಮೂರ್ತಿ ಸ್ತೋತ್ರ ಮುಖ್ಯವಾದ ಗ್ರಂಥಗಳು.
- ಶಂಕರರ "ಭಜ ಗೋವಿಂದ" ಸ್ತೋತ್ರವು ಅತ್ಯಂತ ಜನಪ್ರಿಯವಾಗಿದೆ.

18.

ಸತ್ಯಕ್ಕ, ಆಯ್ದಕ್ಕಿ ಲಕ್ಕಮ್ಮ, ಸಿದ್ದರಾಮ, ಚನ್ನಬಸವಣ್ಣ, ಮೋಳಿಗೆ ಮಾರಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಮಾದರ ಚೆನ್ನಯ್ಯ, ಸಮಗಾರ ಹರಳಯ್ಯ, ಕಿನ್ನರಿ ಬೊಮ್ಮಯ್ಯ ಮತ್ತಿತರರು.

IV.

19.

- ಶಂಕರಾಚಾರ್ಯರು ಉಪನಿಷತ್ತುಗಳು ಮತ್ತು ಬ್ರಹ್ಮಸೂತ್ರಗಳನ್ನು ಆಳವಾಗಿ ಅಧ್ಯಯನ ಮಾಡಿ ಅದ್ವೈತ ತತ್ವಶಾಸ್ತ್ರವನ್ನು ಪ್ರಚಾರ ಮಾಡಿದರು.
- ಅವರು ಲೌಕಿಕ ಜೀವನಕ್ಕೆ ಆದ್ಯತೆ ನೀಡಲಿಲ್ಲ, ಬದಲಾಗಿ ಆಧ್ಯಾತ್ಮಿಕ ಜಗತ್ತಿಗೆ ಹೆಚ್ಚಿನ ಒತ್ತು ನೀಡಿದರು.
- ಜಗತ್ತು ಮಾಯೆ, ಒಂದು ಭ್ರಮೆ ಎಂದು ಕರೆದನು; ಬ್ರಹ್ಮವೇ ಪರಮ ಸತ್ಯ.
- ಸಮಾಜದಲ್ಲಿರುವ ಜನರು ತಮ್ಮ ಆಂತರಿಕ ಆತ್ಮವನ್ನು (ಆತ್ಮ) ಅರಿತುಕೊಳ್ಳದೆ ಬಾಹ್ಯ ಪ್ರಪಂಚದಲ್ಲಿ ದೇವರನ್ನು ಹುಡುಕುತ್ತಾರೆ.
- ಶಂಕರಾಚಾರ್ಯರ ಪ್ರಕಾರ, ಆತ್ಮ(ಆತ್ಮ) ಮತ್ತು ಪರಮಾತ್ಮ(ದೇವರು) ಒಬ್ಬರೇ, ಆದ್ದರಿಂದ ಅಹಂ ಬ್ರಹ್ಮಾಸ್ಮಿ.
- ಅದರ ಅರ್ಥ ನಾನು ಬ್ರಹ್ಮ ಅಥವಾ ದೇವರು, ಅಂದರೆ ದೇವರು ನಮ್ಮೊಳಗಿದ್ದಾನೆ.
- ನಾವು ಜ್ಞಾನದ ಹಾದಿಯಲ್ಲಿ ಸಾಗಬೇಕು ಮತ್ತು ಪ್ರಪಂಚದ ಸ್ವರೂಪವನ್ನು ಅರಿತುಕೊಳ್ಳಬೇಕು.
- ನಾವು ನಮ್ಮ 'ಆತ್ಮ'ವನ್ನು ಸಂಪೂರ್ಣ ಸತ್ಯವಾದ ಬ್ರಹ್ಮದೊಂದಿಗೆ ವಿಲೀನಗೊಳಿಸಬೇಕು. ಆಗ ಮಾತ್ರ ನಾವು ಮೋಕ್ಷವನ್ನು (ಮುಕ್ತಿ) ಪಡೆಯಲು ಸಾಧ್ಯ.
- ಶಂಕರಾಚಾರ್ಯರ ಪ್ರಕಾರ, ದೇವರಿಗೆ ಯಾವುದೇ ಗುಣಗಳಿಲ್ಲ, ಲಕ್ಷಣಗಳಿಲ್ಲ, ಆಕಾರವಿಲ್ಲ ಮತ್ತು ದೇವರು ಅಂತಿಮ ಸತ್ಯ (ನಿರ್ಗುಣ ನಿರಾಕಾರ ನಿರ್ವಿಕಾರ).

20.

- ಮಧ್ವಾಚಾರ್ಯರು ದ್ವೈತ ತತ್ವಶಾಸ್ತ್ರವನ್ನು ಪ್ರತಿಪಾದಿಸಿದರು.
- ಮಾನವ ಆತ್ಮ ಮತ್ತು ದೈವಿಕ ಆತ್ಮಗಳು ಪ್ರತ್ಯೇಕವಾಗಿವೆ.
- ತಮ್ಮ ತತ್ವಶಾಸ್ತ್ರವನ್ನು ಪ್ರಚಾರ ಮಾಡುವ ಸಲುವಾಗಿ, ಮಧ್ವಾಚಾರ್ಯರು ವಿವಿಧ ಸ್ಥಳಗಳಿಗೆ ಪ್ರಯಾಣ ಬೆಳೆಸಿದರು ಮತ್ತು ಚರ್ಚೆಗಳಲ್ಲಿ ಭಾಗವಹಿಸಿದರು.
- ಗೋಪಿಚಂದನ ಎಂಬ ಕೆಸರಿನ ಗುಡ್ಡದಲ್ಲಿ ಅಡಗಿದ್ದ ಶ್ರೀಕೃಷ್ಣನ ವಿಗ್ರಹವನ್ನು ತಂದು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರು.
- ಶ್ರೀಕೃಷ್ಣನ ನಿಯಮಿತ ಪೂಜೆಯನ್ನು ಸಕ್ರಿಯಗೊಳಿಸಲು, ಅವರು ಯತಿಗಳನ್ನು ನಾಮಕರಣ ಮಾಡಿದರು ಮತ್ತು ನಂತರ ಅಷ್ಟಮಠಗಳು ಎಂದು ಕರೆಯಲ್ಪಡುವ 8 ಮಠಗಳನ್ನು ರಚಿಸಲಾಯಿತು.
- ಮಧ್ವಾಚಾರ್ಯರ ಪ್ರಕಾರ, ಜಗತ್ತು ಮಾಯೆ ಅಥವಾ ಭ್ರಮೆಯಲ್ಲ.
- ಅದು ಪರಮಾತ್ಮ ಅಥವಾ ದೈವಿಕ ಆತ್ಮದಷ್ಟೇ ಸತ್ಯ. ಇವುಗಳ ನಡುವೆ, ದೈವಿಕ ಆತ್ಮವು ಸ್ವತಂತ್ರವಾಗಿದೆ ಮತ್ತು ಉಳಿದ ಪ್ರಪಂಚವು ಭ್ರಮೆಯಾಗಿದೆ.
- ದೈವಿಕ ಆತ್ಮ ಮತ್ತು ಮಾನವ ಆತ್ಮವು ಭಗವಂತ ಮತ್ತು ಸೇವಕ ಸಂಬಂಧವನ್ನು ಹೊಂದಿದೆ.
- ಭಗವಾನ್ ವಿಷ್ಣು ಅಥವಾ ನಾರಾಯಣನೊಬ್ಬನೇ ಸರ್ವೋಚ್ಚ.
- ವಿಷ್ಣುವಿನ ಆರಾಧನೆಯು ಮಾನವ ಆತ್ಮವನ್ನು ಉನ್ನತೀಕರಿಸುತ್ತದೆ ಮತ್ತು ಮೋಕ್ಷವನ್ನು ಪಡೆಯಲು ಅನುವು ಮಾಡಿಕೊಡುತ್ತದೆ.

V.

21.

- ಬಸವಣ್ಣನವರು, ಆಗ ಆಚರಣೆಯಲ್ಲಿದ್ದ ಆಚರಣೆಗಳು, ಮೂಢನಂಬಿಕೆಗಳು ಮತ್ತು ಕುರುಡು ನಂಬಿಕೆಗಳನ್ನು ಖಂಡಿಸಿದರು.
- ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳನ್ನು ತರುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು.
- ಸಮಾಜದ ಸುಧಾರಣೆಯ ಜೊತೆಗೆ ಆತ್ಮದ ಸುಧಾರಣೆಗೂ ಶ್ರಮಿಸಿದರು.
- 'ದೇಹವು ದೇವಾಲಯ' ಮತ್ತು 'ಅರಿವೇ ಗುರು' ಎಂಬ ಪರಿಕಲ್ಪನೆಯೊಂದಿಗೆ ಇಷ್ಟಲಿಂಗ ರೂಪದಲ್ಲಿ ಏಕ ದೇವರ ಕಲ್ಪನೆಯನ್ನು ಪ್ರತಿಪಾದಿಸಿದರು.
- ಅವರು ಕಾಯಕ (ಕೆಲಸ), ದಾನ (ದಾಸೋಹ) ಮತ್ತು ಇಷ್ಟಲಿಂಗದಂತಹ ಹೊಸ ಪರಿಕಲ್ಪನೆಗಳನ್ನು ಹೊರತಂದರು.
- 'ಶಾಶ್ವತವಾದದ್ದು ನಾಶವಾಗುತ್ತದೆ, ಕ್ಷಣಿಕವಾದದ್ದು ಉಳಿಯುತ್ತದೆ', 'ದೇಹವು ಶಿವನ ವಾಸಸ್ಥಾನ' (ಕಾಯವೇ ಕೈಲಾಸ),
- ಬಸವಣ್ಣನವರು 'ಕಾಯಕ'ವನ್ನು ಒತ್ತಿ ಹೇಳಿದರು ಮತ್ತು ಕೆಲಸದ ಸಂಸ್ಕೃತಿಯ ತತ್ವವನ್ನು ಎತ್ತಿಹಿಡಿದರು.
- ಕೆಲಸದಲ್ಲಿ ಯಾವುದೇ ಮೇಲು ಅಥವಾ ಕೀಳು ಇಲ್ಲ ಎಂದು ಘೋಷಿಸಿದರು.
- 'ದಾಸೋಹ' ತತ್ವದ ಮೂಲಕ ಸಂಗ್ರಹಣೆ ಸಂಸ್ಕೃತಿಯನ್ನು ತೆಗೆದುಹಾಕಿದರು.
- ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಪ್ರಚಾರ ಮಾಡಿದರು.
- ವಚನಗಳನ್ನು ರಾಷ್ಟ್ರದ ಆಧ್ಯಾತ್ಮಿಕ ಬೆಳವಣಿಗೆ ಮತ್ತು ಕಲ್ಯಾಣದ ಹಿನ್ನೆಲೆಯಲ್ಲಿ ಬರೆಯಲಾಗಿದೆ.
- ವಚನಕಾರರು ಸಮಾಜದ ಲೋಪದೋಷಗಳನ್ನು ತೋರಿಸಲು ಪ್ರಯತ್ನಿಸಿದರು ಮತ್ತು ಜನರಲ್ಲಿ ಜಾಗೃತಿ ಮೂಡಿಸಿದರು.

22.

- ರಾಮಾನುಜರು ಮುಕ್ತಿ ಪಡೆಯಲು ಭಕ್ತಿಮಾರ್ಗವನ್ನು ಪ್ರತಿಪಾದಿಸಿದರು.
- ಅವರ ಬೋಧನೆಯ ಮುಖ್ಯ ವಿಷಯವೆಂದರೆ ಭಕ್ತಿ.
- ರಾಮಾನುಜರು ಜಾತಿ ಪದ್ಧತಿಯನ್ನು ಖಂಡಿಸಿದರು
- ಜನ್ಮ ತಾರತಮ್ಯವಿಲ್ಲದೆ ಎಲ್ಲಾ ಜಾತಿಯ ಭಕ್ತರಿಗೂ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡಿದರು.
- ಅಸ್ಪೃಶ್ಯರನ್ನು ಶ್ರೀಹರಿಯ ವಂಶಸ್ಥರು ಎಂದು ಕರೆಯಲಾಗುತ್ತದೆ.
- ರಾಮಾನುಜಾಚಾರ್ಯರ ತತ್ವಶಾಸ್ತ್ರವನ್ನು 'ವಿಶಿಷ್ಟಾದ್ವೈತ" ಎಂದು ಕರೆಯಲಾಗುತ್ತದೆ
- ಅವರು ಪ್ರಚಾರ ಮಾಡಿದ ಧರ್ಮವನ್ನು 'ಶ್ರೀವೈಷ್ಣವ' ಎಂದು ಕರೆಯಲಾಗುತ್ತದೆ. ಆದ್ದರಿಂದ, ಅವರ ಅನುಯಾಯಿಗಳನ್ನು ಶ್ರೀವೈಷ್ಣವರು ಎಂದು ಕರೆಯಲಾಗುತ್ತದೆ.
- ರಾಮಾನುಜಾಚಾರ್ಯರು ಜೀವನ ಮತ್ತು ಪ್ರಕೃತಿಯನ್ನು ಬ್ರಹ್ಮ ನಿಯಂತ್ರಿಸುತ್ತಾನೆ ಎಂದು ಬೋಧಿಸಿದರು.
- ಆತ್ಮ ಮತ್ತು ಪರಮಾತ್ಮ ಏಕ ಕಾಲದಲ್ಲಿ ಒಂದಾಗಲು ಸಾಧ್ಯವಿಲ್ಲ.
- ಮೋಕ್ಷವನ್ನು ಪಡೆಯಲು ಭಕ್ತಿ ಮತ್ತು ಶರಣಾಗತಿ (ಪ್ರಪತ್ತಿ) ಬಹಳ ಮುಖ್ಯ.
- ಜಾತಿವಾದವನ್ನು ಖಂಡಿಸಿ ಎಲ್ಲಾ ಜಾತಿಯ ಜನರಿಗೆ ಭಕ್ತಿಮಾರ್ಗವನ್ನು ಬೋಧಿಸಿದರು.
- ನಮ್ಮ ಆಸೆಗಳನ್ನು ತ್ಯಜಿಸಿ ದೇವರಿಗೆ ಶರಣಾಗಬೇಕು ಎಂದು ಸಲಹೆ ನೀಡಿದರು.

ಅಧ್ಯಾಯ-**4. ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ರಾಜ್ಯ**

I.

1. C) 1336
2. A) 'ಕಿತಾಬ್-ಇ-ನವರಸ'
3. B) ಅಬ್ದುಲ್ ರಜಾಕ್,

4. B) ರಕ್ಕಸತಂಗಡಿ ಕದನ
5. C) 2ನೇ ದೇವರಾಯ
6. A) ಅಮುಕ್ತಮೌಲ್ಯದ

II.

7 . ಬುಕ್ಕನು ಜೈನರು ಮತ್ತು ಶ್ರೀವೈಷ್ಣವರ ನಡುವಿನ ವ್ಯತ್ಯಾಸಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾದನು, ಆ ಮೂಲಕ ಧಾರ್ಮಿಕ ಸಾಮರಸ್ಯವನ್ನು ಎತ್ತಿಹಿಡಿದನು.
8. ಫಿರೋಜ್ ಷಾ.
9. ಪೋರ್ಚುಗೀಸ್ ಪ್ರವಾಸಿಗರು ಪಾಯೆಸ್ ಮತ್ತು ಬಾರ್ಬೋಸಾ,
10. ಮೊಹಮ್ಮದ್ ಷಾ,
11. ಮಧುರಾ ವಿಜಯಂ
12. ಹೋಳಿ, ದೀಪಾವಳಿ, ದಸರಾ ಹಬ್ಬ

III.

13.

- ಕೃಷ್ಣದೇವರಾಯನು ಅಧಿಕಾರಕ್ಕೆ ಬಂದಾಗ, ರಾಜ್ಯವು ವಿವಿಧ ಸಂಕೀರ್ಣ ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳನ್ನು ಎದುರಿಸಿತು.
- ಹೊಸ ಸಮುದ್ರ ಮಾರ್ಗದ ಮೂಲಕ ಆಗಮಿಸಿದ ಯುರೋಪಿಯನ್ನರು ತಮ್ಮ ವಸಾಹತುಗಳನ್ನು ಸ್ಥಾಪಿಸಿದರು.
- ಉತ್ತರದ ಮೊಘಲರು ದಕ್ಷಿಣದಲ್ಲಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಲು ಪ್ರಯತ್ನಿಸಿದರು.
- ಬಹಮನಿ ರಾಜವಂಶದ ಐದು ಶಾಹಿ ರಾಜ್ಯಗಳು ಪ್ರಬಲ ಸುಲ್ತಾನರಾದವು ಮತ್ತು ಕೃಷ್ಣದೇವರಾಯನೊಂದಿಗೆ ಯುದ್ಧಗಳಲ್ಲಿ ತೊಡಗಿದವು.
- ಇವುಗಳ ಜೊತೆಗೆ, ಉಮ್ಮತ್ತೂರು ಮತ್ತು ಒರಿಸ್ಸಾದ ರಾಜರು ನಿರಂತರ ಬೆದರಿಕೆಯ ಮೂಲವಾಗಿದ್ದರು.

14.

- ವಿಜಯನಗರವು ಪ್ರಬಲ ಸೈನ್ಯವನ್ನು ಹೊಂದಿತ್ತು.
- ಇದು ಶಾಶ್ವತ ಪಡೆಗಳ ಮೂರು ಶ್ರೇಣಿಗಳನ್ನು ಒಳಗೊಂಡಿತ್ತು, ಸಾಮಂತ ರಾಜ್ಯಗಳಿಂದ ಕಳುಹಿಸಲ್ಪಟ್ಟ ಪಡೆಗಳು ಮತ್ತು ರಾಜ ಕಾವಲುಗಾರರ ಪಡೆಗಳು (ಇದು ರಾಜನ ಭದ್ರತೆಯನ್ನು ನೋಡಿಕೊಳ್ಳುತ್ತಿತ್ತು).
- ಪದಾತಿ ದಳ, ಅಶ್ವದಳ, ಆನೆಗಳು ಮತ್ತು ಫಿರಂಗಿಗಳು ಸೈನ್ಯದ ಪ್ರಮುಖ ಬಣಗಳಾಗಿದ್ದವು.
- ಬೃಹತ್ ಆನೆಗಳು ಇದ್ದವು. ಅರೇಬಿಯಾದಿಂದ ತರಲಾದ ಕುದುರೆಗಳು ವಿಜಯನಗರದಲ್ಲಿ ಪ್ರಮುಖ ಆಕರ್ಷಣೆಯಾಗಿದ್ದವು.
- ಸೈನ್ಯದಲ್ಲಿ ನೌಕಾ ದಳವಿತ್ತು.
- ಎಲ್ಲಾ ಧರ್ಮಗಳ ಜನರು ಸೈನ್ಯದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಬಹುದಿತ್ತು.

15.

- ವಿಜಯನಗರ ಸಾಮ್ರಾಜ್ಯವು ಎಲ್ಲಾ ಧರ್ಮಗಳನ್ನು ಸಮಾನವಾಗಿ ಪ್ರೋತ್ಸಾಹಿಸಿದ ಹೆಗ್ಗಳಿಕೆಯನ್ನು ಹೊಂದಿದೆ.
- ಶ್ರೀವೈಷ್ಣವರು ಮತ್ತು ಜೈನರು ತಮ್ಮ ಧಾರ್ಮಿಕ ಭಿನ್ನತೆಗಳನ್ನು ಮರೆತು ಪರಿಪೂರ್ಣ ಸಾಮರಸ್ಯದಿಂದ ಬದುಕುವ ವಾತಾವರಣವಿತ್ತು.
- ವಿಜಯನಗರದ ಆರಂಭಿಕ ರಾಜರು ಶೈವರು ಮತ್ತು ವೀರಶೈವರನ್ನು ಪೋಷಿಸಿದರು, ಆದರೆ ನಂತರದ ರಾಜರು ವೈಷ್ಣವರನ್ನು ಪ್ರೋತ್ಸಾಹಿಸಿದರು.
- ವಿಜಯನಗರದಲ್ಲಿ, ಮುಸ್ಲಿಮರಿಗಾಗಿ ಮಸೀದಿಗಳು ಮತ್ತು ದರ್ಗಾಗಳನ್ನು ನಿರ್ಮಿಸಲಾಯಿತು.
- ವಿಜಯನಗರದ ರಾಜರು ಪೋರ್ಚುಗೀಸರೊಂದಿಗೆ ವ್ಯವಹಾರವನ್ನು ಬೆಳೆಸಿದರು ಮತ್ತು ಚರ್ಚುಗಳನ್ನು ನಿರ್ಮಿಸಲು ಅನುಮತಿ ನೀಡುವ ಮೂಲಕ ಕ್ರಿಶ್ಚಿಯನ್ ಧರ್ಮವನ್ನು ಪ್ರೋತ್ಸಾಹಿಸಿದರು.

16.

- ಆದಿಲ್ ಶಾಹಿಯ ಅತ್ಯಂತ ಪ್ರಸಿದ್ಧ ರಾಜ, ಎರಡನೇ ಇಬ್ರಾಹಿಂ ತನ್ನ 9 ನೇ ವರ್ಷದಲ್ಲಿ ಸಿಂಹಾಸನವನ್ನು ಏರಿದನು.
- ಇವನ ಆಡಳಿತ ಅವಧಿಯು ೪೭ ವರ್ಷಗಳಾಗಿದ್ದು, ಚರಿತ್ರಾರ್ಹ ಘಟನೆಗಳನ್ನು ಒಳಗೊಂಡಿದೆ.

- ರಾಜಕೀಯವಾಗಿ ಅವರು ತಮ್ಮ ದಕ್ಷ ಆಡಳಿತದಿಂದ ವಿಜಯಪುರವನ್ನು ವೈಭವದ ಉತ್ತುಂಗಕ್ಕೆ ಕೊಂಡೊಯ್ದರು ಮತ್ತು ಕಲೆ, ಸಾಹಿತ್ಯ ಮತ್ತು ಶಿಕ್ಷಣದಲ್ಲಿ ಅಗಾಧ ಪ್ರಗತಿಗೆ ಕಾರಣರಾಗಿದ್ದರು.
- ಅವರ 'ಕಿತಾಬ್-ಏ-ನವರಸ' ಪುಸ್ತಕವು ದೇವರಾದ ಗಣೇಶ, ಸರಸ್ವತಿ ಮತ್ತು ನರಸಿಂಹರ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಹಾಗೂ ಮಹಮದ್ ಪೈಗಂಬರ್ ರವರ ಬಗ್ಗೆಯೂ ಸ್ತುತಿಗಳಿವೆ.
- ಈ ಪುಸ್ತಕವು ಎರಡನೆಯ ಇಬ್ರಾಹಿಂನ ವಿದ್ವತ್ತು, ಘನತೆ ಮತ್ತು ಧಾರ್ಮಿಕ ಸಹಿಷ್ಣುತೆಗೆ ಸಾಕ್ಷಿಯಾಗಿದೆ.

17. ಸಂಗಮ, ಸಾಳುವ, ತುಳುವ ಮತ್ತು ಅರವೀಡು

18. ಕೃಷ್ಣದೇವರಾಯನು ಹಂಪೆಯಲ್ಲಿ ಕೃಷ್ಣ ದೇವಾಲಯವನ್ನು ಕಟ್ಟಿಸಿದನು. ಈತನು ತನ್ನ ಕಾಲದಲ್ಲಿ ಇನ್ನೂ ಕೆಲವು
ದೇವಾಲಯಗಳ ಜೊತೆಗೆ ಹಂಪೆಯ ವಿರೂಪಾಕ್ಷ ದೇವಾಲಯದ ಮಹಾ ರಂಗಮಂಟಪವನ್ನು ನಿರ್ಮಿಸಿದನು.

19. ಅಹಮದ್ ನಗರದ ನಿಜಾಮ್ ಷಾಹಿ, ವಿಜಯಪುರದ ಆದಿಲ್ ಷಾಹಿ, ಬಿರಾರ್ ನ ಇಮಾದ್ ಷಾಹಿ, ಬೀದರ್ ನ ಬರೀದ್
ಷಾಹಿ ಹಾಗೂ ಗೋಲ್ಕೊಂಡದ ಕುತುಬ್ ಷಾಹಿ.

IV.

20.

- ಸಂಗಮ ರಾಜವಂಶದ ಅತ್ಯಂತ ಪ್ರಸಿದ್ಧ ರಾಜ ಎರಡನೆಯ ದೇವರಾಯ.
- ಅವರು 'ಗಜ ಬೇಂಟೆಕಾರ' ಎಂಬ ಬಿರುದನ್ನು ಗಳಿಸಿದ್ದರು.
- ಒರಿಸ್ಸಾದ ರಾಜ ಗಜಪತಿ ಕಪಿಲೇಂದ್ರನನ್ನು ಸೋಲಿಸಿ ಕೊಂಡವೀಡನ್ನು ವಶಪಡಿಸಿಕೊಂಡರು.
- ಗಡಿಯುದ್ಧಕ್ಕೂ ಪ್ರಾದೇಶಿಕ ನಾಯಕರನ್ನು ನಿಗ್ರಹಿಸುವ ಮೂಲಕ, ಈಶಾನ್ಯದಲ್ಲಿ ಕೃಷ್ಣಾ ನದಿಯವರೆಗೆ ರಾಜ್ಯವನ್ನು ವಿಸ್ತರಿಸಿದರು.
- ಕೇರಳದ ಆಡಳಿತಗಾರನನ್ನು ಸೋಲಿಸಿ ಕೇರಳ ಮತ್ತು ಶ್ರೀಲಂಕಾದಿಂದ ರಾಜಪ್ರಭುತ್ವವನ್ನು ಪಡೆದರು.
- ಇದು ಅವರಿಗೆ "ದಕ್ಷಿಣಪಥದ ಚಕ್ರವರ್ತಿ" (ದಕ್ಷಿಣದ ಚಕ್ರವರ್ತಿ) ಎಂಬ ಬಿರುದನ್ನು ಗಳಿಸಿತು.
- ವಿಜಯನಗರ ಸಾಮ್ರಾಜ್ಯವು ಶ್ರೀಲಂಕಾದಿಂದ ಗುಲ್ಬರ್ಗ ಮತ್ತು ತೆಲಂಗಾಣ ಮಲಬಾರ್‌ವರೆಗೆ ವಿಸ್ತರಿಸಿತು.
- ಬಹಮನಿಯ ಸಾಂಪ್ರದಾಯಿಕ ಶತ್ರು ಅಹ್ಮದ್ ಷಾನನ್ನು ಬಿಜಾಪುರದವರೆಗೆ ಓಡಿಸಿ ಮುದ್ಗಲ್ ಮತ್ತು ಬಂಕಾಪುರವನ್ನು ವಶಪಡಿಸಿಕೊಂಡರು.
- ಅವರ ಸೇನಾಧಿಪತಿ ಲಕ್ಕಣ್ಣ ದಂಡೇಶ ಯಶಸ್ವಿ ನೌಕಾ ವಿಜಯವನ್ನು ಸಾಧಿಸಿದನು.
- ಎರಡನೇ ದೇವರಾಯ ಇತರ ಧರ್ಮಗಳ ಬಗ್ಗೆ ಸಹಿಷ್ಣುನಾಗಿದ್ದರು.
- ಅವರು ರಾಜಧಾನಿಯಲ್ಲಿ ಮಸೀದಿಗಳು, ಜೈನ ಮತ್ತು ವೈಷ್ಣವ ದೇವಾಲಯಗಳನ್ನು ನಿರ್ಮಿಸಿದರು.

21.

- ವಿಜಯನಗರ ರಾಜರು ಚಾಲುಕ್ಯರು, ಚೋಳರು ಮತ್ತು ಹೊಯ್ಸಳರ ವಾಸ್ತುಶಿಲ್ಪ ಶೈಲಿಯನ್ನು ಮುಂದುವರೆಸಿದರು.
- ಅವರ ವಾಸ್ತುಶಿಲ್ಪದ ವಿಶಿಷ್ಟ ಲಕ್ಷಣವೆಂದರೆ ವಿಶಾಲ ಸಭಾ ಮಂಟಪ ಮತ್ತು ಕಲ್ಯಾಣ ಮಂಟಪಗಳ ನಿರ್ಮಾಣ.
- ದೇವಾಲಯಗಳು ಬೃಹತ್ ಗೋಪುರಗಳು (ರಾಯಗೋಪುರ), ಪತ್ರಾಕೃತಿಯ ಕಮಾನುಗಳು ಮತ್ತು ಮಂಟಪಗಳನ್ನು ಹೊಂದಿದ್ದವು.
- ಅಲಂಕಾರಕ್ಕಿಂತ ಹೆಚ್ಚಾಗಿ, ಭವ್ಯತೆ, ವಿಸ್ಮಯ ಮತ್ತು ಸೊಬಗಿನ ಗುಣಗಳಿಗೆ ಪ್ರಾಮುಖ್ಯತೆ ನೀಡಲಾಯಿತು.
- ಈ ರಚನೆಗಳ ನಿರ್ಮಾಣಕ್ಕೆ ಒರಟಾದ ಗ್ರಾನೈಟ್ ಕಲ್ಲು (ಕಣಶಿಲೆ) ಬಳಸಲ್ಪಟ್ಟಿತು.
- ವಿಜಯನಗರ ರಾಜರ ಅವಧಿಯಲ್ಲಿ, ಹಂಪಿ, ಶೃಂಗೇರಿ, ತಿರುಪತಿ, ಲೇಪಾಕ್ಷಿ, ಕಾರ್ಕಳ, ಮೂಡಬಿದ್ರಿ, ಭಟ್ಕಳ, ಚಿದಂಬರಂ, ಕಾಳಿಹಸ್ತಿ, ನಂದಿ, ಶ್ರೀಶೈಲ, ಕೋಲಾರ ಮತ್ತು ಇತರ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸಲಾಯಿತು.
- ಶೃಂಗೇರಿಯಲ್ಲಿರುವ ವಿದ್ಯಾಶಂಕರ ದೇವಾಲಯದ ರಚನೆಯು ಭಾರತದಲ್ಲಿ ವಿಶಿಷ್ಟವಾಗಿದೆ.
- ವಿಜಯನಗರದ ಅತ್ಯಂತ ಪ್ರಾಚೀನ ದೇವಾಲಯವೆಂದರೆ ಹಂಪಿಯಲ್ಲಿರುವ ವಿರೂಪಾಕ್ಷ ದೇವಾಲಯ.
- ಹಂಪಿಯ ವಿಜಯ ವಿಠ್ಠಲ ದೇವಾಲಯವು ಭವ್ಯವಾದ ವಾಸ್ತುಶಿಲ್ಪದ ಸೌಂದರ್ಯಕ್ಕೆ ಹೆಸರುವಾಸಿಯಾಗಿದೆ.

- ಸಪ್ತಸ್ವರ ಸಂಗೀತ ಸ್ತಂಭಗಳು, ಬೃಹತ್ ಕಲ್ಯಾಣ ಮಂಟಪಗಳು ಮತ್ತು ಕಲ್ಲಿನ ರಥವು ಈ ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿವೆ.
- ಕೃಷ್ಣದೇವರಾಯ ನಿರ್ಮಿಸಿದ ಮಹಾನವಮಿ ದಿಬ್ಬದಲ್ಲಿ ದಸರಾ ಉತ್ಸವವನ್ನು ಆಚರಿಸಲಾಯಿತು.
- ಕಮಲ ಮಹಲ್, ಆನೆಯ ಲಾಯ, ರಾಣಿಯ ಸ್ನಾನಗೃಹ ಇಂಡೋ-ಮುಸ್ಲಿಂ ವಾಸ್ತುಶಿಲ್ಪ ಶೈಲಿಯ ಅದ್ಭುತ ಉದಾಹರಣೆಗಳಾಗಿವೆ.
- ಲಕ್ಷ್ಮಿನರಸಿಂಹ, ಕಡಲೆಕಾಳು ಗಣೇಶ, ಸಸುವೇಕಾಳು ಗಣೇಶ ಮತ್ತು ಉದ್ದಾನ ವೀರಭದ್ರನ ವಿಗ್ರಹಗಳು ಆಕರ್ಷಕವಾಗಿವೆ.

22.

- ಭೂಕಂದಾಯ ರಾಜ್ಯದ ಪ್ರಮುಖ ಆದಾಯದ ಮೂಲವಾಗಿತ್ತು.
- ವೃತ್ತಿ ತೆರಿಗೆ, ಮನೆ ಕಂದಾಯ, ದಾರಿಸುಂಕ, ವಾಣಿಜ್ಯ ತೆರಿಗೆ ಆಮದು-ರಫ್ತು ತೆರಿಗೆ, ಸಾಂಆಂತರಿಂದ ಬರುವ ಕಪ್ಪ ಕಾಣಿಕೆಗಳು ರಾಜ್ಯದ ಆದಾಯದ ಮೂಲಗಳಾಗಿದ್ದವು.
- ಕೈಗಾರಿಕೆ ಮತ್ತು ವಾಣಿಜ್ಯನ ಕ್ಷೇತ್ರದಲ್ಲಿ ಮಹತ್ತರ ಪ್ರಗತಿಯನ್ನು ಸಾಧಿಸಿತ್ತು.
- ಮೆಣಸು, ಲವಂಗ, ಏಲಕ್ಕಿ ಮುಂತಾದ ಮಸಾಲೆ ಸಾಮಾನುಗಳು, ಪೆಟ್ಲುಪ್ಪು (ಸೋರುಪ್ಪು), ಕಬ್ಬಿಣದ ಅದಿರು, ವಜ್ರ, ಕಲ್ಲುಸಕ್ಕರೆ, ಕಸ್ತೂರಿ, ಶ್ರೀಗಂಧ, ಸುಗಂಧ ದ್ರವ್ಯ ಮುಂತಾದವುಗಳನ್ನು ರಫ್ತು ಮಾಡುತ್ತಿದ್ದರು.
- ಬಟ್ಟೆ ನೇಯ್ಗೆಯ ಮುಖ್ಯ ಕೈಗಾರಿಕೆಗಳು ಇದ್ದವು.
- 'ಚಿನ್ನದ ವರಹ', 'ಗದ್ಯಾಣ' ಮತ್ತು'ಪಗೋಡ', ಬೆಳ್ಳಿಯ 'ತಾರಾ', ತಾಮ್ರದ 'ಪಣ', 'ದುಡ್ಡು' ಮತ್ತು 'ಕಾಸು'ಗಳು ಬಳಕೆಯಲ್ಲಿದ್ದವು.
- ಭಟ್ಕಳ, ಹೊನ್ನಾವರ, ಮಂಗಳೂರು ವಿಜಯನಗರ ಸಾಮ್ರಾಜ್ಯದ ಮುಖ್ಯ ಬಂದರುಗಳಾಗಿದ್ದು,
- ಅರಬ್, ಚೀನಾ, ಪೋರ್ಚುಗಲ್ ಮುಂತಾದ ವಿದೇಶಿ ವ್ಯಾಪಾರಿಗಳು ಸಾಮ್ರಾಜ್ಯದ ಸಂಪರ್ಕ
- ಹೊಂದಿದ್ದರು

V.

23.

- ರಾಬರ್ಟ್ ಸುವೆಲ್ ಉಲ್ಲೇಖಿಸಿದಂತೆ, "ಕೃಷ್ಣದೇವರಾಯ ಒಬ್ಬ ಅಪ್ರತಿಮ ಯೋಧ, ಚತುರ ಸೇನಾಧಿಪತಿ ಮತ್ತು ರಾಜಕೀಯ ತಜ್ಞ.
- ಎಲ್ಲಾ ಯುದ್ಧಗಳನ್ನು ಗೆದ್ದು ದಕ್ಷಿಣದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದರು."
- ಅವನುಉಮ್ಮತ್ತೂರಿನ ಗಂಗರಾಜನನ್ನು ಸೋಲಿಸಿ ಅವನಿಂದ ಶಿವನಸಮುದ್ರ ಕೋಟೆಯನ್ನು ವಶಪಡಿಸಿಕೊಂಡರು.
- ರಾಯಚೂರು ಕೋಟೆಯನ್ನು ವಶಪಡಿಸಿಕೊಂಡರು.
- ಬಿಜಾಪುರ ಸುಲ್ತಾನನಿಂದ ಗೋವಾವನ್ನು ವಶಪಡಿಸಿಕೊಳ್ಳಲು ಪೋರ್ಚುಗೀಸ್ ಸೈನ್ಯಕ್ಕೆ ಸಹಾಯ ಮಾಡಿದನು ಮತ್ತು ಅವರೊಂದಿಗೆ ವ್ಯಾಪಾರ ಸಂಬಂಧವನ್ನು ಸ್ಥಾಪಿಸಿದರು.
- ಅವನು ಉದಯಗಿರಿ ಕೋಟೆಯ ಮೇಲೆ ದಾಳಿ ಮಾಡಿದನು. ಇದು ಅವನ ದೃಢನಿಶ್ಚಯವನ್ನು ತೋರಿಸುತ್ತದೆ.
- ಕಳಿಂಗದ ರಾಜಧಾನಿ ಕಟಕ್ ಅನ್ನು ವಶಪಡಿಸಿಕೊಂಡನು ಮತ್ತು ಗಜಪತಿ ಪ್ರತಾಪರುದ್ರನನ್ನು ಸೋಲಿಸಿದನು. ಅವನೊಂದಿಗೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದರು.
- ಕೃಷ್ಣದೇವರಾಯನು ವಿಜಯಪುರದ (ಬಿಜಾಪುರ) ಆದಿಲ್ ಶಾಹಿಯನ್ನು ಸೋಲಿಸಿ ರಾಯಚೂರು ಕೋಟೆಯನ್ನು ಗೆದ್ದರು.
- ರಾಯಚೂರು ಬೀದರ್ ಮತ್ತು ಕಲಬುರಗಿ (ಗುಲ್ಬರ್ಗ) ಕೋಟೆಗಳನ್ನು ವಶಪಡಿಸಿಕೊಂಡರು.
- ಬಹಮನಿ ಸಾಮ್ರಾಜ್ಯದ ಪ್ರಧಾನ ಮಂತ್ರಿ ಕಾಸಿಮ್ ಬರೀದ್‌ನನು ಸೋಲಿಸಿ ಬಹಮನಿ ರಾಜಕುಮಾರನನ್ನು ಬಿಡುಗಡೆ ಮಾಡಿ ಆತನನ್ನು ಬಹಮನಿ ಸಿಂಹಾಸನದ ಮೇಲೆ ಕೂರಿಸಿದನು ಮತ್ತು "ಯವನರಾಜ್ಯ ಪ್ರತಿಷ್ಠಾಪನಾಚಾರ್ಯ" ಎಂಬ ಬಿರುದನ್ನು ಗಳಿಸಿದರು.

24.

- ಮೊಹಮ್ಮದ್ ಗವಾನ್ ನಿಸ್ವಾರ್ಥತೆ ಮತ್ತು ಸಮರ್ಪಣೆಯೊಂದಿಗೆ ರಾಜ್ಯವನ್ನು ಆಳಿದರು.
- ಪ್ರಧಾನ ಮಂತ್ರಿಯಾಗಿ, ಅವರು ಬಹಮನಿ ರಾಜ್ಯವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದರು.

- ಅವರು ಕೈರೋದಲ್ಲಿ ಮುಸ್ಲಿಂ ಧಾರ್ಮಿಕ ವಚನಗಳು ಮತ್ತು ಕಾನೂನನ್ನು ಕಲಿತರು, ಅರೇಬಿಕ್ ಮತ್ತು ಪಾರ್ಸಿ ಭಾಷೆಗಳಲ್ಲಿಯೂ ಪ್ರಾವೀಣ್ಯತೆಯನ್ನು ಪಡೆದರು.
- ಬಹಮನಿ ಸುಲ್ತಾನರಾದ ಹುಮಾಯೂನ್, ನಿಜಾಮ್ ಶಾ ಮತ್ತು ಮೂರನೇ ಮೊಹಮ್ಮದ್ ಶಾರ ಆಳ್ವಿಕೆಯಲ್ಲಿ ಅವರು ಮಂತರಿಯಗಿ, ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದರು.
- ತಮ್ಮ ದಕ್ಷ ಆಡಳಿತ ಮತ್ತು ದಿಗ್ವಿಜಯದಿಂದ ಬಹಮನಿ ಸಾಮ್ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದರು.
- ಗವಾನನು ಕೊಂಕಣ, ಗೋವಾ ಮತ್ತು ಬೆಳಗಾವಿಯನ್ನು ವಶಪಡಿಸಿಕೊಂಡರು.
- ನಂತರ, ಅವನು ಒರಿಸ್ಸಾವನ್ನು ಆಕ್ರಮಿಸಿ ಕೊಂಡವೀಡನ್ನು ವಶಪಡಿಸಿಕೊಂಡರು.
- 1481 ರಲ್ಲಿ, ಅವನು ಕಾಂಚಿಯನ್ನು ಆಕ್ರಮಿಸಿ ಅದರ ಅಪಾರ ಸಂಪತ್ತನ್ನು ಲೂಟಿ ಮಾಡಿದರು.
- ಶತ್ರುಗಳ ಪಿತೂರಿಗೆ ಬಲಿಯಾಗಿ ರಾಜ್ಯ ದ್ರೋಹದ ಆರೋಪದ ಮೇಲೆ ಶಿರಚ್ಛೇದನಕ್ಕೆ ಒಳಪಟ್ಟರು.

25.

- ಕನ್ನಡ, ಸಂಸ್ಕೃತ, ತೆಲುಗು, ಮತ್ತು ತಮಿಳು ಭಾಷೆಯಲ್ಲಿ ಸಾಹಿತ್ಯ ರಚನೆಯಾಯಿತು.
- ರತ್ನಾಕರವರ್ಣಿ ಬರೆದ 'ಭರತೇಶ ವೈಭವ', ಚಾಮರಸರು ರಚಿಸಿದ 'ಪ್ರಭುಲಿಂಗಲೀಲೆ', ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾ ಮಂಜರಿ' ಕನ್ನಡದ ಮುಖ್ಯ ಕಾವ್ಯಗಳಾಗಿವೆ.
- ಭೀಮಕವಿಯು ಪಾಲ್ಕುರಿಕೆ ಸೋಮನಾಥನ ತೆಲುಗು ಕೃತಿ 'ಬಸವ ಪುರಾಣ' ವನ್ನು ಕನ್ನಡದಲ್ಲಿ ಬರೆದಿದ್ದಾನೆ.
- ಬಸವಾದಿ ಶಿವಶರಣರ ವಚನಗಳ ಸಂಕಲನವಾದ 'ಶೂನ್ಯ ಸಂಪಾದನೆ' ರಚನೆಯಾಯಿತು.
- ಲಕ್ಕಣದಂಡೇಶನ 'ಶಿವತತ್ವ ಚಿಂತಾಮಣಿ'
- ಪುರಂದರದಾಸರು, ಕನಕದಾಸರು, ಶ್ರೀಪಾದರಾಯರು, ವ್ಯಾಸರಾಯರು ದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.
- ಕನಕದಾಸರ 'ಮೋಹನ ತರಂಗಿಣಿ', 'ನಳ ಚರಿತ್ರೆ','ಹರಿಭಕ್ತಸಾರ' ಮತ್ತು 'ರಾಮಧಾನ್ಯ ಚರಿತ್ರೆ' ಮುಖ್ಯವಾದವು.
- ಸಂಸ್ಕೃತದಲ್ಲಿ ವಿದ್ಯಾರಣ್ಯರ 'ಶಂಕರ ವಿಜಯ' ಮತ್ತು 'ಸರ್ವದರ್ಶನ ಸಂಗ್ರಹ' ರಚನೆಗೊಂಡವು.
- ಸಾಯಣಾಚಾರ್ಯರು 'ವೇದಾರ್ಥ ಪ್ರಕಾಶ' ಎಂಬ ವೇದಭಾಷ್ಯ ಮತ್ತು ಆಯುರ್ವೇದ ಸುಧಾನಿಧಿ, ಪುರುಷಾರ್ಥ ಸುಧಾನಿಧಿ ಮುಂತಾದ ಕೃತಿಗಳನ್ನು ರಚಿಸಿದರು.
- ಗಂಗಾದೇವಿ 'ಮಧುರಾವಿಜಯಂ' ಎಂಬ ಕೃತಿಯನ್ನು ರಚಿಸಿದಳು.
- ಅಲ್ಲಾಸಾನಿ ಪೆದ್ದನನ ಮನುಚರಿತಮು, ತಿಮ್ಮಣನ ಪಾರಿಜಾತಾಪಹರಣಂ, ತೆನಾಲಿ ರಾಮಕೃಷ್ಣನ ಉಭತಾರಾಧಯ ಚರಿತಂ – ತೆಲುಗು ಕೃತಿಗಳು
- ಪರಂಜ್ಯೋತಿಯರ್ರ ತಿರುವಳಯಾಡಲ್ ಪುರಾಣಂ – ತಮಿಳು ಕೃತಿ

ಅಧ್ಯಾಯ- 5. ನಮ್ಮ ಸಂವಿಧಾನ

1) **A) ಬಾಬು ರಾಜೇಂದ್ರ ಪ್ರಸಾದ್**
2) **B) ಡಾ.ಬಿ.ಆರ್. ಅಬೆಂಡ್ಕರ್**
3) **B) ಸಾರ್ವಭೌಮತ್ವ**
4) **B) ಗಣತಂತ್ರ**
5) **B) ೩ನೇ**
6) **B) ಸರ್ವೋಚ್ಚ ನ್ಯಾಯಲಯ**
7) **B) ೧೮ವರ್ಷ ಮೀರಿದ ಎಲ್ಲಾ ಭಾರತೀಯ ಪೌರರಿಗೆ ಮತದಾನದ ಹಕ್ಕು ನೀಡುವುದು**
8) **D) ಸರ್ಕಾರಿ ನೌಕರರ ವೇತನ ಬಗ್ಗೆ ಮಾಹಿತಿ ಪಡೆಯುವ ಹಕ್ಕು**
9) **D) ಐರ್ಲೆಂಡ್**
10) **D) ಸಂವಿಧಾನಬದ್ದ ಪರಿಹಾರ ಹಕ್ಕು**

ಒಂದು ಅಂಕದ ಪ್ರಶ್ನೆಗಳು

11) ಸಂವಿಧಾನವು ಒಂದು ರಾಷ್ಟ್ರದ ಮೂಲಭೂತ ಕಾನೂನು.

12) ಎಲ್ಲಾ ಧರ್ಮಗಳನ್ನು ಸಮಾನತೆಯಿಂದ ಕಾಣಬೇಕೆಂಬುದನ್ನು ಪ್ರತಿಪಾದಿಸುವದೇ ಜಾತ್ಯಾತೀತತೆ.

13) ನಮ್ಮ ಸಂವಿಧಾನದ ಮೂಲ ತತ್ವಗಳು ಹಾಗೂ ಪ್ರಜೆಗಳ ಧ್ಯೇಯೋದ್ದೇಶಗಳನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ ಇದನ್ನು ಸಂವಿಧಾನದ ಕೈಗನ್ನಡಿ ಎಂದು ಕರೆಯಲಾಗುತ್ತದೆ.

14) ಕ್ಯಾಬಿನೆಟ್ ನಿಯೋಗದ ಶಿಫಾರಸ್ಸಿನ ಮೇರೆಗೆ

15) ೮೬ನೇ ಸಂವಿಧಾನ ತಿದ್ದುಪಡಿ ಕಾಯಿದೆಯ ಮೂಲಕ ೧೧ನೇ ಮೂಲಭೂತ ಕರ್ತವ್ಯವನ್ನು ಸೇರಿಸಲಾಗಿದೆ.

16) ಕೆಳಮನೆ (ಲೋಕಸಭೆ) ಮತ್ತು ಮೇಲ್ಮನೆ (ರಾಜ್ಯಸಭೆ)

ಎರಡು ಅಂಕದ ಪ್ರಶ್ನೆಗಳು

17) ಸ್ವಾತಂತ್ರ್ಯ ನಂತರ ಭಾರತ ಎದುರಿಸಿದ ಸಾವಾಲುಗಳು:

- **ಪಾಕಿಸ್ತಾನದಿಂದ ವಲಸೆ ಬಂದ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವುದು,**
- **ದೇಶೀಯ ಸಂಸ್ಥಾನಗಳ ವಿಲೀನೀಕರಣ,**
- **ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು**

18) ಸಂವಿಧಾನ ಸಭೆಗೆ ಆಯ್ಕೆಯಾದ ಕರ್ನಾಟಕದ ಸದಸ್ಯರುಗಳು

- **ಎಸ್. ನಿಜಲಿಂಗಪ್ಪ,**
- **ಕೆ.ಸಿ. ರೆಡ್ಡಿ,**
- **ಕೆಂಗಲ್ ಹನುಮಂತಯ್ಯ,**
- **ಟಿ. ಸಿದ್ದಲಿಂಗಯ್ಯ**

19) ಸಂವಿಧಾನ ಪ್ರಸ್ತಾವನೆಯಲ್ಲಿರುವ 'ಬ್ರಾತೃತ್ವ'

- **ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಏಕತೆ ಹಾಗೂ ಸಮಗ್ರತೆಗೆ ಭ್ರಾತೃತ್ವ ಅತ್ಯಗತ್ಯ.**
- **ಭೂಮಿಯ ಮೇಲೆ ವಾಸಿಸುವ ಜನರೆಲ್ಲ ಮೇಲು-ಕೀಳು, ಬಡವ-ಬಲ್ಲಿದ, ಬಿಳಿಯ-ಕರಿಯ ಎಂಬ ಅಮಾನುಷಭೇದ ಭಾವನೆಗಳನ್ನು ಬೆಳೆಸಿಕೊಳ್ಳದೇ ಬದುಕುವುದು ಭ್ರಾತೃತ್ವ.**
- **ಎಲ್ಲರಲ್ಲಿಯೂ ಸಹೋದರತ್ವದ ಭಾವನೆಯನ್ನು ಕಾಣುವುದೇ ಭ್ರಾತೃತ್ವ.'**
- **ವ್ಯಕ್ತಿಗೆ ಘನತೆ ಮತ್ತು ಗೌರವಗಳು ಅತ್ಯಗತ್ಯವಾಗಿರುವುದರಿಂದ ಯಾವುದೇ ಬೇಧ ಭಾವ ಮಾಡಬಾರದು.**

20) ಭಾರತದ ಸಂವಿಧಾನವನ್ನು ನಮ್ಯ ಹಾಗೂ ಅನಮ್ಯ ಸಂವಿಧಾನ

- ಯಾವ ದೇಶದ ಸಂವಿಧಾನವನ್ನು ಸುಲಭವಾಗಿ ತಿದ್ದುಪಡಿ ಮಾಡಬಹುದೋ ಅದನ್ನು ನಮ್ಯ ಅಥವಾ ಸರಳ ಸಂವಿಧಾನ ಎಂದು ಕರೆಯಲಾಗುತ್ತದೆ.
- ಯಾವ ಸಂವಿಧಾನದ ತಿದ್ದುಪಡಿ ವಿಶೇಷ ವಿಧಾನವನ್ನು ಒಳಗೊಂಡಿರುತ್ತದೋ ಅದನ್ನು ಅನಮ್ಯ ಅಥವಾ ಕಠಿಣ ಸಂವಿಧಾನ ಎಂದು ಕರೆಯಲಾಗುತ್ತದೆ.
- ಭಾರತದ ಸಂವಿಧಾನದ ತಿದ್ದುಪಡಿ ವಿಧಾನವು ಅತಿ ಸರಳವೂ ಆಗಿರದೆ, ಅತಿ ಕಠಿಣವೂ ಆಗಿರದೆ ಸರಳ ಮತ್ತು ಕಠಿಣತೆಗಳ ಮಿಶ್ರಣವಾಗಿದೆ.

21) ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಿಸುವುದಕ್ಕಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಲಾಗುತ್ತದೆ.

ಶಾಸನೀಯ ಹಕ್ಕುಗಳು, ಜೀವನಾವಶ್ಯಕತೆಗಳನ್ನು ಪಡೆಯುವ ಹಕ್ಕು, ಪರಿಸರ ಮಾಲಿನ್ಯದಿಂದ ಜೀವ ರಕ್ಷಣೆಯ ಹಕ್ಕು, ಗೌರವಯುತ ಜೀವನದ ಹಕ್ಕು ಮೊದಲಾದವುಗಳಿಗೆ ಸಂಬಂಧಿಸಿದಂತೆ ಈ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಮೂರು ಅಂಕದ ಪ್ರಶ್ನೆಗಳು

22) ಭಾರತದ ಸಂಸದೀಯ ವ್ಯವಸ್ಥೆ

- **ನಮ್ಮ ಸಂವಿಧಾನವು ಸಂಸದೀಯ ಸರ್ಕಾರ ಪದ್ದತಿಗೆ ಅವಕಾಶ ಮಾಡಿಕೊಟ್ಟಿದೆ.**
- **ದೇಶದ ಸಾರ್ವಭೌಮ ಅಧಿಕಾರವನ್ನು ಚುನಾಯಿತ ಸಂಸತ್ತಿಗೆ ನೀಡಲಾಗಿದೆ.**
- **ಕೇಂದ್ರ ಮತ್ತು ರಾಜ್ಯಗಳಲ್ಲಿ ಕಾರ್ಯಾಂಗವು ಶಾಸಕಾಂಗಕ್ಕೆ ಹೊಣೆಯಾಗಿದೆ.**

- ಮಂತ್ರಿಮಂಡಲವು ಶಾಸಕಾಂಗದ ವಿಶ್ವಾಸವಿರುವವರೆಗೂ ಅಧಿಕಾರದಲ್ಲಿರುತ್ತದೆ.
- ಶಾಸಕಾಂಗದ ವಿಶ್ವಾಸ ಕಳೆದುಕೊಂಡ ತಕ್ಷಣ ರಾಜೀನಾಮೆ ನೀಡಬೇಕಾಗುತ್ತದೆ.

23) ಮೂಲಭೂತ ಹಕ್ಕುಗಳು
- ಸಮಾನತೆಯ ಹಕ್ಕು,
- ಸ್ವಾತಂತ್ರ್ಯದ ಹಕ್ಕು,
- ಶೋಷಣೆಯ ವಿರುದ್ದದ ಹಕ್ಕು,
- ಧಾರ್ಮಿಕ ಸ್ವಾತಂತ್ರ್ಯದ ಹಕ್ಕು,
- ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕು ಮತ್ತು
- ಸಂವಿಧಾನಾತ್ಮಕ ಪರಿಹಾರಗಳ ಹಕ್ಕು

24) ಪ್ರಜಾಪ್ರಭುತ್ವದ ಯಶಸ್ಸಿಗೆ ಸಮಾನತೆಯ ಹಕ್ಕು ಅಗತ್ಯವಾಗಿದ್ದು,
- ಶಾಸನಾತ್ಮಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಸಮಾನತೆ ಕಲ್ಪಿಸಲಾಗಿದೆ.
- ಕಾನೂನಿನ ಮುಂದೆ ಎಲ್ಲರೂ ಸಮಾನರು, ಕಾನೂನಿಗಿಂತ ಯಾರೂ ಶ್ರೇಷ್ಠರಲ್ಲ.
- ಪ್ರತಿಯೊಬ್ಬರೂ ರಾಜ್ಯದ ಕಾನೂನಿಗೆ ಬದ್ದರಾಗಿರಬೇಕು.
- ಜಾತಿ, ಧರ್ಮ, ಲಿಂಗ, ಜನ್ಮಸ್ಥಳಗಳ ಆಧಾರದ ಮೇಲೆ ಭೇದಭಾವ ಮಾಡಬಾರದು.
- ಸಾರ್ವಜನಿಕ ಸ್ಥಳಗಳು, ಅಂಗಡಿಗಳು, ಹೋಟೆಲ್‌ಗಳು, ಮನರಂಜನಾ ಸ್ಥಳಗಳು, ದೇವಾಲಯಗಳು ಮುಂತಾದ ಸ್ಥಳಗಳಲ್ಲಿ ಯಾರೊಬ್ಬರಿಗೂ ಪ್ರವೇಶ ನಿರಾಕರಿಸಬಾರದು.
- ಸರ್ಕಾರಿ ಉದ್ಯೋಗ ಸೇರಲು ಪ್ರತಿಯೊಬ್ಬರಿಗೂ ಸಮಾನ ಅವಕಾಶ ದೊರಕಿಸಿದೆ.
- ಅಸ್ಪೃಶ್ಯತೆಯನ್ನು ಆಚರಿಸುವಂತಿಲ್ಲ.

25) ಮೂಲಭೂತ ಹಕ್ಕುಗಳಲ್ಲಿ ಸ್ವಾತಂತ್ರ್ಯದ ಹಕ್ಕು ಮಹತ್ವದ ಸ್ಥಾನ ಪಡೆದಿದೆ ಈ ಹಕ್ಕಿನಡಿಯಲ್ಲಿ
- ವಾಕ್ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ,
- ಶಸ್ತ್ರರಹಿತ ಶಾಂತಿಯುತವಾಗಿ ಸಭೆ ಸೇರುವ,
- ಸಂಘ ಸಂಸ್ಥೆಗಳನ್ನು ಸ್ಥಾಪಿಸುವ,
- ಭಾರತದಾದ್ಯಂತ ಸಂಚರಿಸುವ, ವಾಸಿಸುವ,
- ಯಾವುದೇ ವೃತ್ತಿ ಹೊಂದುವ ಸ್ವಾತಂತ್ರ್ಯ ನೀಡಲಾಗಿದೆ.
- ಪೌರರಿಗೆ ಇದು ರಕ್ಷಣಾತ್ಮಕ ಹಕ್ಕಾಗಿದ್ದು, ಸಕಾರಣವಿಲ್ಲದೆ ವ್ಯಕ್ತಿಯನ್ನು ಬಂಧಿಸುವಂತಿಲ್ಲ ಮತ್ತು
- ವ್ಯಕ್ತಿಯ ಜೀವ ಅಥವಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಂತಿಲ್ಲ.

  ನಾಲ್ಕು ಅಂಕದ ಪ್ರಶ್ನೆಗಳು

26) ಭಾರತದ ಸಂವಿಧಾನದ ಪ್ರಸ್ತಾವನೆ
- "ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ಸ್ಥಾಪಿಸಲು,
- ಅದರ ಎಲ್ಲಾ ಪೌರರಿಗೆ; ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
  ಉಪಾಸನೆಯ ಸ್ವಾತಂತ್ರ್ಯ;ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು ಎಲ್ಲರಿಗೂ ದೊರೆಯುವಂತೆ ಮಾಡುವುದಕ್ಕೆ;
- ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಯನ್ನು ರಕ್ಷಿಸಿ, ಭ್ರಾತೃತ್ವ ಭಾವನೆಯನ್ನು ಎಲ್ಲರಲ್ಲೂ ವೃದ್ಧಿಗೊಳಿಸುವುದಕ್ಕಾಗಿ
  ದೃಢಸಂಕಲ್ಪ ಮಾಡಿ,
- ನಮ್ಮ ಸಂವಿಧಾನ ರಚನಾ ಸಭೆಯಲ್ಲಿ ನವೆಂಬರ್ ೨೬ನೇ, ೧೯೪೯ ರಂದು ಈ ಸಂವಿಧಾನವನ್ನು ಅಂಗೀಕರಿಸಿ, ಕಾನೂನು ರೂಪದಲ್ಲಿ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ."

27) ಭಾರತದ ಸಂವಿಧಾನದ ಲಕ್ಷಣಗಳು
- ಲಿಖಿತ ಮತ್ತು ಬೃಹತ್ ಸಂವಿಧಾನ
- ಭಾಗಶಃ ನಮ್ಯ, ಭಾಗಶಃ ಅನಮ್ಯ ಸಂವಿಧಾನ

- **ಸಂಸದೀಯ ಸರ್ಕಾರ ಪದ್ಧತಿ**
- **ಗಣತಂತ್ರ ವ್ಯವಸ್ಥೆ**
- **ಒಕ್ಕೂಟ ವ್ಯವಸ್ಥೆ**
- **ಮೂಲಭೂತ ಹಕ್ಕುಗಳು**
- **ಮೂಲಭೂತ ಕರ್ತವ್ಯಗಳು**
- **ರಾಜ್ಯನೀತಿ ನಿರ್ದೇಶಕ ತತ್ವಗಳು**
- **ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ**
- **ಏಕ ಪೌರತ್ವ**
- **ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ**
- **ದ್ವಿಸದನ ಶಾಸಕಾಂಗ**

28) ಮೂಲಭೂತ ಕರ್ತವ್ಯಗಳು:

- ನಮ್ಮ ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
- ಸ್ವಾತಂತ್ರ್ಯ ಚಳವಳಿಯ ಸ್ಪೂರ್ತಿದಾಯಕ ಆದರ್ಶ ತತ್ವಗಳನ್ನು ಪಾಲಿಸುವುದು.
- ಭಾರತದ ಸಾರ್ವಭೌಮತೆ, ಏಕತೆ, ಸಮಗ್ರತೆಯನ್ನು ಕಾಪಾಡುವುದು ಮತ್ತು ರಕ್ಷಿಸುವುದು.
- ಅಗತ್ಯ ಬಂದಾಗ ರಾಷ್ಟ್ರವನ್ನು ರಕ್ಷಿಸಿ ದೇಶದ ಸೇವೆ ಮಾಡಬೇಕು.
- ಭಾರತೀಯರಲ್ಲಿ ಸಾಮರಸ್ಯ ಮತ್ತು ಸಹೋದರತ್ವ ಭಾವನೆಯನ್ನು ಬೆಳೆಸಬೇಕು ಮತ್ತು ಮಹಿಳೆಯರ ಗೌರವಕ್ಕೆ ಭಂಗ ತರುವ ಆಚರಣೆಗಳನ್ನು ತ್ಯಜಿಸಬೇಕು.
- ನಮ್ಮ ಸಂಘಟಿತ ಸಂಸ್ಕೃತಿಯ ಪರಂಪರೆಯನ್ನು ಗೌರವಿಸಿ ರಕ್ಷಿಸಬೇಕು.
- ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯ ಮೃಗಗಳು ಸೇರಿದಂತೆ ಪ್ರಕೃತಿ, ಪರಿಸರವನ್ನು ರಕ್ಷಿಸಿ ಅಭಿವೃದ್ಧಿಪಡಿಸಬೇಕು ಹಾಗೂ ಜೀವಂತ ಪ್ರಾಣಿಗಳಿಗೆ ಅನುಕಂಪ ತೋರಿಸಬೇಕು.
- ವೈಜ್ಞಾನಿಕ ಹಾಗೂ ಮಾನವೀಯತೆಯ ಗುಣಗಳ ವಿಚಾರಣಾ ಹಾಗೂ ಸುಧಾರಣಾ ಭಾವನೆಯನ್ನು ಬೆಳೆಸಿಕೊಳ್ಳಬೇಕು.
- ಸಾರ್ವಜನಿಕ ಆಸ್ತಿಯನ್ನು ರಕ್ಷಿಸಬೇಕು ಮತ್ತು ಹಿಂಸಾಮಾರ್ಗವನ್ನು ತ್ಯಜಿಸಬೇಕು.
- ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಪ್ರಾವೀಣ್ಯತೆಯನ್ನು ಪ್ರದರ್ಶಿಸಿ ರಾಷ್ಟ್ರದ ಪ್ರಗತಿಗೆ ಶ್ರಮಿಸಬೇಕು.
- ತಂದೆ, ತಾಯಿ ಅಥವಾ ಪೋಷಕರು ೬ ವರ್ಷದಿಂದ ೧೪ ವರ್ಷದವರೆಗೆ ತಮ್ಮ ಮಗುವಿನ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

29) ರಾಜ್ಯನೀತಿ ನಿರ್ದೇಶಕ ತತ್ವಗಳು:

- **ಎಲ್ಲಾ ಪೌರರಿಗೂ ತಮ್ಮ ಜೀವನೋಪಾಯಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದು.**
- **ಸಮುದಾಯದಲ್ಲಿನ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಕೆಲವೇ ಜನರ ಸ್ವತ್ತಾಗದಂತೆ ತಡೆಗಟ್ಟುವುದು.**
- **ಸ್ತ್ರೀ ಮತ್ತು ಪುರುಷರೆಲ್ಲರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು, ಕಾರ್ಮಿಕರ ಯೋಗಕ್ಷೇಮವನ್ನು ರಕ್ಷಿಸುವುದು.**
- **ವೃದ್ಧರು, ರೋಗಿಗಳು, ದುರ್ಬಲ ವರ್ಗದವರು ಮತ್ತು ಅಸಮರ್ಥರಿಗೆ ಸಹಾಯಧನವನ್ನು ಒದಗಿಸುವುದು.**
- **ದೇಶದಾದ್ಯಂತ ಏಕರೂಪದ ನಾಗರಿಕ ಕಾನೂನನ್ನು ಜಾರಿಗೆ ತರುವುದು.**
- **೬ ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಬಾಲ್ಯ ಪೋಷಣೆ ಮತ್ತು ಶಾಲಾ ಪೂರ್ವ ಶಿಕ್ಷಣವನ್ನು ಕೊಡಲು ರಾಜ್ಯ ಪ್ರಯತ್ನಿಸಬೇಕು.**
- **ಐತಿಹಾಸಿಕ ಸ್ಮಾರಕಗಳು ಮತ್ತು ಸ್ಥಳಗಳನ್ನು ರಕ್ಷಿಸುವುದು.**
- **ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವುದು.**
- **ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು, ರಾಷ್ಟ್ರ-ರಾಷ್ಟ್ರಗಳ ನಡುವೆ ನ್ಯಾಯಯುತವಾದ ಮತ್ತು ಗೌರವಯುತವಾದ ಸಂಬಂಧಗಳನ್ನು ಕಾಯ್ದುಕೊಂಡು ಬರುವುದು**

ಹಾಗೂ ಅಂತರರಾಷ್ಟ್ರೀಯ ವಿವಾದಗಳನ್ನು ಮಧ್ಯಸ್ತಿಕೆಯ ಮೂಲಕ ಇತ್ಯರ್ಥ ಪಡಿಸಲು ಪ್ರೋತ್ಸಾಹಿಸುವುದು.

- **ಗ್ರಾಮ ಪಂಚಾಯಿತಿಗಳನ್ನು ಸ್ಥಾಪಿಸುವುದು.**
- **ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು.**
- **ಕೃಷಿ ಹಾಗೂ ಪಶುಸಂಗೋಪನೆಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸುವುದು.**
- **ಪಾನ ನಿಷೇಧವನ್ನು ಜಾರಿಗೆ ತರುವುದು.**
- **ವೈಜ್ಞಾನಿಕ ಕೃಷಿಯನ್ನು ಪ್ರೋತ್ಸಾಹಿಸುವುದು.**

ಅಧ್ಯಾಯ- **6.**ಕೇಂದ್ರಸರ್ಕಾರ

I.

1) B) 250
2) C) ರಾಷ್ಟ್ರಪತಿ
3) C) ಉಪರಾಷ್ಟ್ರಾಧ್ಯಕ್ಷರು
4) A) 33%
5) D) ಎಲ್ಲಾ ವಿಧಾನಪರಿಷತ್ ಸದಸ್ಯರು

II.

6) **ರಾಜ್ಯಸಭೆ**
7) ಲೋಕಸಭೆಯ ಸದಸ್ಯರು ಜನರಿಂದ ಆಯ್ಕೆಯಾಗುವುದರಿಂದ ಇದನ್ನು ಜನತಾ ಸದನ ಎಂದು ಕರೆಯುತ್ತಾರೆ.
8) **6 ವರ್ಷ**
9) **1/10 ರಷ್ಟು (ಕನಿಷ್ಟ ೨೫) ಜನ ಸದಸ್ಯರು**
10) **14 ದಿನಗಳು**

III.

11) -ರಾಷ್ಟ್ರೀಯ ತುರ್ತು ಪರಿಸ್ಥಿತಿ,
-ರಾಜ್ಯ ತುರ್ತು ಪರಿಸ್ಥಿತಿ ಮತ್ತು
-ಹಣಕಾಸಿನ ತುರ್ತು ಪರಿಸ್ಥಿತಿ

12) ವಿರೋಧ ಪಕ್ಷದ ನಾಯಕರ ಪಾತ್ರ ಮತ್ತು ಕಾರ್ಯ

- **ಸರ್ಕಾರವು ಆಡಳಿತದಲ್ಲಿ ತಪ್ಪು ಎಸಗಿದರೆ ಅವುಗಳನ್ನು ಎತ್ತಿ ತೋರಿಸುವುದು.**
- **ಸರ್ಕಾರದ ನೀತಿ ನಿಯಮಗಳನ್ನು ಪರಾಮರ್ಶಿಸುವುದು.**
- **ಸರ್ಕಾರ, ಮಂತ್ರಿ ಮಂಡಲ ಮತ್ತು ಅಧಿಕಾರಿಗಳನ್ನು ಎಚ್ಚರಿಸುವುದು.**
- **ವಿರೋಧ ಪಕ್ಷದ ನಾಯಕರಿಗೆ ಗೌರವಾನ್ವಿತ ಸ್ಥಾನವಿದೆ.**

13) ಸಂಸತ್ತಿನ ಹಣಕಾಸಿನ ಅಧಿಕಾರ ಮತ್ತು ಕಾರ್ಯ

- **ಸಂಸತ್ತು ರಾಷ್ಟ್ರದ ಹಣಕಾಸಿನ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿದೆ.**
- **ಸಂಸತ್ತಿನ ಅನುಮೋದನೆ ಇಲ್ಲದೆ ಸರ್ಕಾರವು ಯಾವುದೇ ತೆರಿಗೆಯನ್ನು ಸಂಗ್ರಹಿಸುವಂತಿಲ್ಲ ಮತ್ತು ಹಣವನ್ನು ಖರ್ಚು ಮಾಡುವಂತಿಲ್ಲ.**
- **ಹಣಕಾಸಿನ ಮಸೂದೆಯನ್ನು ಮೊದಲು ಲೋಕಸಭೆಯಲ್ಲಿಯೇ ಮಂಡಿಸಬೇಕು.**
- **ಹಣಕಾಸು ಮಸೂದೆಗೆ ಲೋಕಸಭೆಯ ಅನುಮೋದನೆ ಪಡೆದ ನಂತರ ರಾಜ್ಯಸಭೆಗೆ ಕಳುಹಿಸಲಾಗುತ್ತದೆ.**
- **ರಾಜ್ಯಸಭೆಯು ಈ ಮಸೂದೆಯನ್ನು ೧೪ ದಿನಗಳ ಒಳಗಾಗಿ ತನ್ನ ಒಪ್ಪಿಗೆಯೊಂದಿಗೆ ಲೋಕಸಭೆಗೆ ಹಿಂದಿರುಗಿಸಬೇಕು, ತಪ್ಪಿದಲ್ಲಿ ಈ ಮಸೂದೆಗೆ ಉಭಯ ಸದನಗಳ ಅನುಮೋದನೆ ದೊರೆತಿದೆ ಎಂದು ಪರಿಗಣಿಸಿ ಅದನ್ನು ರಾಷ್ಟ್ರಾಧ್ಯಕ್ಷರ ಅನುಮೋದನೆಗೆ ಕಳುಹಿಸಲಾಗುತ್ತದೆ.**

14) ಸಂಸತ್ತಿನ ನ್ಯಾಯಾಂಗೀಯ ಅಧಿಕಾರ ಮತ್ತು ಕಾರ್ಯಗಳು

- ಸಂಸತ್ತು ನ್ಯಾಯಾಂಗೀಯ ಅಧಿಕಾರ ಮತ್ತು ಕಾರ್ಯಗಳನ್ನು ಹೊಂದಿದೆ.
- ಸಂಸತ್ತು ಮಹಾಭಿಯೋಗ ಪ್ರಕ್ರಿಯೆಯ ಮೂಲಕ ರಾಷ್ಟ್ರಾಧ್ಯಕ್ಷರನ್ನು ಪದಚ್ಯುತಿಗೊಳಿಸುವ ಅಧಿಕಾರ ಹೊಂದಿದೆ.
- ಸಂಸತ್ತು ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯಗಳ ನ್ಯಾಯಾಧೀಶರನ್ನು ಪದಚ್ಯುತಿಗೊಳಿಸುವಂತೆ ರಾಷ್ಟ್ರಾಧ್ಯಕ್ಷರಿಗೆ ಶಿಫಾರಸ್ಸು ಮಾಡುವ ಅಧಿಕಾರವನ್ನು ಹೊಂದಿದೆ.

15) ಸಂಸತ್ತಿನ ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರ ಮತ್ತು ಕಾರ್ಯಗಳು

- ಭಾರತ ಸಂವಿಧಾನದ ೩೬೮ನೇ ವಿಧಿಯನ್ವಯ ಭಾರತ ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರ ಸಂಸತ್ತಿಗಿದೆ.
- ಸಂವಿಧಾನ ತಿದ್ದುಪಡಿಗೆ ಸಂಬಂಧಿಸಿದ ಮಸೂದೆಯನ್ನು ಯಾವುದೇ ಸದನದಲ್ಲಿ ಮೊದಲು ಮಂಡಿಸಬಹುದು.
- ಆದರೆ ಸಂವಿಧಾನ ತಿದ್ದುಪಡಿ ಮಸೂದೆಗೆ ಸಂಸತ್ತಿನ ಉಭಯ ಸದನಗಳ ಪ್ರತ್ಯೇಕ ಅಂಗೀಕಾರ ಬೇಕೇಬೇಕು.
- ಒಂದು ಸದನ ಅಂಗೀಕರಿಸಿದ ಮಸೂದೆಯನ್ನು ಇನ್ನೊಂದು ಸದನ ತಿರಸ್ಕರಿಸಿದರೆ ಸಂವಿಧಾನದ ತಿದ್ದುಪಡಿ ಸಾಧ್ಯವಿಲ್ಲ.
- ಕೆಲವು ಸಂದರ್ಭಗಳಲ್ಲಿ ಸಂಸತ್ತು ಅಂಗೀಕರಿಸಿದ ಸಂವಿಧಾನ ತಿದ್ದುಪಡಿ ಮಸೂದೆಗೆ ಅರ್ಧದಷ್ಟು ರಾಜ್ಯಗಳ ವಿಧಾನಸಭೆಗಳ ಸಹಮತವೂ ಅವಶ್ಯಕವಾಗಿದೆ.

16) ರಾಷ್ಟ್ರಾಧ್ಯಕ್ಷರ ನ್ಯಾಯಿಕ ಅಧಿಕಾರ ಮತ್ತು ಕಾರ್ಯ

- ಸರ್ವೋಚ್ಚ ನ್ಯಾಯಾಲಯ, ಉಚ್ಚನ್ಯಾಯಾಲಯಗಳು ಮತ್ತು ಸೇನಾ ನ್ಯಾಯಾಲಯಗಳು ಅಪರಾಧಿಗಳಿಗೆ ನೀಡಿದ ಶಿಕ್ಷೆಯನ್ನು ಕಡಿಮೆ ಮಾಡುವ, ಬದಲಿಸುವ, ಕ್ಷಮಾದಾನ ನೀಡುವ ಹಾಗೂ ಮರಣ ದಂಡನೆಯಂತಹ ಕಠಿಣ ಶಿಕ್ಷೆಯನ್ನು ರದ್ದುಪಡಿಸುವ ಅಧಿಕಾರ ಹೊಂದಿದ್ದಾರೆ.
- ರಾಷ್ಟ್ರಾಧ್ಯಕ್ಷರು ಕಾನೂನಾತ್ಮಕ, ಸಂವಿಧಾನಾತ್ಮಕ ಮತ್ತು ಸಾರ್ವಜನಿಕ ಮಹತ್ವ ಹೊಂದಿದ ವಿಷಯಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಸಲಹೆ ಕೇಳಬಹುದು.

17) ರಾಷ್ಟ್ರಾಧ್ಯಕ್ಷರ ಹಣಕಾಸಿನ ಅಧಿಕಾರ ಮತ್ತು ಕಾರ್ಯ

- ರಾಷ್ಟ್ರಾಧ್ಯಕ್ಷರ ಪೂರ್ವಾನುಮತಿ ಇಲ್ಲದೆ ಹಣಕಾಸಿನ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸುವಂತಿಲ್ಲ.
- ಕೇಂದ್ರಹಣಕಾಸು ಆಯೋಗದ ವರದಿ, ಮಹಾಲೇಖಪಾಲರು ಮತ್ತು ಲೆಕ್ಕ ನಿಯಂತ್ರಕರು ನೀಡಿದ ವರದಿಯನ್ನು ಸಂಸತ್ತಿನಲ್ಲಿ ಚರ್ಚಿಸುವಂತೆ ರಾಷ್ಟ್ರಾಧ್ಯಕ್ಷರು ಶಿಫಾರಸ್ಸು ಮಾಡುತ್ತಾರೆ.
- ಭಾರತದ ಸಂಚಿತ ನಿಧಿ ಮತ್ತು ತುರ್ತು ನಿಧಿ ಇವರ ನಿಯಂತ್ರಣದಲ್ಲಿರುತ್ತವೆ.
- ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು, ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರಿಗೆ ಈ ನಿಧಿಯಿಂದ ವೇತನ ಬಿಡುಗಡೆ ಮಾಡಲಾಗುತ್ತದೆ.
- ಹಣಕಾಸು ಮಸೂದೆ ಕಾಯ್ದೆಯಾಗಬೇಕಾದರೆ ಅವರ ಒಪ್ಪಿಗೆ ಅವಶ್ಯಕ.

18) ರಾಷ್ಟ್ರಾಧ್ಯಕ್ಷರ ವಿವೇಚನಾಧಿಕಾರ

ರಾಷ್ಟ್ರಾಧ್ಯಕ್ಷರು ಮಂತ್ರಿಮಂಡಲದ ಸಲಹೆ ಇಲ್ಲದೆ ಕೆಲವೊಂದು ಅಧಿಕಾರಗಳನ್ನು ಚಲಾಯಿಸಬಹುದು. ಅವುಗಳನ್ನು ವಿವೇಚನಾಧಿಕಾರಗಳೆಂದು ಕರೆಯುತ್ತಾರೆ. ಅಂತಹ ಅಧಿಕಾರಗಳೆಂದರೆ

- ಸಾರ್ವತ್ರಿಕ ಚುನಾವಣೆಯಲ್ಲಿ ಲೋಕಸಭೆಯಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತ ಪಡೆಯದಿದ್ದಾಗ ಯಾವುದೇ ಪಕ್ಷದ ನಾಯಕನನ್ನು ಸರ್ಕಾರ ರಚಿಸುವಂತೆ ಆಮಂತ್ರಿಸುವ ಅಧಿಕಾರ.
- ಸಂಸತ್ತು ಅಂಗೀಕರಿಸಿದ ಮಸೂದೆಯನ್ನು ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೆ ಕಳುಹಿಸಿದಾಗ ಅದನ್ನು ಮರುಪರಿಶೀಲನೆಗೆ ಹಿಂದಿರುಗಿಸುವ ಅಧಿಕಾರ.

IV.

19) ರಾಜ್ಯಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು:

- ಭಾರತದ ಪ್ರಜೆಯಾಗಿರಬೇಕು.

- 30 ವರ್ಷ ವಯಸ್ಸು ಪೂರ್ಣಗೊಂಡಿರಬೇಕು.
- ಲಾಭದಾಯಕ ಹುದ್ದೆಯಲ್ಲಿರಬಾರದು.
- ನ್ಯಾಯಾಂಗದಿಂದ ಜೈಲು ಶಿಕ್ಷೆಗೆ ಒಳಗಾಗಿರಬಾರದು.
- ದಿವಾಳಿಯಾಗಿರಬಾರದು.
- ಮಾನಸಿಕ ಅಸ್ವಸ್ಥತೆ ಹೊಂದಿರಬಾರದು.
- ಕಾಲಕಾಲಕ್ಕೆ ಸಂಸತ್ತು ನಿಗಧಿಪಡಿಸುವ ಅರ್ಹತೆಗಳನ್ನು ಹೊಂದಿರಬೇಕು.

20) ಸಂಸತ್ತಿನ ಕಾರ್ಯಾಂಗೀಯ ಅಧಿಕಾರ ಮತ್ತು ಕಾರ್ಯಗಳು:
- ಭಾರತ ಸಂಸದೀಯ ಪದ್ಧತಿಯ ಸರ್ಕಾರವಾಗಿದೆ.
- ಪ್ರಧಾನ ಮಂತ್ರಿ ನೇತೃತ್ವದ ಮಂತ್ರಿಮಂಡಲ ನೈಜ ಕಾರ್ಯಾಂಗವಾಗಿದೆ.
- ಕೇಂದ್ರ ಮಂತ್ರಿಮಂಡಲವು ಸಂಸತ್ತಿಗೆ ಜವಾಬ್ದಾರಿಯುತವಾಗಿದೆ.
- ಸಂಸತ್ತು ಮಂತ್ರಿಮಂಡಲವನ್ನು ಪ್ರಶ್ನಿಸುವ ಮೂಲಕ ಕಾರ್ಯಾಂಗದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುತ್ತದೆ.
- ಲೋಕಸಭೆಯ ವಿಶ್ವಾಸವಿರುವವರೆಗೂ ಮಂತ್ರಿಮಂಡಲವು ಅಧಿಕಾರದಲ್ಲಿ ಮುಂದುವರೆಯುತ್ತದೆ. ವಿಶ್ವಾಸ ಕಳೆದುಕೊಂಡಾಗ ಮಂತ್ರಿಮಂಡಲವು ರಾಜೀನಾಮೆ ನೀಡಬೇಕಾಗುತ್ತದೆ.
- ಲೋಕಸಭೆಯು ಸರ್ಕಾರದ ನೀತಿ ಹಾಗೂ ಯೋಜನೆಗಳನ್ನು ಕುರಿತು ಅವಿಶ್ವಾಸ ವ್ಯಕ್ತಪಡಿಸಿದರೆ, ಕಾರ್ಯಾಂಗ (ಪ್ರಧಾನಿ ನೇತೃತ್ವದ ಮಂತ್ರಿಮಂಡಲ) ರಾಜೀನಾಮೆ ನೀಡಬೇಕಾಗುತ್ತದೆ.

21) ರಾಷ್ಟ್ರಾಧ್ಯಕ್ಷರ ಕಾರ್ಯಾಂಗೀಯ ಅಧಿಕಾರ ಮತ್ತು ಕಾರ್ಯಗಳು:
- ರಾಷ್ಟ್ರದ ಎಲ್ಲಾ ಆಡಳಿತವು ರಾಷ್ಟ್ರಾಧ್ಯಕ್ಷರ ಹೆಸರಿನಲ್ಲಿಯೇ ನಡೆಯುತ್ತದೆ.
- ಪ್ರಧಾನಮಂತ್ರಿಯವರನ್ನು ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ.
- ನಂತರ ಪ್ರಧಾನಿಯವರ ಸಲಹೆ ಮೇರೆಗೆ ಇತರೆ ಮಂತ್ರಿಗಳನ್ನು ನೇಮಿಸುತ್ತಾರೆ.
- ಭಾರತದ ಉನ್ನತ ಹುದ್ದೆಗಳಾದ ಅಟಾರ್ನಿಜನರಲ್, ಮಹಾಲೇಖಪಾಲರು ಮತ್ತು ಲೆಕ್ಕ ನಿಯಂತ್ರಕರು (CAG-Controller and Auditor General), ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು, ಉಚ್ಚನ್ಯಾಯಾಲಯಗಳ ನ್ಯಾಯಾಧೀಶರು, ಕೇಂದ್ರ ಹಣಕಾಸು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು, ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು, ರಾಜ್ಯಗಳ ರಾಜ್ಯಪಾಲರುಗಳು, ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರು ಹಾಗೂ ಇತರ ಚುನಾವಣಾ ಆಯುಕ್ತರು ಹಾಗೂ ರಕ್ಷಣಾ ಪಡೆಗಳ ಮುಖ್ಯಸ್ಥರು ಹಾಗೂ ವಿವಿಧ ರಾಷ್ಟ್ರಗಳಿಗೆ ರಾಯಭಾರಿಗಳನ್ನು ನೇಮಿಸುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗೆ ಇದೆ.
- ಹೀಗೆ ನೇಮಕಗೊಂಡವರನ್ನು ಸಂವಿಧಾನಬದ್ಧವಾಗಿ ಪದಚ್ಯುತಗೊಳಿಸುವ ಅಧಿಕಾರವೂ ರಾಷ್ಟ್ರಾಧ್ಯಕ್ಷರಿಗಿದೆ.

V.

22) ಸಂಸತ್ತಿನ ಶಾಸನೀಯ ಅಧಿಕಾರ ಮತ್ತು ಕಾರ್ಯಗಳು:
- ಸಂಸತ್ತು ಮೂಲಭೂತವಾಗಿ ಕಾನೂನು ಮಾಡುವ ಅಂಗವಾಗಿದೆ.
- ಕೇಂದ್ರ ಪಟ್ಟಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಶಾಸನ ಮಾಡುವ ಅಧಿಕಾರ ಸಂಸತ್ತಿಗಿದೆ.
- ಉದಾಹರಣೆ: ಹಣಕಾಸು, ರಕ್ಷಣೆ, ಬಾಹ್ಯಾಕಾಶ, ದೂರ ಸಂಪರ್ಕ, ರೈಲ್ವೆ, ವಿದೇಶಾಂಗ ವ್ಯವಹಾರ, ಪರಮಾಣು ಶಕ್ತಿ ಇತ್ಯಾದಿ.
- ಸಾಮಾನ್ಯ ಮಸೂದೆಗಳನ್ನು ಲೋಕಸಭೆ ಅಥವಾ ರಾಜ್ಯಸಭೆಯಲ್ಲಿ ಮಂಡಿಸಬಹುದಾಗಿದೆ.
- ಆದರೆ ಮಸೂದೆ ಕಾಯಿದೆಯಾಗಬೇಕಾದರೆ ಚರ್ಚೆಗಳ ಮೂಲಕ ಉಭಯ ಸದನಗಳ ಅನುಮೋದನೆ ಪಡೆಯಬೇಕು.
- ಮಸೂದೆಯ ಪರ ಮತ್ತು ವಿರೋಧವಾಗಿ ಸಮಮತಗಳು ಬಂದಾಗ ಸಭಾಧ್ಯಕ್ಷರು (ಸ್ಪೀಕರ್) ತಮ್ಮ ನಿರ್ಣಾಯಕ ಮತ ಚಲಾಯಿಸುತ್ತಾರೆ.
- ಮಸೂದೆಯ ಬಗ್ಗೆ ಎರಡೂ ಸದನಗಳ ನಡುವೆ ಭಿನ್ನಾಭಿಪ್ರಾಯ ಮೂಡಿದರೆ ರಾಷ್ಟ್ರಾಧ್ಯಕ್ಷರು ಸಂಸತ್ತಿನ ಜಂಟಿಸಭೆಯನ್ನು

- ಕರೆದು ಇತ್ಯರ್ಥಗೊಳಿಸಬಹುದು.
- ಉಭಯ ಸದನಗಳ ಒಪ್ಪಿಗೆ ದೊರೆತರೆ ಆ ಮಸೂದೆಯನ್ನು ರಾಷ್ಟ್ರಾಧ್ಯಕ್ಷರ ಅನುಮೋದನೆಗಾಗಿ ಕಳುಹಿಸಿಕೊಡಲಾಗುತ್ತದೆ.
- ರಾಷ್ಟ್ರಾಧ್ಯಕ್ಷರ ಅನುಮೋದನೆಯ ನಂತರ ಮಸೂದೆಯು ಕಾಯಿದೆಯಾಗುತ್ತದೆ.

23) ರಾಷ್ಟ್ರಾಧ್ಯಕ್ಷರ ಶಾಸನೀಯ ಅಧಿಕಾರ ಮತ್ತು ಕಾರ್ಯಗಳು:

- ರಾಷ್ಟ್ರಾಧ್ಯಕ್ಷರು ಸಂಸತ್ತಿನ ಅಧಿವೇಶನವನ್ನು ಕರೆಯುವ, ಮುಂದೂಡುವ, ಸದನಗಳನ್ನು ಉದ್ದೇಶಿಸಿ ಹಾಗೂ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವ
- ಲೋಕಸಭೆಯನ್ನು ವಿಸರ್ಜಿಸುವ ಅಧಿಕಾರ ಹೊಂದಿದ್ದಾರೆ.
- ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಮಸೂದೆಗಳಿಗೆ ಒಪ್ಪಿಗೆ ನೀಡುವ, ಮರು ಪರಿಶೀಲನೆಗಾಗಿ ಸಂಸತ್ತಿಗೆ
  ಹಿಂದಿರುಗಿಸುವ ಹಾಗೂ ಮಸೂದೆಗೆ ಸಹಿ ಹಾಕದೆ ತಿರಸ್ಕರಿಸುವ ಅಧಿಕಾರ ಹೊಂದಿದ್ದಾರೆ.
- 2020 ಕ್ಕಿಂತ ಮುಂಚಿತವಾಗಿ ಲೋಕಸಭೆಗೆ ಇಬ್ಬರು ಆಂಗ್ಲೋ ಇಂಡಿಯನ್ನರನ್ನು ಲೋಕಸಭಾ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗಿತ್ತು.
- 2020ರಲ್ಲಿ ಜಾರಿಗೆ ಬಂದ 104ನೇ ಸಂವಿಧಾನ ತಿದ್ದುಪಡಿ ಕಾಯಿದೆಯು ಈ ನಾಮ ನಿರ್ದೇಶನವನ್ನು ಮುಂದುವರೆಸಿಲ್ಲ.
- ಕಲೆ, ವಿಜ್ಞಾನ, ಸಮಾಜಸೇವೆ, ಸಾಹಿತ್ಯ ಈ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ೧೨ ಜನರನ್ನು ರಾಜ್ಯಸಭಾ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುವ ಅಧಿಕಾರವೂ ರಾಷ್ಟ್ರಾಧ್ಯಕ್ಷರಿಗಿದೆ.
- ಇವರು ತಮಗಿರುವ ಅಧಿಕಾರಗಳನ್ನು ಪ್ರಧಾನಮಂತ್ರಿ ನೇತೃತ್ವದ ಮಂತ್ರಿಮಂಡಲದ ಸಲಹೆಯಂತೆ ಚಲಾಯಿಸುತ್ತಾರೆ.

24) ಪ್ರಧಾನಮಂತ್ರಿಯ ಅಧಿಕಾರ ಮತ್ತು ಕಾರ್ಯಗಳು:

- ಮಂತ್ರಿಗಳ ನೇಮಕ, ಖಾತೆಗಳ ಹಂಚಿಕೆ ಮತ್ತು ಮಂತ್ರಿಗಳನ್ನು ವಜಾ ಮಾಡುವ ಅಧಿಕಾರ
- ಮಂತ್ರಿಮಂಡಲದ ಮುಖ್ಯಸ್ಥರಾದ ಪ್ರಧಾನಮಂತ್ರಿಯವರು ವಿವಿಧ ಇಲಾಖೆಗಳಿಗೆ ಮಂತ್ರಿಗಳನ್ನು ನೇಮಕ ಮಾಡುವಂತೆ ರಾಷ್ಟ್ರಾಧ್ಯಕ್ಷರಿಗೆ ಶಿಫಾರಸ್ಸು ಮಾಡುತ್ತಾರೆ ಹಾಗೂ ಮಂತ್ರಿಗಳಿಗೆ ವಿವಿಧ ಖಾತೆಗಳನ್ನು ಹಂಚುವಂತೆ ಸಲಹೆ ನೀಡುತ್ತಾರೆ.
- ಮಂತ್ರಿಗಳನ್ನು ಮಂತ್ರಿಮಂಡಲದಿಂದ ವಜಾ ಮಾಡುವಂತೆ ರಾಷ್ಟ್ರಾಧ್ಯಕ್ಷರಿಗೆ ಸಲಹೆ ನೀಡುವ ಅಧಿಕಾರ ಇವರಿಗೆ ಇದೆ.
- ಸರ್ಕಾರದ ಮುಖ್ಯಸ್ಥರು : ಸರ್ಕಾರದ ಎಲ್ಲಾ ಆಗು-ಹೋಗುಗಳಿಗೆ ಇವರೇ ಜವಾಬ್ದಾರರಾಗಿದ್ದು,
- ಸಚಿವ ಸಂಪುಟದ ನಾಯಕ :- ಪ್ರಧಾನಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಸಭೆ ನಡೆಯುತ್ತದೆ. ಈ ಸಭೆಯಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಹತ್ವದ ವಿಷಯಗಳನ್ನು ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುತ್ತದೆ.
- ಇವರು ರಾಷ್ಟ್ರಾಧ್ಯಕ್ಷರು ಮತ್ತು ಮಂತ್ರಿಮಂಡಲದ ನಡುವೆ ಸಂಪರ್ಕ ಸೇತುವೆಯಾಗಿದ್ದಾರೆ.
- ಲೋಕ ಸಭೆಯನ್ನು ವಿಸರ್ಜಿಸುವಂತೆ ಸಲಹೆ ನೀಡುವ ಅಧಿಕಾರ :- ಲೋಕಸಭೆಯನ್ನು ವಿಸರ್ಜಿಸುವಂತೆ ರಾಷ್ಟ್ರಾಧ್ಯಕ್ಷರಿಗೆ ಸಲಹೆ ನೀಡುವ ಅಧಿಕಾರ ಪ್ರಧಾಮಂತ್ರಿಯವರಿಗೆ ಇದೆ.

25) ಕೇಂದ್ರ ಮಂತ್ರಿಮಂಡಲದ ರಚನೆ ಮತ್ತು ಅದರ ಹೊಣೆಗಾರಿಕೆಗಳು:

- ನಮ್ಮ ಸಂವಿಧಾನದ 74(೧)ನೇ ವಿಧಿಯು ರಾಷ್ಟ್ರಾಧ್ಯಕ್ಷರಿಗೆ ನೆರವು ಮತ್ತು ಸಲಹೆಯನ್ನು ನೀಡಲು ಪ್ರಧಾನ ಮಂತ್ರಿಯ ನೇತೃತ್ವದ ಮಂತ್ರಿಮಂಡಲ ಇರಬೇಕೆಂದು ತಿಳಿಸುತ್ತದೆ.
- ಪ್ರಧಾನಿಯ ನೇತೃತ್ವದ ಕೇಂದ್ರ ಮಂತ್ರಿಮಂಡಲವು ನೈಜ ಕಾರ್ಯಾಂಗವಾಗಿದ್ದು, ರಾಷ್ಟ್ರದ ಸಮಸ್ತ ಆಡಳಿತವನ್ನು ನಿರ್ವಹಿಸುತ್ತದೆ.
- ಕೇಂದ್ರ ಮಂತ್ರಿಮಂಡಲವು ಸಾರ್ವಜನಿಕ ನೀತಿ ಹಾಗೂ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತದೆ.
- ಕೇಂದ್ರ ಮಂತ್ರಿ ಮಂಡಲವನ್ನು ಮೂರು ವಿಧಗಳಾಗಿ ವರ್ಗೀಕರಿಸಬಹುದು. ಅವುಗಳೆಂದರೆ 1. ಸಂಪುಟ ದರ್ಜೆ ಸಚಿವರು 2. ರಾಜ್ಯ ಸಚಿವರು 3. ಉಪ ಸಚಿವರು

- **ಮಂತ್ರಿ ಮಂಡಲವು ತನ್ನ ಆಡಳಿತ ನಿರ್ವಹಣೆಗೆ, ನೀತಿ ನಿರ್ಧಾರಗಳು ಹಾಗೂ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಂಸತ್ತಿಗೆ (ಲೋಕಸಭೆ) ಸಾಮೂಹಿಕ ಹೊಣೆಗಾರಿಕೆಯನ್ನು ಹೊಂದಿರುತ್ತದೆ.**
- **ಆದುದರಿಂದ ಮಂತ್ರಿ ಮಂಡಲವು ಸಂಸತ್ತಿನ ವಿಶ್ವಾಸವಿರುವವರೆಗೂ ಅಧಿಕಾರದಲ್ಲಿ ಮುಂದುವರೆಯುತ್ತದೆ.**
- **ಅವಿಶ್ವಾಸ ಗೊತ್ತುವಳಿ ನಿರ್ಣಯವನ್ನು ಅಂಗೀಕರಿಸುವುದರ ಮೂಲಕ ಲೋಕಸಭೆಯು ಮಂತ್ರಿ ಮಂಡಲವನ್ನು ಅಧಿಕಾರದಿಂದ ಕೆಳಗಿಳಿಸಬಹುದು.**

ಅಧ್ಯಾಯ- **7.** ರಾಜ್ಯಸರ್ಕಾರ

I.

1) ಸಿ) ವಿಧಾನ ಸಭೆ
2) ಎ) 224
3) ಎ)36
4) ಡಿ) ವಿಧಾನಸಭಾಧ್ಯಕ್ಷರಿಗೆ
5) ಸಿ) 25 ವರ್ಷ

II.

6) ರಾಜ್ಯಪಾಲರು
7) ನಾಲ್ಕು ತಿಂಗಳು
8) ಮುಖ್ಯಮಂತ್ರಿಯನ್ನೊಳಗೊಂಡ ಮಂತ್ರಿಮಂಡಲ
9) ರಾಜ್ಯಪಾಲರು

III. ಎರಡು ಅಂಕದ ಪ್ರಶ್ನೆಗಳು

10) ವಿಧಾನಸಭಾಧ್ಯಕ್ಷರ ಅಧಿಕಾರ ಮತ್ತು ಕಾರ್ಯ

- ವಿಧಾನ ಸಭೆಯ ಕಾರ್ಯಕಲಾಪಗಳು ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯುತ್ತವೆ.
- ಸದನದಲ್ಲಿ ಶಾಂತಿ, ಶಿಸ್ತನ್ನು ಕಾಪಾಡುವುದು, ಘನತೆಯನ್ನು ಹೆಚ್ಚಿಸುವುದು, ಕಾರ್ಯಕಲಾಪಗಳನ್ನು ಮುಂದೂಡುವುದು
- ಸದಸ್ಯರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವುದು
- ಸದನದಲ್ಲಿ ಸಮಮತಗಳು ಬಂದಾಗ ನಿರ್ಣಾಯಕ ಮತ ಚಲಾಯಿಸುವ ಕಾರ್ಯಗಳನ್ನು ಇವರು ನಿರ್ವಹಿಸುತ್ತಾ .

11) ರಾಜ್ಯ ಶಾಸಕಾಂಗದ ಶಾಸನೀಯ ಅಧಿಕಾರ ಮತ್ತು ಕಾರ್ಯಗಳು:

- **ಸಾಮಾನ್ಯ ಮಸೂದೆಯನ್ನು ವಿಧಾನ ಮಂಡಲದ ಯಾವ ಸದನದಲ್ಲಾದರೂ ಮಂಡಿಸಬಹುದು.**
- **ವಿಧಾನ ಸಭೆಯಿಂದ ಅನುಮೋದಿಸಲ್ಪಟ್ಟ ಸಾಮಾನ್ಯ ಮಸೂದೆಗಳನ್ನು ವಿಧಾನ ಪರಿಷತ್ತಿನ ಅನುಮೋದನೆಗಾಗಿ ಕಳುಹಿಸಲಾಗುತ್ತದೆ. ಆಗ ವಿಧಾನ ಪರಿಷತ್ತು ಮೂರು ತಿಂಗಳೊಳಗಾಗಿ ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿಯಿಲ್ಲದೆ ತನ್ನ ಅನುಮೋದನೆಯನ್ನು ನೀಡಿ, ಮಸೂದೆಯನ್ನು ವಿಧಾನಸಭೆಗೆ ಹಿಂದಿರುಗಿಸತಕ್ಕದ್ದು. ಇಲ್ಲವಾದಲ್ಲಿ ವಿಧಾನಸಭೆಯು ಮಸೂದೆಯನ್ನು ಎರಡನೆಯ ಬಾರಿ ವಿಧಾನ ಪರಿಷತ್ತಿನ ಅಂಗೀಕಾರಕ್ಕಾಗಿ ಕಳುಹಿಸುತ್ತದೆ. ಈ ಸಂದರ್ಭದಲ್ಲಿ ವಿಧಾನ ಪರಿಷತ್ತು ಒಂದು ತಿಂಗಳೊಳಗಾಗಿ ತನ್ನ ಅನುಮೋದನೆಯೊಂದಿಗೆ ಮಸೂದೆಯನ್ನು ವಿಧಾನಸಭೆಗೆ ಹಿಂದಿರುಗಿಸಬೇಕು.**
- **ಇಲ್ಲವಾದಲ್ಲಿ ಎರಡೂ ಸದನಗಳು ಒಪ್ಪಿಗೆ ನೀಡಿವೆಯೆಂದು ಘೋಷಿಸಿ ಮಸೂದೆಯನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗುವುದು. ಹೀಗೆ ವಿಧಾನ ಪರಿಷತ್ತು ಒಂದು ಸಾಮಾನ್ಯ ಮಸೂದೆಯನ್ನು ನಾಲ್ಕು ತಿಂಗಳ ಕಾಲ ತಡೆಹಿಡಿಯುವ ಅಧಿಕಾರವನ್ನು ಹೊರತುಪಡಿಸಿ ಬೇರಾವ ಅಧಿಕಾರವನ್ನೂ ಹೊಂದಿರುವುದಿಲ್ಲ**

12) ರಾಜ್ಯಪಾಲರಾಗಲು ಇರಬೇಕಾದ ಅರ್ಹತೆಗಳು:

- ಭಾರತದ ಪ್ರಜೆಯಾಗಿರಬೇಕು.
- 35 ವರ್ಷ ವಯಸ್ಸು ಪೂರ್ಣಗೊಂಡಿರಬೇಕು.
- ಯಾವುದೇ ಲಾಭದಾಯಕ ಹುದ್ದೆಯಲ್ಲಿರಬಾರದು.
- ಸಂಸತ್ತು ಅಥವಾ ರಾಜ್ಯ ಶಾಸಕಾಂಗದ ಸದಸ್ಯರಾಗಿರಬಾರದು.

13) ರಾಜ್ಯಪಾಲರಿಗಿರುವ ಸವಲತ್ತುಗಳು:
- ಸಂಸತ್ತು ನಿಗಧಿಪಡಿಸುವ ವೇತನ, ಭತ್ಯೆ ನೀಡಲಾಗುತ್ತದೆ.
- ಬಾಡಿಗೆ ರಹಿತ ಅಧಿಕೃತ ನಿವಾಸ (ರಾಜಭವನ) ವನ್ನು ನೀಡಲಾಗಿದೆ.
- ಅಧಿಕಾರಾವಧಿಯಲ್ಲಿ ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವಂತಿಲ್ಲ.

14) ರಾಜ್ಯಪಾಲರ ಹಣಕಾಸಿನ ಅಧಿಕಾರ ಮತ್ತು ಕಾರ್ಯಗಳು:
- ರಾಜ್ಯಪಾಲರ ಪೂರ್ವಾನುಮತಿ ಇಲ್ಲದೆ ಹಣಕಾಸಿನ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸುವಂತಿಲ್ಲ.
- ರಾಜ್ಯ ಹಣಕಾಸು ಆಯೋಗ ಹಾಗೂ ರಾಜ್ಯ ಯೋಜನಾ ಮಂಡಳಿಯನ್ನು ರಚಿಸುವ ಅಧಿಕಾರ ಪಡೆದಿದ್ದಾರೆ.
- ರಾಜ್ಯದ ತುರ್ತು ನಿಧಿಯಿಂದ ಬರ,ಪ್ರವಾಹ, ಭೂಕಂಪದಂತಹ ಆಕಸ್ಮಿಕ ಘಟನೆಗಳನ್ನು ನಿಭಾಯಿಸಲು ಹಣ ಬಿಡುಗಡೆ ಮಾಡುವ ಅಧಿಕಾರವಿದೆ.
- ರಾಜ್ಯದ ಸಂಚಿತ ನಿಧಿಯು ಇವರ ನಿಯಂತ್ರಣದಲ್ಲಿದೆ.

15) ರಾಜ್ಯಪಾಲರ ವಿವೇಚನಾಧಿಕಾರಗಳು;
- ಶಾಸಕಾಂಗ ಅಂಗೀಕರಿಸಿದ ಮಸೂದೆಯನ್ನು ರಾಷ್ಟ್ರಾಧ್ಯಕ್ಷರ ಸಹಿಗೆ ಕಾಯ್ದಿರಿಸುವ,
- ರಾಜ್ಯದಲ್ಲಿ ಸಂವಿಧಾನಿಕ ಬಿಕ್ಕಟ್ಟು ಅಥವಾ ವೈಫಲ್ಯತೆ ಉಂಟಾದಾಗ ರಾಷ್ಟ್ರಾಧ್ಯಕ್ಷರಿಗೆ ವರದಿ ಕಳುಹಿಸಿ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ವಿಧಿಸುವಂತೆ ಶಿಫಾರಸ್ಸು ಮಾಡುವ ಅಧಿಕಾರ ಹೊಂದಿದ್ದಾರೆ.
- ರಾಜ್ಯ ವಿಧಾನ ಸಭೆಯಲ್ಲಿ ವಿಶ್ವಾಸವನ್ನು ಕಳೆದುಕೊಂಡ ಮಂತ್ರಿಮಂಡಲವನ್ನು ವಜಾ ಮಾಡಬಹುದು.

IV.

16) ರಾಜ್ಯ ಶಾಸಕಾಂಗದ ಹಣಕಾಸಿನ ಅಧಿಕಾರ ಮತ್ತು ಕಾರ್ಯಗಳು;
- ಹಣಕಾಸಿನ ವಿಷಯದಲ್ಲಿ ವಿಧಾನ ಸಭೆಗೆ ವಿಧಾನ ಪರಿಷತ್ತಿಗಿಂತ ಹೆಚ್ಚು ಅಧಿಕಾರವಿದೆ.
- ಸಂವಿಧಾನದ ಪ್ರಕಾರ ಹಣಕಾಸು ಮಸೂದೆಯನ್ನು ವಿಧಾನಸಭೆಯಲ್ಲಿಯೇ ಮಂಡಿಸಬೇಕು.
- ವಿಧಾನಸಭೆಯು ಅನುಮೋದನೆ ನೀಡಿದ ಹಣಕಾಸು ಮಸೂದೆಯನ್ನು ವಿಧಾನ ಪರಿಷತ್ತಿನ ಅನುಮೋದನೆಗಾಗಿ ಕಳುಹಿಸಲಾಗುತ್ತದೆ,
- ಆಗ ವಿಧಾನ ಪರಿಷತ್ತು ಮಸೂದೆಯನ್ನು ಸ್ವೀಕರಿಸಿದ ೧೪ ದಿನಗಳೊಳಗಾಗಿ ತನ್ನ ಒಪ್ಪಿಯೊಂದಿಗೆ ವಿಧಾನ ಸಭೆಗೆ ಹಿಂತಿರುಗಿಸಬೇಕು,
- ಇಲ್ಲವಾದಲ್ಲಿ ಈ ಮಸೂದೆಯನ್ನು ಉಭಯ ಸದನಗಳು ಅನುಮೋದಿಸಿದವು ಎಂದು ಘೋಷಿಸಿ ರಾಜ್ಯಪಾಲರ ಸಹಿಗಾಗಿ ಕಳುಹಿಸಲಾಗುತ್ತದೆ.
- ವಿಧಾನಪರಿಷತ್ತು ಹಣಕಾಸು ಮಸೂದೆಯನ್ನು ೧೪ ದಿನಗಳ ಕಾಲ ತಡೆಹಿಡಿಯುವುದನ್ನು ಹೊರತುಪಡಿಸಿ ಹಣಕಾಸಿಗೆ ಸಂಬಂಧಿಸಿದ ಇನ್ಯಾವುದೇ ಅಧಿಕಾರವನ್ನು ಹೊಂದಿಲ್ಲ ಎಂಬ ಸಂಗತಿ ಇದರಿಂದ ಸ್ಪಷ್ಟವಾಗುತ್ತದೆ.

17) ರಾಜ್ಯಪಾಲರ ಶಾಸನೀಯ ಅಧಿಕಾರ ಮತ್ತು ಕಾರ್ಯಗಳು
- ವಿಧಾನ ಮಂಡಲದ ಅಧಿವೇಶನ ಕರೆಯುವ, ಮುಂದೂಡುವ
- ಮುಖ್ಯಮಂತ್ರಿಯ ಶಿಫಾರಸ್ಸಿನ ಮೇರೆಗೆ ವಿಧಾನಸಭೆಯನ್ನು ವಿಸರ್ಜಿಸುವ ಅಧಿಕಾರವಿದೆ.
- ವಿಧಾನಪರಿಷತ್‌ಗೆ ಆರನೇ ಒಂದರಷ್ಟು ಸದಸ್ಯರನ್ನು ಕಲೆ, ಸಾಹಿತ್ಯ, ವಿಜ್ಞಾನ, ಸಮಾಜಸೇವೆ ಹಾಗೂ ಸಹಕಾರ ಚಳವಳಿ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ನಾಮನಿರ್ದೇಶನ ಮಾಡುವ ಅಧಿಕಾರ ಹೊಂದಿದ್ದಾರೆ.

- ಶಾಸಕಾಂಗ ಅಂಗೀಕರಿಸಿದ ಮಸೂದೆಗೆ ತಮ್ಮ ಅಂಕಿತವನ್ನು ಹಾಕುವ ಅಥವಾ ರಾಜ್ಯಶಾಸಕಾಂಗಕ್ಕೆ ಮಸೂದೆಯನ್ನು ಮರು ಪರಿಶೀಲನೆಗಾಗಿ ಹಿಂದಿರುಗಿಸುವ ಅಥವಾ ತಿರಸ್ಕರಿಸುವ ಅಧಿಕಾರವಿದೆ.
- ಅವಶ್ಯವಿದ್ದಲ್ಲಿ ರಾಷ್ಟ್ರಾಧ್ಯಕ್ಷರ ಅಂಕಿತಕ್ಕೂ ಕಳುಹಿಸಬಹುದು.

18) ರಾಜ್ಯ ಮಂತ್ರಿಮಂಡಲದ ಕಾರ್ಯಗಳು

- ಸರ್ಕಾರದ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸುವುದು.
- ರಾಜ್ಯದ ಆಯ-ವ್ಯಯ ಪಟ್ಟಿಯನ್ನು ತಯಾರಿಸಿ ಶಾಸನಸಭೆಯ ಮುಂದೆ ಮಂಡನೆಯಾಗುವಂತೆ ನೋಡಿಕೊಳ್ಳುವುದು.
- ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರು, ಸದಸ್ಯರು, ಲೋಕಾಯುಕ್ತರು ಮುಂತಾದವರನ್ನು ನೇಮಕ ಮಾಡುವಂತೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡುವುದು.
- ಪ್ರತಿಯೊಬ್ಬ ಮಂತ್ರಿಯೂ ತನ್ನ ಇಲಾಖೆಗೆ ಸಂಬಂಧಿಸಿದ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವಂತೆ ನೋಡಿಕೊಳ್ಳುವುದು
- ವಿವಿಧ ಇಲಾಖೆಗಳ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಿ ಅವುಗಳ ನಡುವೆ ಸಮನ್ವಯ ತರುವುದು. ಹೀಗೆ ಮಂತ್ರಿಮಂಡಲ ರಾಜ್ಯದ ನೈಜ ಕಾರ್ಯಾಂಗವಾಗಿ ಕಾರ್ಯನಿರ್ವಹಿಸುತ್ತದೆ.

V.

19) ವಿಧಾನಪರಿಷತ್ ರಚನೆ ಮತ್ತು ಕಾರ್ಯಗಳು

- ರಾಜ್ಯ ಶಾಸಕಾಂಗದ ಮೇಲ್ಮನೆಯನ್ನು ವಿಧಾನ ಪರಿಷತ್ತು ಎಂದು ಕರೆಯಲಾಗುತ್ತದೆ.
- ಇದರ ಸದಸ್ಯರ ಸಂಖ್ಯೆಯು ಆ ರಾಜ್ಯದ ವಿಧಾನ ಸಭಾ ಸದಸ್ಯರ ಸಂಖ್ಯೆಯ ಮೂರನೇ ಒಂದರಷ್ಟನ್ನು
- ಮೀರುವಂತಿಲ್ಲ ಹಾಗೂ 40 ಸದಸ್ಯರಿಗಿಂತ ಕಡಿಮೆ ಇರುವಂತಿಲ್ಲ.
- ಕರ್ನಾಟಕದ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ ೭೫.
- ಈ ಸದಸ್ಯರು ೫ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ. ಅವುಗಳೆಂದರೆ ವಿಧಾನಸಭಾ ಸದಸ್ಯರಿಂದ, ಸ್ಥಳೀಯ ಸಂಸ್ಥೆಗಳಿಂದ, ಪದವೀಧರ ಕ್ಷೇತ್ರದಿಂದ, ಶಿಕ್ಷಕರ ಕ್ಷೇತ್ರದಿಂದ ಕೆಲವರು ಚುನಾಯಿಸಲ್ಪಡುತ್ತಾರೆ.
- ಕಲೆ, ವಿಜ್ಞಾನ, ಸಾಹಿತ್ಯ, ಸಮಾಜ ಸೇವೆ ಹಾಗೂ ಸಹಕಾರ ಚಳವಳಿ ಕ್ಷೇತ್ರಗಳಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ರಾಜ್ಯಪಾಲರು ಕೆಲವರನ್ನು ನಾಮನಿರ್ದೇಶನ ಮಾಡುತ್ತಾರೆ.
- ವಿಧಾನ ಪರಿಷತ್ತಿನ ಅಧಿಕಾರಾವಧಿ ೬ ವರ್ಷಗಳು.
- ಇದನ್ನು ಅವಧಿಗೆ ಮುನ್ನ ವಿಸರ್ಜಿಸುವಂತಿಲ್ಲ. ಆದ್ದರಿಂದ ವಿಧಾನ ಪರಿಷತ್ತನ್ನು ಶಾಶ್ವತ ಸದನ ಎನ್ನುತ್ತಾರೆ.

20) ಮುಖ್ಯಮಂತ್ರಿಯ ಅಧಿಕಾರ ಮತ್ತು ಕಾರ್ಯಗಳು

- ಮಂತ್ರಿಮಂಡಲದ ರಚನೆಗೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡುತ್ತಾರೆ.
- ಸಚಿವರುಗಳಿಗೆ ಖಾತೆಗಳನ್ನು ಹಂಚುವಂತೆ ಮತ್ತು ಬದಲಾಯಿಸುವಂತೆ ಶಿಫಾರಸ್ಸು ಮಾಡುತ್ತಾರೆ.
- ಸರ್ಕಾರಕ್ಕೆ ನಿಷ್ಠರಾಗಿರದ ಮಂತ್ರಿಗಳನ್ನು ವಜಾಮಾಡುವಂತೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಬಹುದು.
- ಸರ್ಕಾರದ ಮುಖ್ಯಸ್ಥರಾಗಿದ್ದು, ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.
- ಸಚಿವ ಸಂಪುಟದ ಅಧ್ಯಕ್ಷತೆ ವಹಿಸುವ, ಸಭೆ ಕರೆಯುವ, ಮುಂದೂಡುವ ಅಧಿಕಾರ ಹೊಂದಿದ್ದಾರೆ.
- ವಿವಿಧ ಇಲಾಖೆಗಳ ಕಾರ್ಯದಕ್ಷತೆಯನ್ನು ಪರಿಶೀಲಿಸಿ ಅವುಗಳ ನಡುವೆ ಸಮನ್ವಯ ಮೂಡಿಸುವ ಕಾರ್ಯ ನಿರ್ವಹಿಸುತ್ತಾರೆ.
- ಅವಧಿಗೆ ಮುಂಚೆ ವಿಧಾನಸಭೆಯನ್ನು ವಿಸರ್ಜಿಸುವಂತೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಬಹುದು.
- ರಾಜ್ಯಪಾಲರು ಮತ್ತು ಸಚಿವ ಸಂಪುಟದ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಾರೆ.
- ರಾಜ್ಯಪಾಲರಿಗೆ ಸಲಹೆಗಾರನಂತಿದ್ದು, ವಿವಿಧ ಹುದ್ದೆಗಳ ನೇಮಕಾತಿಗಳಿಗೆ ಶಿಫಾರಸ್ಸನ್ನು ಮಾಡುತ್ತಾರೆ.

ಅಧ್ಯಾಯ-8.ನ್ಯಾಯಾಂಗ

I.

1) C) 5
2) A) ಏಪ್ರಿಲ್ 1, 1974

II.

3) ಜನವರಿ 28, 1950
4) ತಹಸಿಲ್ದಾರ್ ನ್ಯಾಯಾಲಯ
5) ರಾಷ್ಟ್ರಾಧ್ಯಕ್ಷರು
6) 1985
7) ಜಿಲ್ಲಾಧಿಕಾರಿ
8) ರಾಜ್ಯಪಾಲರು

III.

9) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆಗಳೇ
   - ಭಾರತದ ಪ್ರಜೆಯಾಗಿರಬೇಕು.
   - ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಕನಿಷ್ಠ ೫ ವರ್ಷಗಳ ಕಾಲ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು ಅಥವಾ ಯಾವುದೇ ಉಚ್ಚನ್ಯಾಯಾಲಯದಲ್ಲಿ 10 ವರ್ಷಗಳ ಕಾಲ ವಕೀಲರಾಗಿ ಸೇವೆ ಸಲ್ಲಿಸಿರಬೇಕು.
   - ರಾಷ್ಟ್ರಾಧ್ಯಕ್ಷರ ಅಭಿಪ್ರಾಯದಲ್ಲಿ ನ್ಯಾಯ ತಜ್ಞರಾಗಿರಬೇಕು.
10) ನಾಗರಿಕ ನ್ಯಾಯಾಲಯದ ಅಡಿಯಲ್ಲಿ ಬರುವ ಅಧೀನ ನ್ಯಾಯಾಲಯಗಳು
   - ಅಧೀನ ನ್ಯಾಯಾಧೀಶರ ನ್ಯಾಯಾಲಯ
   - ಹೆಚ್ಚುವರಿ ಅಧೀನ ನ್ಯಾಯಾಧೀಶರ ನ್ಯಾಯಾಲಯ
   - ಮುನ್ಸೀಫ್ ನ್ಯಾಯಾಲಯ
   - ಹೆಚ್ಚುವರಿ ಮುನ್ಸೀಫ್ ನ್ಯಾಯಾಲಯ
11) "ಜನತಾ ನ್ಯಾಯಾಲಯಗಳು ಬಹಳಷ್ಟು ಜನಪ್ರಿಯವಾಗಿವೆ" ಕಾರಣ
   - ರಾಜೀ ಸಂಧಾನಕ್ಕೆ ಹೆಚ್ಚು ಒತ್ತುಕೊಡುತ್ತದೆ.
   - ಇದು ಶೀಘ್ರ ಹಾಗೂ ಮಿತವ್ಯಯದ್ದಾಗಿರುತ್ತದೆ.
   - ಇತರೆ ನ್ಯಾಯಾಲಯಗಳ ಕಾರ್ಯದ ಹೊರೆ ಕಡಿಮೆ ಮಾಡುತ್ತದೆ.
12) ಅಪರಾಧ ನ್ಯಾಯಾಲಯದ ಅಡಿಯಲ್ಲಿ ಬರುವ ನ್ಯಾಯಾಲಯಗಳು
   - ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯ
   - ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ
   - ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ
   - ತೃತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ
13) ಉಚ್ಚ ನ್ಯಾಯಾಲಯದ ಕಾರ್ಯಗಳು
   - ವೈವಾಹಿಕ ಸಂಬಂಧಗಳು, ಮರಣ ಪತ್ರ ಹಾಗೂ ನ್ಯಾಯಾಂಗ ನಿಂದನೆ ಈ ವಿಷಯಗಳಿಗೆ ಸಂಬಂಧಿಸಿದ ವಿವಾದಗಳನ್ನು ಇತ್ಯರ್ಥಪಡಿಸುವ ಮೂಲ ಅಧಿಕಾರ ವ್ಯಾಪ್ತಿ.
   - ಅಧೀನ ನ್ಯಾಯಾಲಯಗಳು ನೀಡಿದ ತೀರ್ಪುಗಳ ವಿರುದ್ಧ ಮೇಲ್ಮನವಿಗಳನ್ನು ಸ್ವೀಕರಿಸಿ ಇತ್ಯರ್ಥಪಡಿಸುವ ಮನವಿ ಅಧಿಕಾರ ವ್ಯಾಪ್ತಿ.
   - ಉಚ್ಚನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಅಧೀನ ನ್ಯಾಯಾಲಯಗಳಲ್ಲಿನ ಮೊಕದ್ದಮೆಗಳನ್ನು ತನ್ನಲ್ಲಿಗೆ ವರ್ಗಾಯಿಸುವಂತೆ, ಕೆಲವು ನಿಯಮಗಳನ್ನು ಅಧೀನ ನ್ಯಾಯಾಲಯಗಳು ಪಾಲಿಸುವಂತೆ ಮತ್ತು ಎಲ್ಲಾ ದಾಖಲೆಗಳನ್ನು ಸಂಗ್ರಹಿಸಿಕೊಳ್ಳುವಂತೆ ನಿರ್ದೇಶನ ನೀಡಿ ಅವುಗಳ ಮೇಲ್ವಿಚಾರಣೆ ಮಾಡುವ ಅಧಿಕಾರ ಕಾರ್ಯವನ್ನು ಹೊಂದಿದೆ.

- ಮೂಲಭೂತ ಹಕ್ಕುಗಳ ರಕ್ಷಣೆ
- ವಿವಿಧ ರಿಟ್ ಅರ್ಜಿಗಳನ್ನು ಸ್ವೀಕರಿಸಿ ನ್ಯಾಯ ಒದಗಿಸುವ ಕಾರ್ಯ ನಿರ್ವಹಿಸುತ್ತದೆ.

IV.

14) ಉಚ್ಚನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿ ಮತ್ತು ಅಧಿಕಾರಾವಧಿ

- ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳನ್ನು ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಹಾಗೂ ನಾಲ್ಕು ಜನ ಹಿರಿಯ ನ್ಯಾಯಾಧೀಶರನ್ನೊಳಗೊಂಡ ಕೊಲಿಜಿಯಂನ ಶಿಫಾರಸ್ಸಿನ ಮೇರೆಗೆ ಹಾಗೂ ಕೇಂದ್ರ ಸಚಿವ ಸಂಪುಟದ ಸಲಹೆಯ ಮೇರೆಗೆ ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ.
- ಹೈಕೋರ್ಟಿನ ಇತರೆ ನ್ಯಾಯಾಧೀಶರನ್ನು ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಹಾಗೂ ಇತರೆ ಇಬ್ಬರು ಹಿರಿಯ ನ್ಯಾಯಾಧೀಶರನ್ನೊಳಗೊಂಡ ಕೊಲಿಜಿಯಂನ ಶಿಫಾರಸ್ಸಿನ ಮೇರೆಗೆ ಹಾಗೂ ಕೇಂದ್ರ ಸಚಿವ ಸಂಪುಟದ ಸಲಹೆಯ ಮೇರೆಗೆ ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ.
- ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಹಾಗೂ ನ್ಯಾಯಾಧೀಶರ ನಿವೃತ್ತಿಯ ವಯಸ್ಸು ೬೨ ವರ್ಷ.
- ಸಾಬೀತಾದ ದುರ್ನಡತೆ ಅಥವಾ ಅಸಮರ್ಥತೆಯ ಆಧಾರದ ಮೇಲೆ ರಾಷ್ಟ್ರಾಧ್ಯಕ್ಷರು ಸಂಸತ್ತಿನ ಎರಡೂ ಸದನಗಳ ನಿರ್ದಿಷ್ಟ ಬಹುಮತದ ಶಿಫಾರಸ್ಸಿನಂತೆ ಪದಚ್ಯುತಿಗೊಳಿಸಬಹುದು.

15) ಕಂದಾಯ ನ್ಯಾಯಾಲಯಗಳು ಒಳಗೊಂಡಿರುವ ನ್ಯಾಯಾಲಯಗಳು

- ತಹಶೀಲ್ದಾರ್ ನ್ಯಾಯಾಲಯ
- ಉಪವಿಭಾಗಾಧಿಕಾರಿಗಳ ನ್ಯಾಯಾಲಯ
- ಜಿಲ್ಲಾ ಕಂದಾಯ ನ್ಯಾಯಾಲಯ
- ಆಯುಕ್ತರ ನ್ಯಾಯಾಲಯ
- ಕಂದಾಯ ಮಂಡಳಿ

V.

16) ಸರ್ವೋಚ್ಚ ನ್ಯಾಯಾಲಯದ ಅಧಿಕಾರ ಮತ್ತು ಕಾರ್ಯಗಳ

- ಮೂಲ ಅಧಿಕಾರ ವ್ಯಾಪ್ತಿ :- ಕೇಂದ್ರ – ರಾಜ್ಯಗಳ ನಡುವೆ, ರಾಜ್ಯ - ರಾಜ್ಯಗಳ ನಡುವೆ ಉಂಟಾಗುವ ವಿವಾದಗಳನ್ನು ಇತ್ಯರ್ಥಪಡಿಸುವ ಮತ್ತು ಸಂವಿಧಾನವನ್ನು ಅರ್ಥೈಸುವ ಅಧಿಕಾರ
- ಮೇಲ್ಮನವಿ ಅಧಿಕಾರ ವ್ಯಾಪ್ತಿ :- ಕೆಳಹಂತದ ನ್ಯಾಯಾಲಯಗಳು ನೀಡುವ ತೀರ್ಪುಗಳ ವಿರುದ್ಧ ಕಕ್ಷಿದಾರರು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಇಂತಹ ಮೇಲ್ಮನವಿ ಸ್ವೀಕರಿಸಿ ವಿಚಾರಣೆ ನಡೆಸಿ ತೀರ್ಪು ನೀಡುವ ಅಧಿಕಾರ ಈ ನ್ಯಾಯಾಲಯಕ್ಕಿದೆ.
- ಸಲಹಾ ಅಧಿಕಾರ ವ್ಯಾಪ್ತಿ :- ಸಾರ್ವಜನಿಕ ಮಹತ್ವದ, ಸಾಂವಿಧಾನಿಕ ಮಹತ್ವದ ಮತ್ತು ಶಾಸನೀಯ ಮಹತ್ವದ ವಿಷಯಗಳ ಬಗ್ಗೆ ರಾಷ್ಟ್ರಾಧ್ಯಕ್ಷರು ಸಲಹೆ ಕೇಳಿದಾಗ ಸಲಹೆ ನೀಡುವ ಅಧಿಕಾರ ಸರ್ವೋಚ್ಚ ನ್ಯಾಯಾಲಯಕ್ಕಿದೆ.
- ನ್ಯಾಯಿಕ ವಿಮರ್ಶೆಯ ಅಧಿಕಾರ :- ಸರ್ವೋಚ್ಚ ನ್ಯಾಯಾಲಯವು ಶಾಸಕಾಂಗದಿಂದ ರೂಪಿಸಲ್ಪಟ್ಟ ಶಾಸನಗಳು ಮತ್ತು ಕಾರ್ಯಾಂಗದ ಆದೇಶಗಳು ಹಾಗೂ ನಿರ್ಧಾರಗಳು ಸಂವಿಧಾನ ಬದ್ಧವಾಗಿದ್ದಾವೆಯೇ ಅಥವಾ ಇಲ್ಲವೇ ಎಂಬುದನ್ನು ವಿಮರ್ಶಿಸುವ ಅಧಿಕಾರ ಹೊಂದಿದೆ.
- ಮೂಲಭೂತ ಹಕ್ಕುಗಳ ರಕ್ಷಣೆ : ಭಾರತ ಸಂವಿಧಾನದ ೩೨ನೇ ವಿಧಿಯ ಅಡಿಯಲ್ಲಿ ವಿಶೇಷ ಆಜ್ಞೆ ನೀಡುವ ಮೂಲಕ ಸರ್ವೋಚ್ಚ ನ್ಯಾಯಾಲಯವು ಮೂಲಭೂತ ಹಕ್ಕುಗಳನ್ನು ರಕ್ಷಿಸುತ್ತದೆ.

ಅಧ್ಯಾಯ-**9.ಕುಟುಂಬ**

I

1) B) ಕುಟುಂಬ
2) C) ತಂದೆ ತಾಯಿ ಮತ್ತು ಅವರ ಮದುವೆಯಾಗದ ಮಕ್ಕಳನ್ನು ಒಳಗೊಂಡಿದೆ
3) A) ತಂದೆ
4) B) ಮಾತೃ ಪ್ರಧಾನ ಕುಟುಂಬ
5) C) ಹಿರಿತನದ ತತ್ವ
6) B) ಕೈಗಾರಿಕೀಕರಣ ಮತ್ತು ನಗರೀಕರಣ
7) D) ಮಾತೃ ಪ್ರಧಾನ ಕುಟುಂಬ
8) B) ಕುಟುಂಬದ ಪರಿಸರ
9) B) ನಾಯರ್
10) D) ಸಾಮಾಜಿಕ ನಿಯಂತ್ರಣ ಸಡಿಲ
11) D) ವಿಭಕ್ತ ಕುಟುಂಬಗಳು ಹೆಚ್ಚುತ್ತಿರುವುದು
12) c) ಮಕ್ಕಳು

II.

13) ತಂದೆ ತಾಯಿ ಮಕ್ಕಳ ಮೊಮ್ಮಕ್ಕಳ ನಡುವೆ ಉಂಟಾಗುವ ಸಂಬಂಧಗಳ ವ್ಯವಸ್ಥೆಯನ್ನು ಕುಟುಂಬವನ್ನು ಎನ್ನುತ್ತೇವೆ

14) ಎರಡು, ಎರಡಕ್ಕಿಂತ ಹೆಚ್ಚು ತಲೆಮಾರಿನ ಅಂದರೆ ತಂದೆ ತಾಯಿ ಮಕ್ಕಳು ಮತ್ತು ಮೊಮ್ಮಕ್ಕಳಿಂದ ಕೂಡಿದ ರಕ್ತ ಸಂಬಂಧಿಗಳ ಕುಟುಂಬಕ್ಕೆ ಅವಿಭಕ್ತ ಕುಟುಂಬ ಎನ್ನುವರು

15) -ಮಾತೃಪ್ರೇಮ,
-ಪಿತೃ ವಾತ್ಸಲ್ಯ,
-ಪತಿ ಪತ್ನಿಯರ ಅನುರಾಗ,
-ಮಕ್ಕಳನ್ನು ಪಡೆದು ಪಾಲನೆ ಪೋಷಣೆ ಮಾಡಬೇಕೆಂಬ ಅಭಿಲಾಷೆ ಮುಂತಾದವು.

16) -ಮಕ್ಕಳ ಲಾಲನೆ ಪಾಲನೆ ಮಾಡುವುದು
-ಶಿಕ್ಷಣ ನೀಡುವುದು

17) ಕೈಗಾರಿಕೀಕರಣ ಮತ್ತು ನಗರೀಕರಣ

18) ಕುಟುಂಬದ ಸದಸ್ಯರು ಬಾಲ್ಯಾವಸ್ಥೆಯಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ತಿಳಿಸುವ ಮೂಲಕ ಸಮಾಜದ ಸಂಪ್ರದಾಯ, ನೈತಿಕ ನಿಯಮಗಳು ವರ್ತನೆಗಳನ್ನು ನಿಯಂತ್ರಿಸುತ್ತದೆ.

19) ಅವಿಭಕ್ತ ಕುಟುಂಬ

20) ಸಾಮಾಜಿಕ ಹೊಣೆಗಾರಿಕೆಯನ್ನು ಹಾಗೂ ಸಹಕಾರದ ಮೌಲ್ಯವನ್ನು ಮನಗಾಣಿಸುತ್ತದೆ

21) ಕುಟುಂಬ

22) ತಂದೆ ತಾಯಿ ಮತ್ತು ಅವರ ಅವಿವಾಹಿತ ಮಕ್ಕಳು ಮಾತ್ರ ಸದಸ್ಯರಾಗಿರುವ ಕುಟುಂಬವನ್ನು ಕೇಂದ್ರ ಕುಟುಂಬ ಎನ್ನುವರು

III.

23) ಕುಟುಂಬವು ಭಾರತ ಸಮಾಜದ ಜೀವಕೋಶವಾಗಿದೆ

- ಕುಟುಂಬದಲ್ಲಿ ಮಾತೃ ಪ್ರೇಮ ಪಿತೃ ವಾತ್ಸಲ್ಯ ಪತಿ-ಪತ್ನಿಯರ ಅನುರಾಗದ ಕೇಂದ್ರವಾಗಿದೆ
- ಮಕ್ಕಳ ಲಾಲನೆ ಪಾಲನೆ ಮಾಡುತ್ತದೆ
- ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಸಹಾಯಕವಾಗಿದೆ
- ಸಮಾಜದ ಸಂಪ್ರದಾಯ, ನೈತಿಕ ನಿಯಮಗಳು, ವರ್ತನೆಗಳನ್ನು ನಿಯಂತ್ರಿಸುತ್ತದೆ
- ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುತ್ತದೆ
- ತಂದೆ ತಾಯಿಯರ ಆರೈಕೆ, ಶುಶ್ರೂಷೆ ಮತ್ತು ಸಂರಕ್ಷಣೆಯ ಜವಾಬ್ದಾರಿಯನ್ನು ಬೆಳೆಸುತ್ತದೆ

24) ಕುಟುಂಬದ ಲಕ್ಷಣಗಳು

- ಕುಟುಂಬವು ಸಾರ್ವತ್ರಿಕವಾಗಿದೆ
- ಸಮಾಜದ ಎಲ್ಲ ವಸ್ತುಗಳು ಕೇಂದ್ರವಾಗಿದೆ
- ಕುಟುಂಬಗಳಿಂದಲೇ ನೆರೆಹೊರೆ ಗ್ರಾಮ ನಗರ ರಾಷ್ಟ್ರ ನಿರ್ಮಾಣಗೊಂಡಿದೆ
- ಕುಟುಂಬವು ಸಾಮಾಜಿಕ ಹೊಣೆಗಾರಿಕೆಯನ್ನು ತಿಳಿಸುತ್ತದೆ
- ಸಮಾಜದ ಸಂಪ್ರದಾಯ ನೈತಿಕ ನಿಯಮಗಳು ವರ್ತನೆಗಳನ್ನು ಕುಟುಂಬವು ನಿಯಂತ್ರಿಸುತ್ತದೆ
- ಕುಟುಂಬವು ಸರ್ವ ವ್ಯಾಪಿ, ಶಾಶ್ವತ ಹಾಗೂ ಪರಂಪರಾಗತ ಘಟಕವಾಗಿದೆ.

25) ವ್ಯಕ್ತಿಯ ಸಾಮಾಜಿಕ ಬೆಳವಣಿಗೆ ಹಂತಗಳಲ್ಲಿ ಬಾಲ್ಯ ಮತ್ತು ಯೌವನಗಳು ಮುಖ್ಯವಾಗಿವೆ

- ಮಾತೃಭಾಷೆಯನ್ನು ಮಗು ಮೊದಲು ತಿಳಿಯುವುದಲ್ಲದೆ ಮೂಲ ಸಾಮಾಜಿಕ ವಿಚಾರಗಳನ್ನು ತಿಳಿಯುತ್ತದೆ
- ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರದಲ್ಲಿ ಬೆಳೆದ ಮಗುವು ಅದಕ್ಕೆ ಅನುಗುಣವಾದ ಗುಣಲಕ್ಷಣಗಳನ್ನು ಬಳಸಿಕೊಳ್ಳುತ್ತದೆ
- ಸಮವಯಸ್ಸಿನ ಮಕ್ಕಳೊಂದಿಗೆ ಸ್ನೇಹ ಸಂಬಂಧ ಬೆಳೆಯುತ್ತದೆ
- ಎಲ್ಲರೊಂದಿಗೆ ಬೆರೆತು ಮುಂದಾಳತ್ವದ ಗುಣಗಳನ್ನು ರೂಡಿಸಿಕೊಳ್ಳುತ್ತದೆ
- ಸಾಮಾಜಿಕ ವರ್ತನೆಗಳು ಬೇಡಿಕೆಗಳು ಕಟ್ಟಲೆಗಳು ಮಗುವಿನ ಮೇಲೆ ಪ್ರಭಾವ ಬೀರಿ ಸಾಮಾಜಿಕ ಸಂಬಂಧ ರೂಪಗೊಳ್ಳುತ್ತದೆ
- ಯೌವ್ವನದಲ್ಲಿ ಇದು ಮುಂದುವರೆದು ಸ್ನೇಹ ಸ್ವಾತಂತ್ರ್ಯ ಭದ್ರತೆ ಅಂಗೀಕಾರ ಇವುಗಳಿಗಾಗಿ ಹಾತೊರೆಯುತ್ತಾರೆ
- ಈ ವಯಸ್ಸಿನಲ್ಲಿ ಬೆಳೆಸಿಕೊಂಡ ವರ್ತನೆಗಳು ಹಾಗೂ ಅಭಿಪ್ರಾಯಗಳು ಪ್ರೌಢ ಹಾಗೂ ಮುಪ್ಪಿನ ಕಾಲದವರೆಗೂ ಮುಂದುವರೆಯುತ್ತವೆ

26) * ವಿವಾಹ ಸಂಬಂಧದ ಆಧಾರದ ಮೇಲೆ ಕುಟುಂಬವನ್ನು ಬಹುಪತ್ನಿತ್ವ ಬಹುಪತೀತ್ವ ಕುಟುಂಬಗಳೆಂದು ವಿಂಗಡಿಸಲಾಗಿದೆ

* ಬಹುಪತ್ನಿತ್ವ ಕುಟುಂಬದಲ್ಲಿ ಒಬ್ಬ ಪುರುಷನು ಒಬ್ಬರಿಗಿಂತ ಹೆಚ್ಚು ಮಹಿಳೆಯರನ್ನು ವಿವಾಹವಾಗಿರುತ್ತಾನೆ
* ಬಹುಪತಿತ್ವ ಕುಟುಂಬದಲ್ಲಿ ಮಹಿಳೆಯು ಒಬ್ಬರಿಗಿಂತ ಹೆಚ್ಚು ಗಂಡಸರನ್ನು ವಿವಾಹವಾಗಿರುತ್ತಾಳೆ

27) * ಅವಿಭಕ್ತ ಕುಟುಂಬವು ತನ್ನ ಸದಸ್ಯರ ಬದುಕನ್ನು ಸಂಪೂರ್ಣವಾಗಿ ಆವರಿಸಿಕೊಂಡಿದೆ

* ಕುಟುಂಬದ ಬಹುಪಾಲು ಸದಸ್ಯರ ಅಗತ್ಯವನ್ನು ಪೂರೈಸುತ್ತದೆ
* ಎಲ್ಲ ಸದಸ್ಯರು ಕೆಲಸವನ್ನು ಹಂಚಿಕೊಳ್ಳುತ್ತಾರೆ
* ಎಲ್ಲ ಸದಸ್ಯರು ಶ್ರಮ ವಯಸ್ಸು ಲಿಂಗ ಆಧರಿಸಿ ಕಾರ್ಯವಿಭಜನೆಯಾಗುತ್ತದೆ

IV.

28)ಅವಿಭಕ್ತ ಕುಟುಂಬದ ಲಕ್ಷಣಗಳೆಂದರೆ

- ಕುಟುಂಬದ ಗಾತ್ರವು ದೊಡ್ಡದಾಗಿರುತ್ತದೆ
- ಸದಸ್ಯರೆಲ್ಲರೂ ಆಸ್ತಿಯ ಮಾಲೀಕತ್ವ ಹೊಂದಿರುತ್ತಾರೆ
- ಸದಸ್ಯರು ಸಾಮಾನ್ಯವಾಗಿ ಒಂದೇ ಛಾವಣಿಯಲ್ಲಿ ವಾಸಿಸುತ್ತಾರೆ
- ಒಂದೇ ಅಡಿಗೆ ಮನೆಯಲ್ಲಿ ಆಹಾರ ಸಿದ್ದಪಡಿಸಿ ಸೇವಿಸುತ್ತಾರೆ
- ಒಂದೇ ಧರ್ಮವನ್ನು ನಂಬುತ್ತಾರೆ
- ಸ್ವಯಂ ಪೂರ್ಣ ಘಟಕವಾಗಿದೆ
- ಹಿರಿಯ ಸದಸ್ಯರು ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾನೆ

29) ವಿಭಕ್ತ ಕುಟುಂಬ ಹೆಚ್ಚಾಗಿ ಕಂಡುಬರಲು ಕಾರಣಗಳು

- ವೈಯಕ್ತಿಕತೆ
- ಸ್ವಯಂ ತೃಪ್ತಿ
- ಆಸ್ತಿ ಹಕ್ಕು
- ಬದಲಾದ ಸಾಮಾಜಿಕ ಮೌಲ್ಯಗಳು
- ಭೌಗೋಳಿಕ ಹಾಗೂ ಸಾಮಾಜಿಕ ಸಂರಕ್ಷಣೆ
- ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿ

- ನಗರೀಕರಣ
- ಕೈಗಾರಿಕೆಕರಣ
- ಪ್ರಜಾಸತ್ತಾತ್ಮಕ ಹಾಗೂ ಸಮಾನತೆಯ ತತ್ವಗಳು

30) ಆಧುನಿಕ ಕುಟುಂಬ ವ್ಯವಸ್ಥೆಯ ಲಕ್ಷಣಗಳು

- ಆಧುನಿಕತೆ
- ಸಂಕೀರ್ಣತೆ
- ಚಿಕ್ಕಗಾತ್ರ
- ಸಡಿಲ ಸಾಮಾಜಿಕ ನಿಯಂತ್ರಣ
- ಸದಸ್ಯರ ಹೆಚ್ಚಿನ ಸ್ವಾತಂತ್ರ್ಯ
- ಆಸ್ತಿ ಹಕ್ಕು
- ಹೆಚ್ಚಿನ ಲೌಕಿಕ ಮನೋಭಾವನೆ

V.

31) ಕುಟುಂಬದ ವರ್ಗೀಕರಣ

A)ಗಾತ್ರದ ಆಧಾರದ ಮೇಲೆ

- ವಿಭಕ್ತ ಕುಟುಂಬ
- ಅವಿಭಕ್ತ ಕುಟುಂಬ

B) ಅಧಿಕಾರದ ಆಧಾರದ ಮೇಲೆ

- ಪಿತೃ ಪ್ರಧಾನ ಕುಟುಂಬ
- ಮಾತೃ ಪ್ರಧಾನ ಕುಟುಂಬ

C)ವಿವಾಹದ ಆಧಾರದ ಮೇಲೆ

- ಏಕ ಪತ್ನಿತ್ವ ಕುಟುಂಬ
- ಬಹುಪತ್ನಿತ್ವ
- ಬಹುಪತಿತ್ವ

32) ಪಿತೃ ಪ್ರಧಾನ ಕುಟುಂಬ

- ತಂದೆಯೇ ಕುಟುಂಬದ ಒಡೆಯ
- ತಂದೆ ಹೆಸರಿನಲ್ಲಿ ಆಸ್ತಿಪಾಸ್ತಿಗಳ ವಹಿವಾಟು ನಡೆಯುವುದು
- ಪಿತೃ ಪ್ರಧಾನ ಕುಟುಂಬಗಳು ಪ್ರಾಚೀನ ಭಾರತ ಚೀನಾ ಈಜಿಪ್ಟ್ ರೂಮ್ ಗಳಲ್ಲಿ ಕಂಡುಬರುತ್ತವೆ

ಮಾತೃ ಪ್ರಧಾನ ಕುಟುಂಬ

- ತಾಯಿಯೇ ಕುಟುಂಬದ ಒಡತಿ
- ತಾಯಿ ಹೆಸರಿನಲ್ಲಿ ಆಸ್ತಿಪಾಸ್ತಿಗಳ ವಹಿವಾಟು ನಡೆಯುತ್ತದೆ
- ಕೇರಳ ರಾಜ್ಯದ ಮಲಬಾರ್ ನ ನಾಯರ್ ಹಾಗೂ ಈಶಾನ್ಯ ರಾಜ್ಯಗಳ ಕೆಲವು ಆದಿವಾಸಿಗಳಲ್ಲಿ ಈ ಕುಟುಂಬ ಕಂಡುಬರುತ್ತದೆ

33) ಅವಿಭಕ್ತ ಕುಟುಂಬ

- ಪತಿ ಪತ್ನಿ ಅವರ ಮಕ್ಕಳು ಮೊಮ್ಮಕ್ಕಳು ಮರಿ ಮಕ್ಕಳು ಹೀಗೆ ಎರಡಕ್ಕಿಂತ ಹೆಚ್ಚು ತಲೆಮಾರಿನ ಜನರು ವಾಸಿಸುವ ಕುಟುಂಬ ಅವಿಭಕ್ತ ಕುಟುಂಬ
- ಒಂದೇ ಮನೆಯಲ್ಲಿ ವಾಸ
- ಒಂದೇ ಅಡುಗೆ ಮನೆಯಲ್ಲಿ ಆಹಾರ ಸಿದ್ಧಪಡಿಸುತ್ತಾರೆ
- ಒಂದೇ ಧರ್ಮಪಾಲನೆ
- ಕುಟುಂಬದ ಹಿರಿಯ ಸದಸ್ಯನಿಗೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ

ವಿಭಕ್ತ ಕುಟುಂಬ

- ತಂದೆ ತಾಯಿ ಅವರ ಅವಿವಹಿತ ಮಕ್ಕಳು ಸದಸ್ಯರಾಗಿರುವ ಕುಟುಂಬವೇ ವಿಭಕ್ತ ಕುಟುಂಬ
- ವೈಯಕ್ತಿಕ ಸ್ವಾತಂತ್ರ್ಯಕ್ಕೆ ಹೆಚ್ಚಿನ ಒತ್ತು

- ಆಸ್ತಿಯ ಹಕ್ಕು
- ನಗರೀಕರಣ ಮತ್ತು ಕೈಗಾರಿಕೀಕರಣದಿಂದ ಹೆಚ್ಚಾಗಿ ಕಂಡುಬರುತ್ತವೆ
- ಸ್ತ್ರೀಯರಿಗೆ ಸ್ವಾತಂತ್ರ್ಯ
- ಪ್ರಜಾಸತ್ತಾತ್ಮಕ ಮತ್ತು ಸಮಾನತೆಯ ತತ್ವಗಳು

.10ನಮ್ಮ ರಾಜ್ಯ ಕರ್ನಾಟಕ - ಪ್ರಾಕೃತಿಕ ವಿಭಾಗ.

I

1) C) ಬಾಂಬೆ, ಹೈದರಾಬಾದ್, ಮದ್ರಾಸ್, ಕೊಡಗು .

2) B) ಶಿರಾಡಿ ಘಾಟಿ

3) D)ಜೀವ ವೈವಿಧ್ಯತಾ ವಲಯ

4) B) ಮಧುಗಿರಿ,

5)ಎ) ಕರಾವಳಿ ಮೈದಾನ

6) D ಡ) ಮುಳ್ಳಯ್ಯನಗಿರಿ

7) C) ನವಮಂಗಳೂರು

II

1) ವಿಶಾಲ ಮೈಸೂರು ರಾಜ್ಯವು 1956 ನವೆಂಬರ್ 1ರಂದು ಅಸ್ತಿತ್ವಕ್ಕೆ ಬಂದಿತ್ತು .

2) ಭಟ್ಕಳ, ಮಲ್ಪೆ, ಕಾರವಾರ, ಕುಮಟ, ಬೇಲೆಕೇರಿ, ಹೊನ್ನಾವರ .

3) ಮಲೆನಾಡು (ಶಿವಮೊಗ್ಗ)

4) ತಂಪಾದ ಹವಾಗುಣ ಹೊಂದಿದೆ.

5) ಇಲ್ಲಿ ಸುಮಾರು ಎಂಭತ್ತು ಸಾವಿರಕ್ಕೂ ಅಧಿಕ ಸಸ್ಯ ಹಾಗೂ ಪ್ರಾಣಿ ವೈವಿಧ್ಯವಿದೆ.

6) ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ

III)

7)ಬಯಲು ಸೀಮೆಯ ಕೆಲವು ಜಿಲ್ಲೆಗಳಲ್ಲಿ ಬೇಸಿಗೆಯಲ್ಲಿ ಅಧಿಕ ಉಷ್ಣಾಂಶವಿರುತ್ತದೆ. ಇದನ್ನು ಬಿಸಿಲ ನಾಡು . ಎಂದು .ಕರೆಯುತ್ತಾರೆ

8) * ಅಧಿಕ ಮಳೆಯನ್ನು ಪಡೆಯುವ ಪ್ರದೇಶವಾಗಿದೆ .

* ಕಡಿದಾದ ಇಳಿಜಾರಿನಲ್ಲಿ ನದಿಗಳು ರಭಸವಾಗಿ ಹರಿಯುತ್ತದೆ .

9) * ಕೆಂಪು ಮಣ್ಣಿನಿಂದ ಕೂಡಿದ ಪ್ರಸ್ಥಭೂಮಿ

* ಏರುತಗ್ಗಿನಿಂದ ಕೂಡಿದೆ .

* ಪೂರ್ವದ ಕಡೆ ಇಳಿಜಾರಾಗಿದೆ .

11) ಚಾರ್ಮಾಡಿ,ಶಿರಾಡಿ, ಆಗುಂಬೆ, ಹುಲಿಕಲ್.

12) *ಕರ್ನಾಟಕವು ಭಾರತದ ದಕ್ಷಿಣದಲ್ಲಿದ್ದು,ಪರ್ಯಾಯ ದ್ವೀಪದ ಪಶ್ಚಿಮ ಮಧ್ಯ ಭಾಗದಲ್ಲಿದೆ.

* ಇದು 11 ಡಿಗ್ರಿ,31 ನಿಮಿಷದಿಂದ 18 ಡಿಗ್ರಿ,45 ನಿಮಿಷ ಉತ್ತರ ಅಕ್ಷಾಂಶ ಹಾಗೂ 74 ಡಿಗ್ರಿ,12 ನಿಮಿಷ ಮತ್ತು 78 ಡಿಗ್ರಿ,40 ನಿಮಿಷ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.

13) 1) ಕರ್ನಾಟಕದ ಉತ್ತರ ತುದಿ .ಔರಾದ್ -

2) ಕರ್ನಾಟಕದ ರಾಜಧಾನಿ .ಬೆಂಗಳೂರು-

3) ಕೆನರಾ ಕರಾವಳಿ .

4) ನವಮಂಗಳೂರು ಕರ್ನಾಟಕದ ದೊಡ್ಡ ಬಂದರು .

5) ಮಧುಗಿರಿ ಬೆಟ್ಟ .ಅತಿ ದೊಡ್ಡ ಏಕಶಿಲಾ ಬೆಟ್ಟ -



.

11. ಕರ್ನಾಟಕದ ಪ್ರಾಕೃತಿಕ ವೈವಿಧ್ಯ.

I

1) C) ನಾಯಕನಹಟ್ಟಿ

2) A) ಉಷ್ಣಾಂಶ ಕಡಿಮೆಯಾಗಿ ಒತ್ತಡ ಹೆಚ್ಚಾಗುವುದು .

3) B) ಕೆಂಪು ಮಣ್ಣು,

4) D)ಕರಾವಳಿ .

5) B) ವಿಜಯಪುರ,

6) D) ಹೇಳಿಕೆ ಎ ಮತ್ತು ಪ್ರತಿಪಾದನೆ ಆರ್ ಎರಡೂ ಸರಿ.

7) C) ಕಾಫಿ ಗಿಡಗಳು ಹೂ ಬಿಡಲು ನೆರವಾಗುವುದರಿಂದ

II) :

8) -ಭೂಸ್ವರೂಪ,

- ಸಸ್ಯವರ್ಗ,

-ಮಾನ್ಸೂನ್ ಮಾರುತದ ಪ್ರಭಾವ,

-ಭೌಗೋಳಿಕ ಸ್ಥಾನ .

9) -ಪಶ್ಚಿಮ ಘಟ್ಟಗಳು ಮಳೆಯ ಮಾರುತಗಳನ್ನು ತಡೆದು ಅಧಿಕ ಮಳೆ ಸುರಿಸುತ್ತದೆ ..

-ಪೂರ್ವಕ್ಕೆ ಮಳೆ ಕಡಿಮೆಯಾಗುತ್ತದೆ

10) ಕಪ್ಪುಮಣ್ಣಿಗೆ ಹೆಚ್ಚು ದಿನ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಗುಣವಿದೆ .

11) ಅಧಿಕ ಉಷ್ಣಾಂಶ, ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಮೇಲ್ಪದರದ ಸವೆತದಿಂದ ಜಂಬಿಟ್ಟಿಗೆ ಮಣ್ಣು ರಚನೆಯಾಗುತ್ತದೆ .

12) * ಚಳಿಗಾಲದಲ್ಲಿ ತೇವಾಂಶದ ಕೊರತೆಯಿಂದ ಎಲೆ ಉದುರಿಸುತ್ತದೆ

.* ವಸಂತ ಋತುವಿನಲ್ಲಿ ಚಿಗುರುತ್ತದೆ .

13) ಉಷ್ಣವಲಯದ ಮಾನ್ಸೂನ್ ಕಾಡುಗಳಲ್ಲಿ ತೇಗ, ಹೊನ್ನೆ, ಮತ್ತಿ, ಬೇವು, ಮಾವು, ಹಲಸು ಮತ್ತು ಶ್ರೀಗಂಧದ ಮರಗಳಂತಹ ಅತ್ಯಂತ ಬೆಲೆಬಾಳುವ ಮರಗಳನ್ನು ಹೊಂದಿದೆ.

14)* ಚಳಿಗಾಲದಲ್ಲಿ ಕಡಿಮೆ ಉಷ್ಣಾಂಶ, ಕಡಿಮೆ ಮಳೆ ಹಾಗೂ ಆರ್ದ್ರತೆ.

* ತಿಳಿಯಾದ ಆಕಾಶವುಳ್ಳ ಹವಾಗುಣ

III

15) * ಭಾರತದಲ್ಲಿ ಅರಣ್ಯ ಪ್ರದೇಶಗಳಲ್ಲಿ ಏಳನೇ ಸ್ಥಾನ .

* ಉತ್ತರ ಕನ್ನಡ ಹೆಚ್ಚು ಅರಣ್ಯವುಳ್ಳ ಪ್ರದೇಶ, ವಿಜಯಪುರ ಕಡಿಮೆ ಅರಣ್ಯವುಳ್ಳ ಜಿಲ್ಲೆಯಾಗಿದೆ .

* 21 : 19 ಭಾಗದಷ್ಟು ಅರಣ್ಯ ಭೂಮಿ ಇದೆ .

*ನಿತ್ಯಹರಿದ್ವರ್ಣ, ಎಲೆ ಉದುರಿಸುವ ಮಿಶ್ರಕಾಡು, ಸಸ್ಯವರ್ಗಗಳನ್ನು ಹೊಂದಿದೆ .

16)

ಕೆಂಪು ಮಣ್ಣು	ಕಪ್ಪು ಮಣ್ಣು
ಇದು ಗ್ರಾನೈಟ್, ನೀಸ್ ಶಿಲಾದ್ರವ್ಯಗಳಿಂದ ರೂಪುಗೊಂಡಿದೆ	ಬಸಾಲ್ಟ್ ಶಿಲೆಯ ಶಿಥಿಲೀಕರಣದಿಂದಾಗಿದೆ
ಇದು ಕಬ್ಬಿಣದ ಆಕ್ಸೈಡನ್ನು ಹೊಂದಿದೆ	ಇದು ಮೆಗ್ನೀಷಿಯಂ ,ಅಲ್ಯೂಮೀನಿಯಂ, ಕಬ್ಬಿಣದ ಆಕ್ಸೈಡನ್ನು ಹೊಂದಿದೆ
ಇದರಲ್ಲಿ ಸುಣ್ಣ, ಉಪ್ಪಿನಂಶ ಹೆಚ್ಚಿದ್ದು ಸಾವಯವ ಅಂಶ ಕಡಿಮೆಯಿದೆ	ಇದಕ್ಕೆ ದೀರ್ಘ ಕಾಲದವರೆಗೂ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಗುಣವಿದೆ
ತೇವಾಂಶ ಉಳಿಸಿಕೊಳ್ಳುವ ಸಾಮರ್ಥ್ಯ ಕಡಿಮೆ	ಇದು ಹತ್ತಿ ಬೆಳೆಯಲು ಸೂಕ್ತವಾಗಿದೆ
ಇದು ಹಗುರ, ತೆಳುವಾಗಿದ್ದು ಹೆಚ್ಚು ಫಲವತ್ತಾಗಿಲ್ಲ	ಕಪ್ಪು ಹತ್ತಿ ಮಣ್ಣು ಎಂತಲೇ ಕರೆಯುವರು

17) * ಅಡ್ಡ ಬದುಗಳ ನಿರ್ಮಾಣ

- ವೈಜ್ಞಾನಿಕ ಬೇಸಾಯ ಅನುಸರಣೆ
- ಅರಣ್ಯೀಕರಣ
- ಪರ್ಯಾಯ ಬೆಳೆ ಅನುಸರಣೆ
- ಮಣ್ಣು ಪರೀಕ್ಷೆ
- ಹನಿ ಮತ್ತು ತುಂತುರು ನೀರಾವರಿ ಅನುಸರಣೆ

18) * ವಿಭಿನ್ನ ಮಣ್ಣಿನ ಲಭ್ಯತೆ

- ವಾಯುಗುಣ ವೈವಿಧ್ಯತೆ
- ಭೂ ಸ್ವರೂಪ
- ಸಮುದ್ರ ಸಾಮೀಪ್ಯ
- ಸಮುದ್ರ ಮಟ್ಟದಿಂದ ಎತ್ತರ
- ಆರ್ದ್ರತೆ

19)

ಮಣ್ಣಿನ ವಿಧಗಳು	**ರಚನೆ**	**ಬೆಳೆಯಬಹುದಾದ ಬೆಳೆಗಳು**	**ಕಂಡುಬರುವ ಜಿಲ್ಲೆಗಳು**
ಕೆಂಪು ಮಣ್ಣು	ಗ್ರ್ಯಾನೈಟ್,ನೀಸ್ ಶಿಲಾದ್ರವ್ಯಗಳಿಂದ ರೂಪುಗೊಂಡಿದೆ	ರಾಗಿ, ನವಣೆ, ಸಜ್ಜೆ, ಜೋಳ, ತಂಬಾಕು, ದ್ವಿದಳ ಧಾನ್ಯಗಳು ಇತ್ಯಾದಿ	ತುಮಕೂರು, ಬೆಂಗಳೂರು, ರಾಮನಗರ, ಚಿಕ್ಕಬಳ್ಳಾಪುರ,ಕೋಲಾರ, ಚಾಮರಾಜನಗರ,ಮಂಡ್ಯ, ಮೈಸೂರು.
ಕಪ್ಪು ಮಣ್ಣು	ಬಸಾಲ್ಟ್ ಶಿಲೆಯ ಶಿಥಿಲೀಕರಣದಿಂದಾಗಿದೆ	ಹತ್ತಿ, ಜೋಳ, ಕಬ್ಬು, ಈರುಳ್ಳಿ ಇತ್ಯಾದಿ	ಧಾರವಾಡ, ಗದಗ, ಬಳ್ಳಾರಿ, ಕೊಪ್ಪಳ, ಕಲಬುರಗಿ, ಯಾದಗಿರಿ, ಬಾಗಲಕೋಟೆ, ಬೆಳಗಾವಿ, ಚಿತ್ರದುರ್ಗ
ಜಂಬಿಟ್ಟಿಗೆ ಮಣ್ಣು	ಸುಣ್ಣ ಸಿಲಿಕೇಟ್ಗಳು ಮಳೆ ನೀರಿನಲ್ಲಿ ಕರಗಿ ಮಣ್ಣಿನ ಕೆಳಸ್ತರ ಸೇರಿರುತ್ತವೆ.	ಗೋಡಂಬಿ, ಚಹಾ, ಮೆಣಸು, ರಬ್ಬರ್, ತೆಂಗು	ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ,ಶಿವಮೊಗ್ಗ, ಹಾಸನ, ಕೊಡಗು, ಬೆಳಗಾವಿ
ಮೆಕ್ಕಲು ಮಣ್ಣು	ನದಿಗಳ ಸಂಚಯನದಿಂದ	ಭತ್ತ, ತೆಂಗು, ಅಡಿಕೆ, ಬಾಳೆ	ದಕ್ಷಿಣ ಕನ್ನಡ, ಉಡುಪಿ,ಉತ್ತರ ಕನ್ನಡ

12. ಕರ್ನಾಟಕದ ಜಲಸಂಪನ್ಮೂಲ

I

1) C) ರಾಯಚೂರು,

2) B) ಕೋಲಾರದ ಚಿನ್ನದ ಗಣಿಗೆ ಸರಬರಾಜು

3) D)ದೋಣಿ ನದಿ

4) C) ಬಾವಿ

5) ಬಿ) ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು

II

6) ಅಂತರ್ಜಲ ಕುಸಿತ, ಮಳೆಯ ಪ್ರಮಾಣ ಕಡಿಮೆಯಾಗಿರುವುದು .

7) * ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು

* ಪೂರ್ವಾಭಿಮುಖವಾಗಿ ಹರಿಯುವ ನದಿಗಳು .

8) ನೀರಾವರಿ ಮತ್ತು ಜಲ ವಿದ್ಯುತ್ ಉತ್ಪಾದನೆ .

III

9) * ಕೃಷಿ, ಕೈಗಾರಿಕೆ, ವಾಣಿಜ್ಯೋದ್ಯಮಕ್ಕೆ ಉಪಯುಕ್ತ

- ಸಾಂಪ್ರದಾಯಿಕ ಶಕ್ತಿಮೂಲಗಳ ಕೊರತೆ ಇರುವುದರಿಂದ

10) * ಪುರಾತನ ಕಾಲದಲ್ಲಿ ಬಾವಿಗಳಲ್ಲಿ ನೀರನ್ನು ಸಂಗ್ರಹಿಸಿ ನೀರಾವರಿ ಮಾಡಲಾಗುತ್ತಿತ್ತು .

* ಕೆರೆಗಳನ್ನು ನಿರ್ಮಿಸಿ ನೀರಾವರಿ ಮಾಡಲಾಯಿತು.

* ವಿಜಯನಗರ, ಮೈಸೂರು ಅರಸರ ಕಾಲದಲ್ಲಿ ಕಾಲುವೆ ನೀರಾವರಿ ಜನಪ್ರಿಯಗೊಂಡಿತು .

* ಇತ್ತೀಚೆಗೆ ಕೊಳವೆ ಬಾವಿಗಳ ಪ್ರಮಾಣ ಹೆಚ್ಚುತ್ತಿದೆ .

11) * ಅಕಾಲಿಕ ಮತ್ತು ಅನಿಶ್ಚಿತ ಮಳೆ

- ಅಸಮಾನ ಮಳೆ ಹಂಚಿಕೆ
- ನಗರೀಕರಣ
- ಅರಣ್ಯ ನಾಶ
- ಅಧಿಕ ಕೊಳವೆ ಬಾವಿಗಳ ಕೊರೆಸುವಿಕೆ

12)

ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು	ಪೂರ್ವಾಭಿಮುಖವಾಗಿ ಹರಿಯುವ ನದಿಗಳು
ಶರಾವತಿ, ಕಾಳಿ, ಗಂಗಾವಳಿ, ನೇತ್ರಾವತಿ,ವರಾಹಿ, ಅಘನಾಶಿನಿ ಇತ್ಯಾದಿ	ಕೃಷ್ಣಾ, ಕಾವೇರಿ, ಪೆನ್ನಾರ್, ಪಾಲಾರ್, ಹೇಮಾವತಿ, ಹಾರಂಗಿ ಇತ್ಯಾದಿ


IV) ಕರ್ನಾಟಕದ ನಕಾಶೆಯಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ .

1) ತುಂಗಭದ್ರ ನದಿ.

2) ಮಹಾತ್ಮಾಗಾಂಧಿ ವಿದ್ಯುದಾಗರ

3) ತಲಕಾವೇರಿ

4) ಶಿವನಸಮುದ್ರ.



ಅಧ್ಯಾಯ- **13 ಕರ್ನಾಟಕದ ಭೂ ಸಂಪತ್ತು.**

1) D)ಕಲಬುರಗಿ

2) C) ವಾಣಿಜ್ಯ ಬೇಸಾಯ,

3) D) ಫೆಬ್ರುವರಿ - ಜೂನ್

4) B) ಮೆಕ್ಕೆಜೋಳ,

5) A)ಉತ್ತಮ ಪೋಷಕಾಂಶ ಹೊಂದಿದೆ

II) ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ :

6) ರಾಗಿ .

7) ಕೀಟ ಮತ್ತು ರೋಗ ನಿಯಂತ್ರಣ .

8) -ಮರಳು ಮಿಶ್ರಿತ ಮೆಕ್ಕಲುಮಣ್ಣು,

-ಕೆಂಪು ಮಣ್ಣು,

-ಅಧಿಕ ಉಷ್ಣಾಂಶ,

-ಅಧಿಕ ಮಳೆ .

9) -ಜೇಡಿ ಮಿಶ್ರಿತ ಮಣ್ಣು,

-ಇಳಿಜಾರು,

-ನೆರಳಿನ ಮರಗಳು,

-ಅಧಿಕ ಮರಗಳು .

III)

10) * ಪುರಾತನ ಮೂಲ ವೃತ್ತಿಯಾಗಿದೆ .

* ಜೀವಧಾರಿತವಾಗಿದೆ .

* ಉದ್ಯೋಗವನ್ನು ಸೃಷ್ಟಿಸುತ್ತದೆ .

* ವಿದೇಶಿ ವಿನಿಮಯ ಹೆಚ್ಚುತ್ತದೆ .

* ಆದಾಯದ ಮೂಲವಾಗಿದೆ .

* ಕಚ್ಚಾ ವಸ್ತುವನ್ನು ಪೂರೈಸುತ್ತದೆ .

* ವಿದೇಶಿ ವಿನಿಮಯ ಗಳಿಕೆಯಾಗುತ್ತದೆ .

* ಆರ್ಥಿಕ ಪ್ರಗತಿಗೆ ಪೂರಕವಾಗಿದೆ .

11)

ಕ್ರ.ಸಂ	ವ್ಯವಸಾಯದ ವಿಧಗಳು	ಬೆಳೆಗಳಿಗೆ ಉದಾಹರಣೆ
1.	ಜೀವನಾಧಾರ ಬೇಸಾಯ	ಭತ್ತ,ರಾಗಿ,ಜೋಳ,ಗೋಧಿ
2.	ನೆಡುತೋಪು ಬೇಸಾಯ	ಕಾಫಿ, ಚಹ, ರಬ್ಬರ್
3.	ವಾಣಿಜ್ಯ ಬೇಸಾಯ	ತಂಬಾಕು, ಹತ್ತಿ, ಕಬ್ಬು, ಸೆಣಬು
4.	ಮಿಶ್ರ ಬೇಸಾಯ	ಬೆಳೆಗಳ ಜೊತೆಗೆ ಕುರಿ, ಕೋಳಿ, ಜೇನು ಇತ್ಯಾದಿ ಸಾಕಣೆ

12)* ಉಷ್ಣವಲಯದ ಬೆಳೆಯಾಗಿದೆ

- 27 ಡಿಗ್ರಿ ಉಷ್ಣಾಂಶ, 150ರಿಂದ 200 ಸೆಂ.ಮೀ ಮಳೆ
- ಮೆಕ್ಕಲು ಮತ್ತು ಜೇಡಿ ಮಿಶ್ರಿತ ಮಣ್ಣು
- ಸಮತಟ್ಟಾದ ಭೂಮಿ

ಅಧ್ಯಾಯ-14.ಆರ್ಥಿಕ ರಚನೆ

I

1)C) ಕೃಷಿ,ಕೈಗಾರಿಕೆ, ಸೇವಾ ವಲಯ
2)B) ವಸ್ತು ವಿನಿಮಯ ಪದ್ಧತಿ
3)C) ಕೈಗಾರಿಕಾ ಕ್ರಾಂತಿ
4)C) ತಂತ್ರಜ್ಞಾನದ ಬದಲಾವಣೆಗಳು
5)D)ಸೇವಾ ವಲಯ
6)C) ಕೃಷಿಕರು ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದ್ದು
7)D)ಗೃಹ ಘಟಕಗಳು ಮತ್ತು ಉದ್ಯಮ ಘಟಕಗಳು
8)B) ಸ್ಥಿರಾತ್ಮಕ ಅರ್ಥವ್ಯವಸ್ಥೆ
9)D)ಪರಿಸರ ಮಾಲಿನ್ಯ ಮತ್ತು ಮಣ್ಣಿನ ಸವೆತ
10)C) ತೆರಿಗೆ
11)D)ಕೌಶಲ ಮತ್ತು ತರಬೇತಿಯ ಕೊರತೆ

12)B) ಬ್ರಿಟನ್
13)D)ಕಬ್ಬು
II.
14) ಅರ್ಥ ವ್ಯವಸ್ಥೆಯ ವಿವಿಧ ವಲಯಗಳಲ್ಲಿನ ಉತ್ಪಾದನೆ, ಉದ್ಯೋಗದ ಸ್ವರೂಪ, ಆದಾಯದ ಮಟ್ಟ, ತಂತ್ರಜ್ಞಾನದ ಬಳಕೆ ಮುಂತಾದವುಗಳ ಬದಲಾವಣೆಯನ್ನು ಆರ್ಥಿಕ ರಚನೆ ಎನ್ನುವರು.
15) -ಪ್ರಾಥಮಿಕ ವಲಯ,
-ದ್ವಿತೀಯ ವಲಯ ಮತ್ತು
-ತೃತೀಯ ವಲಯ
16) ಕೃಷಿಯ ಪ್ರಾಧಾನ್ಯತೆ
17) ಬಂಡವಾಳಶಾಹಿ ವರ್ಗ
18) ಅರ್ಥವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಗಳು ಇಲ್ಲದ ಸ್ಥಿತಿಯೇ ಸ್ಥಿರಾತ್ಮಕ ವ್ಯವಸ್ಥೆ
19) ಖಾಸಗಿಕರಣ, ಉದಾರೀಕರಣ,ಜಾಗತೀಕರಣ
20) ಜೈವಿಕ ಗೊಬ್ಬರ ಮತ್ತು ಜೈವಿಕ ಕ್ರಿಮಿನಾಶಕಗಳ ಬಳಕೆಯೇ ಪರಿಸರಸ್ನೇಹಿ ಬೇಸಾಯ
21) ಕೃಷಿಕರು ತಮಗೆ ಅಗತ್ಯಕ್ಕೆ ತಕ್ಕಂತೆ ಆಹಾರವನ್ನು ಬೆಳೆಯುವ ಬೇಸಾಯ
22) ಗೃಹ ಘಟಕಗಳು ಮತ್ತು ಉದ್ಯಮ ಘಟಕಗಳು
23) ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳು
III.
24) ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿನ
- ಉತ್ಪಾದನೆ
- ಉದ್ಯೋಗದ ಸ್ವರೂಪ
- ಆದಾಯದ ಮಟ್ಟ
- ತಂತ್ರಜ್ಞಾನದ ಬಳಕೆ
- ಜೀವನ ವಿಧಾನಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಒಳಗೊಂಡಿದೆ.

25) ಭೂ ಮಾಲೀಕರಾಗಿದ್ದ ಉಳಿಗಮಾನ್ಯ ಪದ್ಧತಿಯ ಒಡೆಯರು ತಮ್ಮಲ್ಲಿದ್ದ ಹಣವನ್ನು ಕೈಗಾರಿಕೆಗಳಲ್ಲಿ ಬಂಡವಾಳವಾಗಿ ಹೂಡಿದರು ಹೀಗೆ ಕೈಗಾರಿಕಾ ಕ್ರಾಂತಿಯು ಸಮಾಜದಲ್ಲಿ ಬಂಡವಾಳ ವರ್ಗದ ಉದಯಕ್ಕೆ ದಾರಿ ಮಾಡಿಕೊಟ್ಟಿತ್ತು.
26) -ಭಾರತೀಯ ರೈತರು ಜೀವನಾಧಾರ ಬೇಸಾಯದಿಂದ ಮಾರುಕಟ್ಟೆಗಾಗಿ ಬೆಳೆಗಳನ್ನು ಬೆಳೆಯಲು ಮುಂದಾದರು.
-ವಾಣಿಜ್ಯ ಬೆಳೆಗಳಾದ ಹತ್ತಿ ಕಬ್ಬು ಸೆಣಬು ಮತ್ತು ಸಾಂಬಾರು ಪದಾರ್ಥಗಳು ಪ್ರಾಮುಖ್ಯತೆ ಪಡೆದವು
-ಕೃಷಿಯಾಧಾರಿತ ಕೈಗಾರಿಕೆಗಳಿಂದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ರೈತರಿಗೆ ಮುಂದಾದರು
27)
- ಅಧಿಕ ಇಳುವರಿ ಬೀಜಗಳು
- ಯಾಂತ್ರಿಕ ಬೇಸಾಯ
- ರಾಸಾಯನಿಕ ಗೊಬ್ಬರ
- ಕ್ರಿಮಿನಾಶಕಗಳು ಮತ್ತು ಕೀಟನಾಶಕಗಳ ಬಳಕೆ
- ತಳಿ ತಂತ್ರಜ್ಞಾನ ಮತ್ತು ನೀರಾವರಿ ಬಳಕೆ
- ಮಾರುಕಟ್ಟೆ ಸುಧಾರಣೆಗಳು

IV. ಮೂರು ಅಂಕದ ಪ್ರಶ್ನೆಗಳಿಗೆ ಉತ್ತರಗಳು
28) ಬ್ರಿಟಿಷರ ಆಡಳಿತದಲ್ಲಿ ಭಾರತದ ಆರ್ಥಿಕ ವ್ಯವಸ್ಥೆಯು ಸ್ಥಿರಾತ್ಮಕ ಅರ್ಥ ವ್ಯವಸ್ಥೆಯಾಗಿರಲು ಕಾರಣಗಳು
- ಬ್ರಿಟಿಷರ ದೀರ್ಘಕಾಲದ ಆರ್ಥಿಕ ಶೋಷಣೆ ಇಂದಾಗಿ ಬಡ ರಾಷ್ಟ್ರ
- ಪೌಷ್ಟಿಕ ಆಹಾರದ ಕೊರತೆ ಮತ್ತ ಆರೋಗ್ಯ ಸೌಲಭ್ಯಗಳ ಕೊರತೆಯಿಂದಾಗಿ ಮರಣ ಪ್ರಮಾಣ ಹೆಚ್ಚಳ
- ಬಡತನದಿಂದಾಗಿ ಬಂಡವಾಳದ ಕೊರತೆ

- ಕೃಷಿ ಮತ್ತು ಕೈಗಾರಿಕೆಗಳಲ್ಲಿ ಪುರಾತನ ಉತ್ಪಾದನಾ ವಿಧಾನಗಳ ಬಳಕೆ ಮುಂತಾದವು.

29)

- ಅತಿಯಾದ ರಾಸಾಯನಿಕ ಗೊಬ್ಬರಗಳ ಮತ್ತು ಕ್ರಿಮಿನಾಶಕಗಳ ಬಳಕೆಯಿಂದಾಗಿ ಪರಿಸರ ಮಾಲಿನ್ಯ
- ಭೂ ಸವಕಳಿಯ ಹೆಚ್ಚಳದಿಂದ ಫಲವತ್ತಾದ ಭೂಮಿಯ ನಾಶ
- ಯಥೇಚ್ಛ ನೀರು ಬಳಸಿದ್ದರಿಂದ ಅಂತರ್ಜಲದ ಕುಸಿತ
- ಅತಿ ಹೆಚ್ಚಿನ ಕ್ರಿಮಿನಾಶಕಗಳ ಬಳಕೆಯಿಂದ ನೀರಿನ ಮೂಲಗಳು ಕಲುಷಿತ
- ಕೃಷಿ ಉತ್ಪಾದಕತೆಯ ಕುಸಿತ

30)

ಪುರಾತನ ಅರ್ಥ ವ್ಯವಸ್ಥೆಯು

- ಕೃಷಿ ಪ್ರಧಾನ ಅರ್ಥ ವ್ಯವಸ್ಥೆಯಾಗಿತ್ತು
- ಬಹುತೇಕ ಜನರ ಕೃಷಿಯನ್ನು ಅವಲಂಭಿಸಿದ್ದರು.
- ಕೃಷಿಯು ಜೀವನಾಧಾರ ಬೇಸಾಯವಾಗಿತ್ತು
- ಜೀವನ ಆಧಾರ ಕೃಷಿಯಲ್ಲಿ ತಮಗೆ ಅಗತ್ಯಕ್ಕೆ ತಕ್ಕ ಆಹಾರವನ್ನು ಅಷ್ಟೇ ಬೆಳೆಯುತ್ತಿದ್ದರು.
- ಜನರ ಬಯಕೆಗಳು ಕಡಿಮೆ ಇದ್ದು, ಅವರ ಬದುಕು ಸರಳವಾಗಿತ್ತು.
- ಶ್ರಮವಿಭಜನೆ ಅತ್ತಾಗಿ ಬಳಕೆಯಲ್ಲಿ ಇರಲಿಲ್ಲ.
- ವಸ್ತು ವಿನಿಮಯ ಪದ್ಧತಿ ಬಳಕೆಯಲ್ಲಿತ್ತು.

V.

31) ಸ್ಥಿರಾತ್ಮಕ ಅರ್ಥ ವ್ಯವಸ್ಥೆ

- ಸ್ಥಿರಾತ್ಮಕ ಎಂಬ ಪದವು ಗ್ರೀಕ್ ನ ಸ್ಟಾಟಿಕೆ(Statike) ಎಂಬ ಪದದಿಂದ ಬಂದಿದೆ.
- ಸ್ಟಾಟಿಕೆ ಎಂದರೆ ಸ್ಥಿರವಾಗಿ ನಿಲ್ಲು ಎಂದರ್ಥ.
- ಅರ್ಥವ್ಯವಸ್ಥೆಯಲ್ಲಿ ಇದು ಯಾವುದೇ ಬದಲಾವಣೆಗಳಿಲ್ಲದ ಸನ್ನಿವೇಶವನ್ನು ಸೂಚಿಸುತ್ತದೆ.
- ಚಿರಾತ್ಮಕ ಅರ್ಥವ್ಯವಸ್ಥೆಯು ಕಾಲಾತೀತ ಅರ್ಥ ವ್ಯವಸ್ಥೆಯಾಗಿದ್ದು ಅಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.
- ಅರ್ಥ ವ್ಯವಸ್ಥೆಯ ಮೂಲ ಅಂಶಗಳು ಬದಲಾಗದೆ ಸ್ಥಿರವಾಗಿರುತ್ತವೆ
- ಆರ್ಥಿಕ ಬೆಳವಣಿಗೆಯು ಕುಂಠಿತವಾಗಿರುತ್ತದೆ

ಚಲನಾತ್ಮಕ ಅರ್ಥವ್ಯವಸ್ಥೆ


- ಚಲನಾತ್ಮಕ ಎಂಬ ಪದವು ಗ್ರೀಕ್ ನ ಡೈನೋಮಿಕೋಸ್ (Dynamikos) ಎಂಬ ಪದದಿಂದ ಬಂದಿದೆ.
- ಇದರ ಅರ್ಥ ಶಕ್ತಿಶಾಲಿಯಾದ ಬದಲಾವಣೆ ಇಲ್ಲವೇ ನಿರಂತರ ಬದಲಾವಣೆಯನ್ನು ಸೂಚಿಸುತ್ತದೆ.
- ಅರ್ಥವ್ಯವಸ್ಥೆಯಲ್ಲಿನ ಬದಲಾವಣೆಗಳ ಅಧ್ಯಯನವನ್ನು ಸೂಚಿಸುತ್ತದೆ.
- ಕಾಲದಿಂದ ಕಾಲಕ್ಕೆ ಅರ್ಥ ವ್ಯವಸ್ಥೆಯಲ್ಲಿ ಆಗುವ ಬದಲಾವಣೆಯ ಪ್ರಕ್ರಿಯೆಯನ್ನು ವಿಶ್ಲೇಷಿಸುತ್ತದೆ.
- ಅರ್ಥವ್ಯವಸ್ಥೆಯ ಮೂಲಾಂಶಗಳು ನಿರಂತರವಾಗಿ ಬದಲಾಗುತ್ತಿರುತ್ತವೆ.
- ಆರ್ಥಿಕ ಬೆಳವಣಿಗೆ ವರ್ಷದಿಂದ ವರ್ಷಕ್ಕೆ ನಿರಂತರವಾಗಿ ಬದಲಾಗುತ್ತದೆ.

32) ಸ್ವಾತಂತ್ರ್ಯ ನಂತರ ಭಾರತದ ಅರ್ಥವ್ಯವಸ್ಥೆಯು ಚಲನಾತ್ಮಕ ಅರ್ಥವ್ಯವಸ್ಥೆಯಾಗಿ ಮಾರ್ಪಟ್ಟಿತು ಇದಕ್ಕೆ ಕಾರಣಗಳೆಂದರೆ

- ಆರೋಗ್ಯ ಸೌಲಭ್ಯಗಳ ವಿಸ್ತರಣೆಯಿಂದ ಮರಣ ಪ್ರಮಾಣ ಕಡಿಮೆ ಜೀವನ್ನಾಯುಷ್ಯ ಹೆಚ್ಚಾಗಿದೆ
- ಪಂಚವಾರ್ಷಿಕ ಯೋಜನೆಗಳ ಮೂಲಕ ಬಂಡವಾಳ ಹೂಡಿಕೆ ಹೆಚ್ಚಳ
- ನವೀನ ತಂತ್ರಜ್ಞಾನ ಬಳಕೆಯಿಂದ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಉತ್ಪಾದನಾ ವಿಧಾನ ವೇಗವಾಗಿ ಬದಲಾಗಿದೆ
- ಉತ್ಪಾದನೆ ಹೆಚ್ಚಾಗುತ್ತಿದೆ
- ಜನರ ಜೀವನ ಮಟ್ಟ ಉತ್ತಮಗೊಳ್ಳುತ್ತಿದೆ

- 1991ರ ಹೊಸ ಆರ್ಥಿಕ ನೀತಿಯಿಂದ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಪ್ರಕ್ರಿಯೆಗಳು ಬದಲಾವಣೆಯ ವೇಗವನ್ನು ಹೆಚ್ಚಿಸಿವೆ.
- ಬಂಡವಾಳ ಪೂರೈಕೆ ಮತ್ತು ಉತ್ಪಾದನೆ ವೇಗ ಹೆಚ್ಚಾಗಿದೆ

33)



* ಸರಳ ಅರ್ಥವ್ಯವಸ್ಥೆಯಲ್ಲಿ ಗೃಹ ಘಟಕ ಮತ್ತು ಉದ್ಯಮ ಘಟಕಗಳು ಪರಸ್ಪರ ಅವಲಂಬಿಸಿರುತ್ತವೆ.

- ಗೃಹ ಘಟಕ ಭೂಮಿ, ಶ್ರಮ ,ಬಂಡವಾಳ ಮತ್ತು ಸಂಘಟನೆಗಳನ್ನು ಉದ್ಯಮ ಘಟಕಕ್ಕೆ ಪೂರೈಸುತ್ತವೆ.ಅದನ್ನು ಉಪಯೋಗಿಸಿಕೊಂಡು ಉದ್ಯಮ ಘಟಕ ಸರಕು ಸೇವೆಗಳನ್ನು ಉತ್ಪಾದಿಸಿ ಅದನ್ನು ಗೃಹ ಘಟಕಗಳಿಗೆ ಪೂರೈಸುತ್ತದೆ.ಗೃಹ ಘಟಕವು ಅದಕ್ಕೆ ಬದಲಾಗಿ ಹಣವನ್ನು ಸಂದಾಯ ಮಾಡುತ್ತದೆ.
- ಗೃಹ ಘಟಕ ಮತ್ತು ಉದ್ಯಮ ಘಟಕಗಳ ನಡುವೆ ಸಡರ್ಕಾರವು ಹೊಂದಾಣಿಕೆಯನ್ನು ಸಾಧಿಸಿ ಅವುಗಳಿಂದ ತೆರಿಗೆಗಳನ್ನು ಸಂಗ್ರಹಿಸಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ರಕ್ಷಣೆಯನ್ನು ನೀಡುತ್ತದೆ.

ಅಧ್ಯಾಯ-**15.ಭಾರತೀಯ ಅರ್ಥ ವ್ಯವಸ್ಥೆಯ ವಲಯಗಳು**

I.

1)B) ಕೃಷಿ
2)C) ಕಟ್ಟಡ ನಿರ್ಮಾಣ
3)B) ಕೃಷಿ ಆಧಾರಿತ ಕೈಗಾರಿಕೆಗೆ
4)C) ಬ್ಯಾಂಕಿಂಗ್
5)B) ತಯಾರಿಕಾ ವಲಯ
6)D)ಸಾರಿಗೆ ಸಂಪರ್ಕ
7)B) ಕಾಗದ ತಯಾರಿಕೆ
8)D)ಸರ್ಕಾರ
9) C)BHEL
10)B) 1956
11)C) ಬಹು ರಾಷ್ಟ್ರೀಯ ಕಂಪನಿಗಳು
12)C)SONY
13)A) ಖಾಸಗೀಕರಣಕ್ಕೆ

14)D)ಸೇವಾ ವಲಯ
15)B) ಹೂಡಿಕೆದಾರರು ಮತ್ತು ಉಳಿತಾಯಗಾರರು
16)C)66.9
17)C)2001
18)C)75.36%
19)B) ಕಾಫಿ
20)C)52%
21)C)320 K M
22)C)HAL
23)C) ದಕ್ಷಿಣ ಕನ್ನಡ ಮತ್ತು ಉಡುಪಿ
24)D)ಹುಬ್ಬಳ್ಳಿ
25)C) ಸೇವಾ ವಲಯ

II.
26) 3 ವಲಯಗಳಾಗಿ ವರ್ಗೀಕರಿಸಲಾಗಿದೆ
27) ವ್ಯವಸಾಯ
28) ವಿವಿಧ ಕೈಗಾರಿಕೆಗಳು, ಕಟ್ಟಡ ನಿರ್ಮಾಣ, ವಿದ್ಯುತ್ ಉತ್ಪಾದನೆ
29) ಸಕ್ಕರೆ ಕೈಗಾರಿಕೆ, ಹತ್ತಿ ಬಟ್ಟೆ ಕೈಗಾರಿಕೆ, ಸೆಣಬು ಕೈಗಾರಿಕೆ
30) ಮೂಲ ರಾಷ್ಟ್ರದಲ್ಲಿ ಕೇಂದ್ರ ಕಚೇರಿಯನ್ನು ಹೊಂದಿದ್ದು ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ದೇಶಗಳಲ್ಲಿ ಉದ್ಯಮಗಳನ್ನು ಹೊಂದಿ ಆರ್ಥಿಕ ವ್ಯವಹಾರಗಳನ್ನು ನಡೆಸುತ್ತಿರುವ ಉದ್ಯಮಗಳನ್ನು ಬಹು ರಾಷ್ಟ್ರೀಯ ಕಂಪನಿಗಳು ಎನ್ನುವರು
31)1991 ರಲ್ಲಿ
32) ನವಮಂಗಳೂರು
33)1913ರಲ್ಲಿ

III.
34) ಭಾರತದ ಅರ್ಥ ವ್ಯವಸ್ಥೆಯ ವಲಯಗಳು ಮೂರು
- ಪ್ರಾಥಮಿಕ ವಲಯ
- ದ್ವಿತೀಯ ವಲಯ
- ತೃತೀಯ ವಲಯ

35) ತೃತೀಯ ವಲಯದ ಉದ್ಯೋಗಗಳು
- ಶಿಕ್ಷಣ
- ಸಾರಿಗೆ ಸಂಪರ್ಕ
- ಪ್ರವಾಸೋದ್ಯಮ
- ವಿಮೆ
- ಸಾರ್ವಜನಿಕ ಆಡಳಿತ

36) ಖಾಸಗಿ ವಲಯವು ಎಲ್ಲ ವಿಧದ ವೈಯಕ್ತಿಕ ಮತ್ತು ಖಾಸಗಿ ಕಂಪನಿಗಳಿಗೆ ಸಂಬಂಧಿತವಾಗಿದೆ
ಉದಾಹರಣೆ- ಟಾಟಾ, ಬಿರ್ಲಾ, ಜಿಂದಾಲ್, ಮಹೇಂದ್ರ, ರಿಲಯನ್ಸ್
37) ಬಹು ರಾಷ್ಟ್ರೀಯ ಕಂಪನಿಗಳೆಂದರೆ
ಸೋನಿ,ಸ್ಯಾಮ್ ಸಂಗ್, ಹಿಂದುಸ್ತಾನ್ ಲಿವರ್, ಇನ್ಫೋಸಿಸ್, ಟಾಟಾ ಕನ್ಸಲ್ಟೆನ್ಸಿ
38) ವಿಮೆಯು ಹಣಕಾಸಿನ ನಷ್ಟದ ವಿರುದ್ಧದ ಒಂದು ರಕ್ಷಣೆಯ ಮಾರ್ಗವಾಗಿದೆ

ವಿಮೆಯ ಎರಡು ವಿಧಗಳು
ಸಾಮಾನ್ಯ ವಿಮೆ ಮತ್ತು ಜೀವ ವಿಮೆ

39) ಸಂಪರ್ಕ ವಿಚಾರಗಳು ಭಾವನೆಗಳು ಮತ್ತು ಮಾಹಿತಿಯಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ ಮತ್ತು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿನಿಮಯ ಮಾಡುವ ವ್ಯವಸ್ಥೆಯಾಗಿದೆ
ಉದಾಹರಣೆ: ಅಂಚೆ ಸೇವೆಗಳು, ದೂರಸಂಪರ್ಕ, ವೃತ್ತ ಪತ್ರಿಕೆಗಳು,ಅಂತರ್ಜಾಲ ಮತ್ತು ಇ-ಮೇಲ್

40) ಕರ್ನಾಟಕದ ಖಾಸಗಿ ವಲಯದ ಕೈಗಾರಿಕೆಗಳು
- ಇನ್ಫೋಸಿಸ್
- ವಿಪ್ರೋ
- ಮೈಸೂರಿನ ಟಿವಿಎಸ್ ಮೋಟಾರ್ ಸೈಕಲ್ ತಯಾರಿಕಾ ಘಟಕ
- ಧಾರವಾಡದ ಟಾಟಾ ಮೋಟಾರ್ಸ್
- ಕಿರ್ಲೋಸ್ಕರ್
- ಲಾರ್ಸನ್ ಅಂಡ್ ಟಬ್ರೋ

41) ಕೃಷಿ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳು
- ಸುಧಾರಿತ ಬೀಜಗಳ ಪೂರೈಕೆ
- ರಾಸಾಯನಿಕ ಗೊಬ್ಬರಗಳನ್ನು ಸಬ್ಸಿಡಿ ದರದಲ್ಲಿ ನೀಡುವುದು
- ಯಾಂತ್ರಿಕ ಬೇಸಾಯಕ್ಕೆ ಪ್ರೋತ್ಸಾಹ
- ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ
- ಸಣ್ಣ ದೊಡ್ಡ ನೀರಾವರಿ ಯೋಜನೆಗಳು
- ವಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ

IV.

42) ಪ್ರಾಥಮಿಕ ವಲಯದ ಉದ್ಯೋಗಗಳೆಂದರೆ
- ಕೃಷಿ
- ಪಶುಪಾಲನೆ
- ಅರಣ್ಯಗಳು
- ಮೀನುಗಾರಿಕೆ
- ಗಣಿಗಾರಿಕೆ
- ರೇಷ್ಮೆ ಕೃಷಿ
- ಕೋಳಿ ಸಾಕಾಣಿಕೆ
- ಜೇನು ಸಾಕಾಣಿಕೆ ಮುಂತಾದವು

43) ಭಾರತದ ಕೃಷಿ ವಲಯ ಎದುರಿಸುತ್ತಿರುವ ಸಮಸ್ಯೆಗಳು
- ಬಹುತೇಕ ಕೃಷಿಕರು ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದಾರೆ
- ಸಾಗುವಳಿ ಭೂಮಿಯ ಬಹುದೊಡ್ಡ ಭಾಗ ಮಳೆ ಆಶ್ರಿತವಾಗಿದೆ
- ಕೃಷಿ ವಲಯದಲ್ಲಿ ಉತ್ಪಾದಕತೆಯು ಬಹಳ ಕಡಿಮೆ ಇದೆ
- ಬಹುತೇಕ ಕೃಷಿಕರು ಆಧುನಿಕ ಕೃಷಿ ಉಪಕರಣಗಳು ಹಾಗೂ ಹೊಸ ಉತ್ಪಾದನಾ ತಂತ್ರಗಳ ಅಳವಡಿಕೆಯಲ್ಲಿ ಹಿಂದುಳಿದಿದ್ದಾರೆ
- ಮಧ್ಯವರ್ತಿಗಳು ಉಪಟಳದಿಂದಾಗಿ ಕೃಷಿಕರು ತಮ್ಮ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ಪಡೆಯುತ್ತಿಲ್ಲ

44) ದ್ವಿತೀಯ ವಲಯವನ್ನು ತಯಾರಿಕ ವಲಯ ಎನ್ನುವರು ಇಲ್ಲಿ ಕಚ್ಚಾ ವಸ್ತುಗಳನ್ನು ಸಿದ್ಧಪಡಿಸಿದ ಉತ್ಪನ್ನಗಳಾಗಿ ಪರಿವರ್ತಿಸಲಾಗುತ್ತದೆ
A)ಕಚ್ಚಾ ವಸ್ತುಗಳ ಮೇಲೆ ಕೈಗಾರಿಕೆಗಳನ್ನು
- ಕೃಷಿ ಆಧಾರಿತ ಕೈಗಾರಿಕೆಗಳು
- ಅರಣ್ಯ ಆಧಾರಿತ ಕೈಗಾರಿಕೆಗಳು
- ಖನಿಜ ಆಧಾರಿತ ಕೈಗಾರಿಕೆಗಳು

B) ಒಡೆತನದ ಆಧಾರದ ಮೇಲೆ ಕೈಗಾರಿಕೆಗಳನ್ನು

- ಸಾರ್ವಜನಿಕ ವಲಯದ ಉದ್ಯಮಗಳು
- ಖಾಸಗಿ ವಲಯದ ಉದ್ಯಮಗಳು (ಎಂಎನ್‌ಸಿ, ದೊಡ್ಡ ಪ್ರಮಾಣದ,ಮಧ್ಯಮ ಪ್ರಮಾಣದ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು)

45) ಶಿಕ್ಷಣದ ಪ್ರೋತ್ಸಾಹಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳು

- ರಾಷ್ಟ್ರೀಯ ಸಾಕ್ಷರತಾ ಮಿಷನ್ -1988
- ಸರ್ವ ಶಿಕ್ಷಣ ಅಭಿಯಾನ -2001
- ಮಧ್ಯಾಹ್ನದ ಬಿಸಿ ಊಟ ಯೋಜನೆ -1995
- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ್ -2009 ಮುಂತಾದವು

46) ಕರ್ನಾಟಕದ ಪ್ರಮುಖ ನೀರಾವರಿ ಯೋಜನೆಗಳು

- ಘಟಪ್ರಭಾ ಯೋಜನೆ
- ಮಲಪ್ರಭಾ ಯೋಜನೆ
- ತುಂಗಭದ್ರಾ ಯೋಜನೆ
- ನಾರಾಯಣಪುರ
- ಆಲಮಟ್ಟಿ ಅಣೆಕಟ್ಟು
- ಹೇಮಾವತಿ
- ಹಾರಂಗಿ
- ಕೃಷ್ಣರಾಜಸಾಗರ

47) ಕರ್ನಾಟಕದ ಪ್ರಮುಖ ಬೆಳೆಗಳೆಂದರೆ

- ಆಹಾರದ ಬೆಳೆಗಳು - ಭತ್ತ ಜೋಳ ರಾಗಿ ಗೋಧಿ ಮೆಕ್ಕೆಜೋಳ ಬಾರ್ಲಿ
- ವಾಣಿಜ್ಯ ಬೆಳೆಗಳು - ಹತ್ತಿ ಕಬ್ಬು ಹೊಗೆ ಸೊಪ್ಪು ಆಲೂಗೆಡ್ಡೆ ಎಣ್ಣೆಕಾಳುಗಳು ಕಾಫಿ ಚಹ
- ತೋಟಗಾರಿಕಾ ಬೆಳೆಗಳು - ಏಲಕ್ಕಿ ಮೆಣಸು ಮಾವು ತೆಂಗು ಅಡಿಕೆ ಬಾಳೆ ಸಾಂಬಾರು ಪದಾರ್ಥಗಳು

48) ಕರ್ನಾಟಕದ ಜಲ ಸಾರಿಗೆ

- ಕರ್ನಾಟಕವು 320 ಕಿಲೋಮೀಟರ್ ಉದ್ದದ ಕರಾವಳಿ ತೀರವನ್ನು ಹೊಂದಿದೆ
- ಇದು ಜಲ ಸಾರಿಗೆ ಅತ್ಯಂತ ಉಪಯುಕ್ತವಾಗಿದೆ
- ನವ ಮಂಗಳೂರು ಕರ್ನಾಟಕದ ಪ್ರಮುಖ ಅಂತರಾಷ್ಟ್ರೀಯ ಬಂದರಾಗಿದೆ ಇದು ಕೇಂದ್ರ ಸರ್ಕಾರದ ಒಡೆತನದಲ್ಲಿದೆ
- ಕರ್ನಾಟಕದಲ್ಲಿ ರಾಜ್ಯ ಸರ್ಕಾರಕ್ಕೆ ಸೇರಿದ 13 ಸಣ್ಣ ಬಂದರುಗಳು ಇವೆ
- ಕಾರವಾರ ಬೇಲಿಕೆರಿ ಮಲ್ಪೆ ಭಟ್ಕಳ ಹೊನ್ನಾವರ ಇತರ ಪ್ರಮುಖ ಬಂದರುಗಳಾಗಿವೆ

V.

49) ಕೃಷಿ ವಲಯದ ಮಹತ್ವ

- ಹೆಚ್ಚಿನ ಜನರು ಈಗಲೂ ತಮ್ಮ ಜೀವನ ನಿರ್ವಹಣೆಗಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿಯನ್ನು ಅವಲಂಭಿಸಿದ್ದಾರೆ.
- ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತದೆ
- ಜನರಿಗೆ ಆಹಾರ ಮತ್ತು ಪ್ರಾಣಿಗಳಿಗೆ ಮೇವನ್ನು ಒದಗಿಸುತ್ತದೆ
- ಸರ್ಕಾರಕ್ಕೆ ಆದಾಯವನ್ನು ತಂದುಕೊಡುತ್ತದೆ
- ವಿದೇಶಿ ವಿನಿಮಯವನ್ನು ಗಳಿಸುತ್ತದೆ
- ರೈತರ ಉಳಿತಾಯದ ಮೂಲಕ ಬಂಡವಾಳ ಸಂಗ್ರಹಕ್ಕೆ ನೆರವಾಗುತ್ತದೆ

50) ಕೈಗಾರಿಕೆಗಳ ಮಹತ್ವ

- ರಾಷ್ಟ್ರಕ್ಕೆ ಹೆಚ್ಚಿನ ಆದಾಯವನ್ನು ತರುತ್ತವೆ
- ಜನರಿಗೆ ಉದ್ಯೋಗವನ್ನು ಒದಗಿಸುತ್ತವೆ

- ಕೈಗಾರಿಕಾ ಅಭಿವೃದ್ಧಿಯಿಂದ ಜನರ ಜೀವನ ಮಟ್ಟವು ಹೆಚ್ಚುತ್ತದೆ
- ಕೃಷಿಯ ಆಧುನಿಕರಣಕ್ಕೆ ಸಹಕರಿಸುತ್ತದೆ
- ಕೃಷಿಯ ಭೂಮಿಯ ಮೇಲಿನ ಒತ್ತಡವನ್ನು ಕಡಿಮೆಗೊಳಿಸುತ್ತವೆ
- ಹೆಚ್ಚಿನ ವಿದೇಶಿ ವಿನಿಮಯವನ್ನು ಗಳಿಸಲು ಸಹಾಯಕವಾಗಿವೆ
- ಕೈಗಾರಿಕಾ ಪ್ರದೇಶಗಳು ವ್ಯಾಪಾರ ಶಿಕ್ಷಣ ಸಾರಿಗೆ ಬ್ಯಾಂಕಿಂಗ್ ಮುಂತಾದವುಗಳ ಕೇಂದ್ರಗಳಾಗಿಯೂ ಅಭಿವೃದ್ಧಿ ಹೊಂದುತ್ತವೆ

51) ಕರ್ನಾಟಕದಲ್ಲಿರುವ ಸಾರ್ವಜನಿಕ ಉದ್ಯಮಗಳು

- ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್(,HAL)
- ನ್ಯಾಷನಲ್ ಏರ್ ಸ್ಪೇಸ್ ಲ್ಯಾಬೋರೇಟರಿ (NAL)
- ಭಾರತ್ ಹೆವಿ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BHEL)
- ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್(ITI)
- ಭಾರತ ಅರ್ಥ ಮೂವರ್ಸ್ ಲಿಮಿಟೆಡ್(BEML)
- ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BEL)
- ಹಿಂದುಸ್ತಾನ್ ಮಿಷನ್ ಟೂಲ್ಸ್ (HMT)

52) ಕರ್ನಾಟಕವು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದು

- ಸರ್ ಎಂ ವಿಶ್ವೇಶ್ವರಯ್ಯನವರು 1913ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ಸ್ಥಾಪಿಸಿದರು
- ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಬ್ಯಾಂಕಿಂಗ್ ಉದ್ಯಮದ ತೊಟ್ಟಿಲು ಎನಿಸಿವೆ
- ಕೆನರಾ ಬ್ಯಾಂಕು ರಾಜ್ಯದಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು (RRB) ಪ್ರಾಯೋಜಿಸಿದ ಮೊಟ್ಟಮೊದಲ ಬ್ಯಾಂಕ್ ಆಗಿದೆ
- 12 ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು 16 ಖಾಸಗಿ ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿವೆ

ಅಧ್ಯಾಯ-16 .ವ್ಯವಹಾರ ನಿರ್ವಹಣೆ

I

1) C) ಕಾರ್ಯವಿಭಜನೆ

2) D)ಯೋಜನೆ.

3) B) ನೇತೃತ್ವ

4) B) ಜೆ.ಎಲ್.ಹೇನ್ಸ

II

5) 1. ಕಾರ್ಯವಿಭಜನೆ, 2. ಅಧಿಕಾರ & ಜವಾಬ್ದಾರಿ 3. ಶಿಸ್ತು .4. ಏಕರೂಪದ ಆದೇಶ, 5ನಿರ್ದೇಶನ, 6ವೇತನ ಕೇಂದ್ರೀಕೃತ ನಿರ್ವಹಣೆ .7ಹಂತ ಸರಪಳಿ, 8ಕ್ರಮ ಸಮತೆ, 9ಅಧಿಕಾರ ಸ್ಥಿರತೆ, 10ನೇತೃತ್ವ, 11ಒಗ್ಗಟ್ಟಿನಲ್ಲಿ ಬಲ .

6) 1. ಸಮಸ್ಯೆ ವಿಶ್ಲೇಷಣೆ, 2. ಯೋಜನೆ, 3. ಧೈರ್ಯ, ತಾಳ್ಮೆ 4. ಮುಂದಾಲೋಚನೆ, 5. ವಿವೇಕಯುತ ನಿರ್ಧಾರ .

7) 1. ಯೋಜನೆ, 2. ಸಂಘಟನೆ, 3. ಸಿಬ್ಬಂದಿ ಪೂರೈಕೆ 4. ನಿರ್ದೇಶನ, 5. ಸಂಯೋಜನೆ 6. ನಿಯಂತ್ರಣ.

8) * ವೈಯಕ್ತಿಕ ನಿರ್ಧಾರವನ್ನು ಒಬ್ಬ ವ್ಯಕ್ತಿ ತೆಗೆದುಕೊಳ್ಳುತ್ತಾನೆ. ಇದು ಸಾಮಾನ್ಯವಾಗಿ ಏಕವ್ಯಕ್ತಿ ಮಾಲೀಕತ್ವ ಸಂಸ್ಥೆಯಲ್ಲಿ ಬರುತ್ತದೆ.

* ಗುಂಪು ನಿರ್ಧಾರವನ್ನು ಹಲವು ವ್ಯಕ್ತಿಗಳು ಸೇರಿ ತೆಗೆದುಕೊಳ್ಳುತ್ತಾರೆ. ಇದು ಸಾಮನ್ಯವಾಗಿ ಪಾಲುದಾರಿಕೆ ಸಂಸ್ಥೆಯಲ್ಲಿ ಬರುತ್ತದೆ.

9) * ಸಮಸ್ಯೆಯನ್ನು ವಿಶ್ಲೇಷಿಸುವುದು.

* ಕಾರ್ಯಗತ ಮಾಡಲು ಯೋಜನೆ ರೂಪಿಸುವುದು.

*ಧೈರ್ಯ ಮತ್ತು ತಾಳ್ಮೆ ಪಾಲಿಸುವುದು.

* ಮುಂದಾಲೋಚನೆ.

*ವಿವೇಕಯುಕ್ತ ನಿರ್ಧಾರ.

ಭಾಗ 2

ಅಧ್ಯಾಯ- 17. ಅಹೋಮ್ ರಾಜವಂಶ, ಮೊಘಲರು ಮತ್ತು ಮರಾಠರು

I.

1. D) ಸುಕಫಾ
2. A) ಅಕ್ಬರ್
3. C) ಶಹಜಹಾನ್
4. B) ಪುರಂದರಗಢ
5. B) ಲಚಿತ್ ಬೊರ್ಫುಕನ್
6. C) ೧೫೭೬
7. A) ರಾಣಾ ಪ್ರತಾಪ್
8. D) ಅಕ್ಬರ್

II.

9. ಶೇರ್ ಶಾ.
10. ಮೊದಲನೇ ಪಾಣಿಪತ್ ಯುದ್ಧ
11. ಜಯಧ್ವಜ ಸಿಂಹ, ಚಕ್ರಧ್ವಜ ಸಿಂಹ, ಉದಯಾದಿತ್ಯ ಸಿಂಹ.

12.. 1674

13. ದಾಗ್ ಮಹಲಿ
14. ತೋದರಮಲ್ಲ
15. ಚೌತ ಮತ್ತು ಸರದೇಶಮುಖಿ
16. ಚೆರಾಯ್ ಡಾಯ್

III.

17.

- ಅವರು ಪ್ರಸಿದ್ಧ, ಅಗಾಧ ಬೆಲೆಬಾಳುವ ಮಾಣಿಕ್ಯ-ಲೇಪಿತ ಮಯೂರ ಸಿಂಹಾಸನವನ್ನು ನಿರ್ಮಿಸಿದರು.
- ಷಹಜಹಾನ್ ತನ್ನ ಪ್ರೀತಿಯ ಪತ್ನಿ ಮುಮ್ತಾಜ್ ನೆನಪಿಗಾಗಿ ಆಗ್ರಾದಲ್ಲಿ ಪ್ರಸಿದ್ಧ 'ತಾಜ್ ಮಹಲ್' ಅನ್ನು ನಿರ್ಮಿಸಿದರು.
- ದೆಹಲಿಯಲ್ಲಿರುವ ಕೆಂಪು ಕೋಟೆ ಮತ್ತು ಅದರಲ್ಲಿರುವ ಕಟ್ಟಡಗಳು ಶಹಜಹಾನ್ ಅವರ ಕೊಡುಗೆಗಳಾಗಿವೆ.
- ಆದ್ದರಿಂದ, ಅವನ ಅವಧಿಯನ್ನು 'ಮೊಘಲ್ ಕಲೆ ಮತ್ತು ವಾಸ್ತುಶಿಲ್ಪದ ಸುವರ್ಣಯುಗ' ಎಂದು ಕರೆಯಲಾಗುತ್ತದೆ.

18.

- ಹುಮಾಯೂನ್ ಅವಧಿಯಲ್ಲಿ, ಚಿತ್ರಕಲೆಯ ಕಲೆ ವಿಕಸನಗೊಂಡಿತು.
- ಮೀರ್ ಸಯ್ಯದ್ ಅಲಿ ಮತ್ತು ಪರ್ಷಿಯಾದ ಅಬ್ದುಸ್ ಸಮದ್ ಅವರ ಸಹಾಯದಿಂದ, ವಿವಿಧ ವರ್ಣಚಿತ್ರಗಳನ್ನು ರಚಿಸಲಾಯಿತು.
- ಅಕ್ಬರನ ಆಸ್ಥಾನದಲ್ಲಿದ್ದ 17 ಕಲಾವಿದರಲ್ಲಿ, 13 ಕಲಾವಿದರು ಹಿಂದೂಗಳಾಗಿದ್ದರು.
- ಅವರಲ್ಲಿ ಪ್ರಸಿದ್ಧರಾದವರು ದಶವಂತ, ಬಸವಣ್ಣ, ಲಾಲಾ ಮತ್ತು ಮುಕುಂದ.
- ಜಹಾಂಗೀರ್ ಆಸ್ಥಾನದಲ್ಲಿ, ಉಸ್ತಾದ್ ಮನ್ಸೂರ್ ಮತ್ತು ಅಬ್ದುಲ್ ಹಸನ್ ಉಪಸ್ಥಿತರಿದ್ದರು.
- ಈ ಕಲಾವಿದರು ಮುಖ್ಯವಾಗಿ ಮೊಘಲ್ ರಾಜರು ಮತ್ತು ಅವರ ರಾಣಿಯರ ಬೃಹತ್ ವರ್ಣಚಿತ್ರಗಳನ್ನು ರಚಿಸಿದರು.

19.

- ಶಿವಾಜಿಯ ಕಂದಾಯ ಸಂಗ್ರಹ ವ್ಯವಸ್ಥೆಯು ರೈತ್ವಾರಿ ವ್ಯವಸ್ಥೆಯಾಗಿದ್ದು, ರೈತರಿಗೆ ಅನುಕೂಲಕರವಾಗಿತ್ತು.
- ಅವರು ಜಹಗೀರ್‌ದಾರಿ ಕಂದಾಯ ವ್ಯವಸ್ಥೆಯನ್ನು ರದ್ದುಗೊಳಿಸಿದರು.

- ತೆರಿಗೆಯನ್ನು ಹಣ ಅಥವಾ ವಸ್ತುಗಳ ರೂಪದಲ್ಲಿ ಸಂಗ್ರಹಿಸಲಾಯಿತು.
- ಚೌತ ಮತ್ತು ಸರ್ದೇಶಮುಖಿ ಎಂಬ ಭೂ ತೆರಿಗೆಗಳು ಜಾರಿಯಲ್ಲಿದ್ದವು.

20.

- ಮೊಘಲ್ ಕಾಲದಲ್ಲಿ, ಪರ್ಷಿಯನ್, ಅರೇಬಿಕ್, ಟರ್ಕಿಶ್, ಹಿಂದಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅನೇಕ ಪುಸ್ತಕಗಳನ್ನು ಬರೆಯಲಾಯಿತು.
- ಬಾಬರ್ ಮತ್ತು ಜಹಾಂಗೀರ್ ವಿದ್ವಾಂಸರಾಗಿದ್ದರು ಮತ್ತು ಅವರು ತಮ್ಮ ಆತ್ಮಚರಿತ್ರೆಗಳನ್ನು ಬಾಬರ್ ನಾಮ ಮತ್ತು ತುಜಿಕ್-ಎ-ಜಹಾಂಗೀರ್ ಬರೆದರು.
- ಅಕ್ಬರನ ಆಸ್ಥಾನದಲ್ಲಿದ್ದ ಅಬುಲ್ ಫಜಲ್, ಪರ್ಷಿಯನ್ ಭಾಷೆಯಲ್ಲಿ ಐನ್-ಎ-ಅಕ್ಬರಿ ಮತ್ತು ಅಕ್ಬರ್ ನಾಮ ಬರೆದರು.
- ಬದೌನಿ ರಾಮಾಯಣವನ್ನು, ಫೈಜಿ ಗಣಿತ ಕೃತಿ ಲೀಲಾವತಿಯನ್ನು ಮತ್ತು ರಾಜಾ ತೋದರ್ಮಲ್ ಭಾಗವತ ಪುರಾಣವನ್ನು ಪರ್ಷಿಯನ್ ಭಾಷೆಗೆ ಅನುವಾದಿಸಿದರು.
- ತುಳಸಿದಾಸರಿಂದ ರಾಮಚರಿತಮಾನಸ, ಸೂರದಾಸರಿಂದ ಸುರ್ ಸಾಗರ್ ಮುಂತಾದ ಮಹಾನ್ ಕೃತಿಗಳು ರಚಿಸಲ್ಪಟ್ಟವು.

21.

- ಬಾಬರ್
- ಹುಮಾಯೂನ್
- ಅಕ್ಬರ್
- ಜಹಾಂಗೀರ್
- ಷಹಜಹಾನ್
- ಔರಂಗಜೇಬ

22.

- ಗ್ವಾಲಿಯರ್‌ನ ಸಿಂಧಿಯಾ,
- ಇಂಧೋರಿನ ಹೋಳ್ಕರ್,
- ನಾಗಪುರದ ಭೋಸ್ಲೆ,
- ಬರೋಡಾದ ಗಾಯಕ್‌ವಾಡ್

IV.

23.

- ಸೈನ್ಯವನ್ನು ವಿವಿಧ ಪಡೆಗಳಾಗಿ ವಿಂಗಡಿಸಲಾಯಿತು ಮತ್ತು ಅವುಗಳನ್ನು ಮೇಲ್ವಿಚಾರಣೆ ಮಾಡಲು ಕಮಾಂಡೆಂಟ್‌ಗಳನ್ನು ನೇಮಿಸಲಾಗಿತ್ತು.
- ಶೇರ್ ಶಾ ಸ್ವತಃ ಸೈನ್ಯದ ಸಂಘಟನೆ, ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳು ಮತ್ತು ಸೈನಿಕರ ಶಿಸ್ತಿನ ಬಗ್ಗೆ ಗಮನ ಹರಿಸಿದರು.
- ಸೈನ್ಯದ ಚಲನೆಯ ಸಮಯದಲ್ಲಿ ಬೆಳೆಗಳಿಗೆ ಹಾನಿಯಾದರೆ, ಸರ್ಕಾರವು ರೈತರಿಗೆ ಪರಿಹಾರ ನೀಡಿತು.
- ಶೇರ್ ಶಾ ದೆಹಲಿ, ರೋಹ್ತಾಸ್, ಕನೌಜ್ ಮತ್ತು ಪಾಟ್ನಾದಲ್ಲಿ ಹೊಸ ಕೋಟೆಗಳನ್ನು ನಿರ್ಮಿಸಿದರು.
- ರಾಜ್ಯದಲ್ಲಿನ ಭೂಮಿಯನ್ನು ಅವುಗಳ ಫಲವತ್ತತೆಯ ಮಟ್ಟಕ್ಕೆ ಅನುಗುಣವಾಗಿ ಅತ್ಯುತ್ತಮ, ಮಧ್ಯಮ ಮತ್ತು ಕನಿಷ್ಟ ಎಂದು ವರ್ಗೀಕರಿಸಲಾಗಿತ್ತು.
- ರೈತರು ತಮ್ಮ ಆದಾಯವನ್ನು ಸರ್ಕಾರಕ್ಕೆ ಭೂ ತೆರಿಗೆಯಾಗಿ ನೀಡುತ್ತಿದ್ದರು.
- ಶೇರ್ ಶಾ ನಿಷ್ಪಕ್ಷಪಾತ ನ್ಯಾಯಕ್ಕೆ ಹೆಸರುವಾಸಿಯಾಗಿದ್ದರು.
- ಸುಲ್ತಾನನು ರಾಜ್ಯದಲ್ಲಿ ಅತ್ಯುನ್ನತ ನ್ಯಾಯಾಧೀಶನಾಗಿದ್ದನು. ಅವರು ಎಲ್ಲಾ ಅಂತಿಮ ಮೇಲ್ಮನವಿಗಳನ್ನು ನಿರ್ಧರಿಸಿದರು.
- ಅವರು ಪ್ರತಿ ಬುಧವಾರ ಸಂಜೆ ತಮ್ಮ ಆಸ್ಥಾನದಲ್ಲಿ ದರ್ಬಾರು ನಡೆಸುತ್ತಿದ್ದರು.
- ಶೇರ್ ಶಾ 'ದಾಮ್' ಎಂದು ಕರೆಯಲ್ಪಡುವ ಹೊಸ ಬೆಳ್ಳಿ ನಾಣ್ಯವನ್ನು ಚಲಾವಣೆಗೆ ತಂದರು.

- ಈ ನಾಣ್ಯವು 180 ಗುಲಗಂಜಿ ತೂಕವನ್ನು ಹೊಂದಿತ್ತು. ಇತರ ಎಲ್ಲಾ ಮೊಘಲ್ ರಾಜರು ಈ ಪದ್ಧತಿಯನ್ನು ಮುಂದುವರೆಸಿದರು.

24.

- ಬಾಲಾಜಿ ವಿಶ್ವನಾಥ್ ಅವರ ಮರಣದ ನಂತರ, ಅವರ ಹಿರಿಯ ಮಗ ಒಂದನೇ ಬಾಜಿ ರಾವ್ ಅವರನ್ನು ಪೇಶ್ವೆಯಾಗಿ ನೇಮಿಸಲಾಯಿತು.
- ಅವನಿಗೆ ಕೇವಲ 19 ವರ್ಷ ವಯಸ್ಸಾಗಿದ್ದರೂ, ಅವನು ಅಪ್ರತಿಮ ಯೋಧನಾಗಿದ್ದನು.
- ಉತ್ತರ ಭಾರತದಲ್ಲಿ ಮರಾಠಾ ರಾಜ್ಯವನ್ನು ವಿಸ್ತರಿಸುವ ಉದ್ದೇಶದಿಂದ, ಅವನು ಗುಜರಾತ್, ಮಾಲ್ವಾವನ್ನು ವಶಪಡಿಸಿಕೊಂಡನು ಮತ್ತು ಚೌತ್ ಮತ್ತು ಸರ್ದೇಶಮುಖಿ ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರವನ್ನು ಪಡೆದನು.
- ಅವನು ಕರ್ನಾಟಕದ ಚಿತ್ರದುರ್ಗ ಮತ್ತು ಶ್ರೀರಂಗಪಟ್ಟಣವನ್ನು ಆಕ್ರಮಿಸಿದನು.
- ಬಾಜಿ ರಾವ್ ಮೊಘಲರ ವಿರುದ್ಧ ಯುದ್ಧ ಘೋಷಿಸಿದಾಗ, ಮೊಘಲರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಜಾಮ್-ಉಲ್-ಮುಲ್ಕ್ ದೆಹಲಿಯ ಕಡೆಗೆ ದಂಡಯಾತ್ರೆ ಮಾಡಲು ಪ್ರಯತ್ನಿಸಿದನು.
- ಆದರೆ ಭೋಪಾಲ್ ಬಳಿ ನಡೆದ ಯುದ್ಧದಲ್ಲಿ ಅವನು ಮರಾಠರಿಗೆ ಸೋತನು. ಇದರಿಂದಾಗಿ, ನರ್ಮದಾ ಮತ್ತು ಚಂಬಲ್ ನದಿಗಳ ನಡುವಿನ ವಿಶಾಲವಾದ ಭೂಮಿ ಮತ್ತು 50 ಲಕ್ಷ ರೂಪಾಯಿಗಳು ಯುದ್ಧ ಪರಿಹಾರವಾಗಿ ಬಾಜಿ ರಾವ್‌ಗೆ ಬಂದವು.
- ಇದರ ಜೊತೆಗೆ, ಅವನು ಪೋರ್ಚುಗೀಸರಿಂದ ಸಾಲ್ಸೆಟ್ ಮತ್ತು ಬೆಸ್ಸಿನ್ ಪ್ರದೇಶವನ್ನು ಮತ್ತು ಸಿದ್ದಿಗಳಿಂದ ಜಂಜೀರಾವನ್ನು ವಶಪಡಿಸಿಕೊಂಡನು.
- ಪುಣೆ ಅವನ ಆಡಳಿತ ಕೇಂದ್ರವಾಯಿತು. ಈ ಸಂದರ್ಭದಲ್ಲಿ, ಮರಾಠಾ ಒಕ್ಕೂಟದ ಸದಸ್ಯರು, ಗ್ವಾಲಿಯರ್‌ನ ಸಿಂಧಿಯಾ,

ಇಂದೋರ್‌ನ ಹೋಳ್ಕರ್, ನಾಗ್ಪುರದ ಭೋನ್ಸ್ಲೆ ಮತ್ತು ಬರೋಡಾದ ಗಾಯಕ್ವಾಡ್ ಒಟ್ಟಾಗಿ ಸ್ವತಂತ್ರರಾಗಲು ನಿರ್ಧರಿಸಿದರು.

- ಒಂದನೇ ಬಾಜಿ ರಾವ್ ದಕ್ಷತೆಯಿಂದ ಆಳ್ವಿಕೆ ನಡೆಸಿದ್ದಲ್ಲದೆ, ಮರಾಠಾ ಸಾಮ್ರಾಜ್ಯದ ವೈಭವವನ್ನು ಪುನಃ ಸ್ಥಾಪಿಸಿದನು. ಆದ್ದರಿಂದ ಅವರನ್ನು ಎರಡನೇ ಶಿವಾಜಿ ಎಂದು ಕರೆಯಲಾಯಿತು.

25.

- ಇವರು ನಿರ್ಮಿಸಿದ ಭವ್ಯವಾದ ಸ್ಮಾರಕಗಳು ಫತೇಪುರ ಸಿಕ್ರಿ, ಆಗ್ರಾ ಮತ್ತು ದೆಹಲಿಗಳಲ್ಲಿವೆ.
- ಷಾ-ಜಹಾನನು ಆಗ್ರಾದಲ್ಲಿ ಅಕ್ಬರಿ ಮಹಲ್, ತಾಜ್‌ಮಹಲ್, ಜಹಾಂಗೀರ ಮಹಲ್ ಮತ್ತು ಕೋಟೆಯನ್ನು ನಿರ್ಮಿಸಿದನು.
- ಲಾಹೋರ್ ಹಾಗೂ ಅಲಹಾಬಾದ್‌ಗಳಲ್ಲಿ ಆಗ್ರಾದ ಮಾದರಿ ಕೋಟೆಗಳನ್ನು ನಿರ್ಮಿಸಿದರು.
- ಕೆಂಪು ಕೋಟೆಯನ್ನು ನಿರ್ಮಿಸಿ ಅದರಲ್ಲಿ ಕೆಂಪು ಕೋಟೆ ದಿವಾನ್-ಇ-ಖಾಸ್, ರಂಗ್ ಮಹಲ್, ಮಮತಾಜ್ ಮಹಲ್, ಮೋತಿ ಮಸೀದಿ, ನಕ್ಕರ್ ಖಾನಾ, ಖಾಸ್ ಮಹಲ್ ಮುಂತಾದ ಕಟ್ಟಡಗಳನ್ನು ನಿರ್ಮಿಸಲಾಯಿತು.
- ಇವುಗಳಲ್ಲದೆ ದೇಶದ ಅತ್ಯಂತ ದೊಡ್ಡದಾದ ಜಾಮಿಯಾ ಮಸೀದಿಯೂ ಸಹ ಷಾ-ಜಹಾನ ಕಾಲದಲ್ಲಿ ದೆಹಲಿಯಲ್ಲಿ ನಿರ್ಮಾಣಗೊಂಡಿತು
  - ಅಕ್ಬರನ ಕಾಲದಲ್ಲಿ ದೌಲತ್ ಖಾನಾ, ಖ್ವಾಜಾಬಾಘ, ದಫ್ತರ್ ಖಾನಾ, ಇಬಾದತ್ ಖಾನಾ, ಮಕ್ತಬ್ ಖಾನಾ, ಜೋದಾಬಾಯಿ ಅರಮನೆ, ಪಂಚಮಹಲ್, ಬೀರಬಲ್ ಮನೆ ನಿರ್ಮಾಣವಾದವು.

V.

26.

- ಮರಾಠಾ ಸಾಮ್ರಾಜ್ಯದ ಸ್ಥಾಪನೆಯು ಭಾರತೀಯ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ತೆರೆಯಿತು.
- ರಾಷ್ಟ್ರದ ಸಮಗ್ರತೆಯನ್ನು ರಕ್ಷಿಸಲು ಮತ್ತು ಬಾಹ್ಯ ಆಕ್ರಮಣದಿಂದ ಅದನ್ನು ರಕ್ಷಿಸಲು ಮರಾಠರು ಮೊಘಲರೊಂದಿಗೆ ಹೋರಾಡಿದರು.
- ಶಿವಾಜಿ ಮರಾಠಾ ರಾಜರಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದರು.
- ಅವರು ರಾಜ್ಯವನ್ನು ವಿಸ್ತರಿಸುವಲ್ಲಿ ಮಾತ್ರವಲ್ಲದೆ ಉತ್ತಮ ಆಡಳಿತವನ್ನು ನೀಡುವಲ್ಲಿಯೂ ಯಶಸ್ವಿಯಾದರು.

- മഹಾರಾಷ್ಟ್ರದ ಪ್ರಸಿದ್ಧ ಸಂತರ ಬೋಧನೆಗಳು ಹಿಂದೂ ಧರ್ಮದ ರಕ್ಷಣೆ ಮತ್ತು ಮರಾಠಾ ಸಾಮ್ರಾಜ್ಯದ ಸ್ಥಾಪನೆಯ ಮೇಲೆ ಪ್ರಭಾವ ಬೀರಿದವು.

27.

- ಆಡಳಿತಾತ್ಮಕ ಅನುಕೂಲಕ್ಕಾಗಿ, ಅಕ್ಬರ್ ತನ್ನ ರಾಜ್ಯವನ್ನು ಕೇಂದ್ರ ಸರ್ಕಾರ, ಪ್ರಾಂತೀಯ ಸರ್ಕಾರ ಮತ್ತು ಪರಗಣಗಳಾಗಿ ವಿಂಗಡಿಸಿದ್ದನು.
- ಮನ್ಸಬ್‌ದಾರಿ ವ್ಯವಸ್ಥೆಯು ಅವನ ಆಡಳಿತದ ವಿಶಿಷ್ಟ ಲಕ್ಷಣವಾಗಿತ್ತು.
- ಅಕ್ಬರ್ ವಿಶಾಲ ಸಾಮ್ರಾಜ್ಯದ ಚಕ್ರವರ್ತಿ, ಅವನ ಸೈನ್ಯದ ದಂಡನಾಯಕ, ಕಾರ್ಯಾಂಗದ ಮುಖ್ಯಸ್ಥ ಮತ್ತು ನ್ಯಾಯಾಂಗದ ಮುಖ್ಯಸ್ಥ.
- ಆಡಳಿತದಲ್ಲಿ ಅವನಿಗೆ ಸಹಾಯ ಮಾಡಲು ವಕೀಲ್, ದಿವಾನ್, ಮೀರ್‌ಭಕ್ಷಿ ಮತ್ತು ಮುಖ್ಯ ಸದರ್ ಎಂಬ ನಾಲ್ವರು ಮಂತ್ರಿಗಳಿದ್ದರು.
- ಅವನು ರಾಜ್ಯವನ್ನು ವಿವಿಧ ಪ್ರಾಂತ್ಯಗಳಾಗಿ ವಿಂಗಡಿಸಿದ್ದನು. ಅವರನ್ನು ಸುಭಾ ಎಂದು ಕರೆಯಲಾಗುತ್ತಿತ್ತು.
- ಅಕ್ಬರ್ ತನ್ನ ಸೈನ್ಯದಲ್ಲಿ ಅನೇಕ ಶ್ರೇಣಿಗಳನ್ನು ಸ್ಥಾಪಿಸಿದ್ದನು. ಇವುಗಳನ್ನು ಮನ್ಸಬ್ ಎಂದು ಕರೆಯಲಾಗುತ್ತಿತ್ತು ಮತ್ತು ಅದರ ಮೇಲ್ವಿಚಾರಕನನ್ನು ಮನ್ಸಾಬ್ದಾರ್ ಎಂದು ಕರೆಯಲಾಗುತ್ತಿತ್ತು.
- ಮೊಘಲ್ ಸೈನ್ಯದಲ್ಲಿ ಕಾಲ್ದಳ, ಅಶ್ವದಳ, ಗಜದಳಗಳಿದ್ದವು
- ಕುದುರೆಗಳಿಗೆ ಮುದ್ರೆ ಮಾಡಲು ದಾಗ್ ಮಹಾಲಿ ಎಂಬ ಪ್ರತ್ಯೇಕ ಇಲಾಖೆ ಇತ್ತು.
- ಪೋಲೀಸ್ ವ್ಯವಸ್ಥೆ ಸುಸಂಘಟಿತ ಮತ್ತು ಸಮರ್ಥವಾಗಿತ್ತು.
- ಜಿಲ್ಲೆಯಲ್ಲಿ ಫೌಜದಾರರು, ಪರಗಣದಲ್ಲಿ ಕಂದಾಯ ಅಧಿಕಾರಿಗಳಿದ್ದರು.
- ಮಧ್ಯಕಾಲೀನ ಯುಗದಲ್ಲಿ ಮೊದಲ ಬಾರಿಗೆ, ಅಕ್ಬರ್ ಅತ್ಯಂತ ಪರಿಣಾಮಕಾರಿ ಆಡಳಿತ ವ್ಯವಸ್ಥೆಯನ್ನು ತಂದಿದ್ದನು.

28.

- ಮರಾಠರನ್ನು ದಕ್ಷಿಣ ಮತ್ತು ಉತ್ತರ ಭಾರತದಲ್ಲಿ ಪ್ರಬಲ ಶಕ್ತಿಯಾಗಿ ಸ್ಥಾಪಿಸಿದನು.
- ಪಾಣಿಪತ್ ಸೋಲಿನ ಲಾಭ ಪಡೆದುಕೊಳ್ಳಲು ನಿಜಾಮ ಪ್ರಯತ್ನಿಸಲು ತೀರ್ಮಾನಿಸಿದಾಗ ಅವನನ್ನು ಅಹಮ್ಮದ್‌ನಗರ

ಬಳಿ ನಡೆದ ಯುದ್ಧದಲ್ಲಿ ಸೋಲಿಸಿದನು.

- ಮೈಸೂರಿನ ಹೈದರಾಲಿಯನ್ನು ಸಹ ಸೋಲಿಸಿದನು.
- ಎರಡನೆಯ ಸಲ ಮೈಸೂರಿನ ಮೇಲೆ ಯುದ್ಧ ಮಾಡಿ ಶ್ರೀರಂಗಪಟ್ಟಣದ ಮೇಲೆ ವಿಜಯ ಸಾಧಿಸಿ ಶಿವಾಜಿ ವಶಪಡಿಸಿಕೊಂಡಿದ್ದ ಪ್ರದೇಶಗಳನ್ನು ಹೈದರ್ ಅಲಿಯಿಂದ ಪಡೆದುಕೊಂಡಿದ್ದಲ್ಲದೆ ಅಪಾರ ಯುದ್ಧ ಪರಿಹಾರ ಹಣವನ್ನು ಪಡೆದನು.
- ಉತ್ತರಭಾರತದಲ್ಲಿ ರಜಪೂತ, ಜಾಟ ಮತ್ತು ರೋಹಿಲರನ್ನು ಸೋಲಿಸಿದನು.
- ರಾಜಭ್ರಷ್ಟನಾಗಿ ಅಲೆಯುತ್ತಿದ್ದ ಮೊಘಲ ಚರ್ಕವರ್ತಿ ಎರಡನೆಯ ಷಾ ಆಲಂನನ್ನು ದೆಹಲಿ ಸಿಂಹಾಸನದ ಮೇಲೆ ಕುಳ್ಳಿರಿಸಲು ನೆರವು ನೀಡಿದನು.
- ಹೀಗೆ ಅಲ್ಪಾವಧಿಯಲ್ಲಿ ಮರಾಠರ ಕೀರ್ತಿಯನ್ನು ಪುನಃ ಸ್ಥಾಪಿಸಿದನು

ಅಧ್ಯಾಯ- 18. ಭಕ್ತಿ ಪಂಥ

I.

1. D) ಚೈತನ್ಯ ಚರಿತಾಮೃತ
2. A) ದೋಹೆಗಳು
3. C) ಶಂಕರದೇವ
4. C) ಭಜನೆಗಳು
5. B) ಪುರಂದರದಾಸರು
6. C) ಗುರುನಾನಕ್

II.

7. ಕುತುಬನ 'ಮೃಗಾವತಿ' ಮತ್ತು ಮಲ್ಲಿಕ್ ಮೊಹಮ್ಮದ್ ಜೈಸಿಯ 'ಪದ್ಮಾವತ್' ಕಾವ್ಯ ಕೃತಿಗಳು ಸೂಫಿ ತತ್ವಶಾಸ್ತ್ರವನ್ನು ಎತ್ತಿಹಿಡಿಯುತ್ತವೆ.

8. ಕಲ್ಯಾಣ

9. ಕಬೀರ್ ಪಂಥಿಗಳು ಎಂದರೆ ಕಬೀರರ ಅನುಯಾಯಿಗಳು ಅಥವಾ ಕಬೀರರ ಮಾರ್ಗದಲ್ಲಿ ಹೋಗುವ ಪ್ರವಾಸಿಗರು.

10. ಶ್ರೀಮಂತ ಶಂಕರದೇವ.

11. ಪುರಂದರದಾಸರು

12.ಶಿಶುನಾಳ ಷರೀಫರು

II.

13.

- ಈ ಯುಗದ ಧಾರ್ಮಿಕ ಸುಧಾರಕರು ಮತ್ತು ತತ್ವಜ್ಞಾನಿಗಳು ಭಕ್ತಿಯ ಜೀವನವನ್ನು ಪ್ರತಿಪಾದಿಸಿದರು.
- ಅವರು ಸಹೋದರತ್ವದ ಭಾವನೆಗಳನ್ನು ಬೆಳೆಸಲು ಪ್ರಯತ್ನಿಸಿದರು ಮತ್ತು ಧಾರ್ಮಿಕ ಸಾಮರಸ್ಯದ ತತ್ವವನ್ನು ಬೋಧಿಸಿದರು.
- ಅವರು ರಾಮ, ಕೃಷ್ಣ ಮತ್ತು ಅಲ್ಲಾಹ್ ನಂತಹ ವಿಭಿನ್ನ ಹೆಸರುಗಳಿಂದ ದೇವರನ್ನು ಪೂಜಿಸುತ್ತಿದ್ದರು.
- ಮೋಕ್ಷ ಅಥವಾ ಮುಕ್ತಿ ಸಾಧಿಸಲು ಅವರು ಭಕ್ತಿಯ ಮಾರ್ಗವನ್ನು ಸೂಚಿಸಿದರು.
- ಶುದ್ಧ ಮನಸ್ಸು ಮತ್ತು ದೇವರಿಗೆ ಸಂಪೂರ್ಣ ಶರಣಾಗತಿ ಸುಧಾರಕರ ಮುಖ್ಯ ತತ್ವಶಾಸ್ತ್ರವಾಗಿತ್ತು.

14.

- ರಮಾನಂದರು ಪ್ರಯಾಗದಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು.
- ಅವರು ರಾಮಾನುಜರ ಸಿದ್ಧಾಂತದ ಅನುಯಾಯಿಯಾಗಿದ್ದರು.
- ಅವರು ಪ್ರೀತಿ ಮತ್ತು ಭಕ್ತಿಯನ್ನು ಆಧರಿಸಿದ ವೈಷ್ಣವ ಧಾರ್ಮಿಕ ಶಾಲೆಯನ್ನು ಸ್ಥಾಪಿಸಿದರು.
- ಅವರು ಉತ್ತರ ಭಾರತದ ಹಲವಾರು ಸ್ಥಳಗಳಿಗೆ ಪ್ರಯಾಣಿಸಿ ರಾಮ ಮತ್ತು ಸೀತೆಯ ಆರಾಧನೆಯನ್ನು ಜನಪ್ರಿಯಗೊಳಿಸಿದರು.
- ವಾರಣಾಸಿ ಅವರ ಪ್ರಧಾನ ಕಛೇರಿಯಾಗಿತ್ತು.
- ಅವರು ಜಾತಿ ವ್ಯವಸ್ಥೆಯನ್ನು ಖಂಡಿಸಿದರು ಮತ್ತು ಎಲ್ಲಾ ಜಾತಿಯ ಜನರು ತಮ್ಮ ಪಂಥಕ್ಕೆ ಸೇರಲು ಅವಕಾಶ ಮಾಡಿಕೊಟ್ಟರು.
- ಕಬೀರ್ ಅಂತಹ ಒಬ್ಬ ಅನುಯಾಯಿ.

15.

- ಗುರುನಾನಕ್ ಅವರ ಅನುಯಾಯಿಗಳನ್ನು ಸಿಖ್ಖರು ಎಂದು ಕರೆಯಲಾಗುತ್ತದೆ.
- ಅವರ ಬೋಧನೆಗಳನ್ನು ಗ್ರಂಥ ಸಾಹಿಬ್ ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಅದು ಅವರ ಪವಿತ್ರ ಪುಸ್ತಕ.

16.

- ಹಿಂದೂ ಆಚರಣೆಗಳ ಸುಧಾರಣೆ
- ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಸಾಮರಸ್ಯವನ್ನು ತರುವುದು ಭಕ್ತಿ ಚಳುವಳಿಯ ಎರಡು ಪ್ರಮುಖ ಉದ್ದೇಶಗಳಾಗಿದ್ದವು.
- ಸುಧಾರಕರು ಹಿಂದೂ ಸಮಾಜದಲ್ಲಿನ ಅನೇಕ ನ್ಯೂನ್ಯತೆಗಳನ್ನು ತೆಗೆದುಹಾಕುವಲ್ಲಿ ಯಶಸ್ವಿಯಾದರು.
- ಭಾರತದ ಪ್ರಾದೇಶಿಕ ಭಾಷೆಗಳು ವಿಕಾಶಗೊಂಡವು.
- ಇದು ಭಾರತೀಯ ಸಂಸ್ಕೃತಿಯ ವಿಕಾಸಕ್ಕೆ ಅನುವು ಮಾಡಿಕೊಟ್ಟಿತು.

III.

17.

- ಸೂಫಿ ಸಂತರು ಪರ್ಷಿಯಾದಿಂದ ಆಗಮಿಸಿ ಭಾರತದ ವಿವಿಧ ಭಾಗಗಳಲ್ಲಿ ನೆಲೆಸಿದರು.

- ಅವರನ್ನು ಪೀರ್ (ಗುರು) ಎಂದು ಕರೆಯಲಾಗುತ್ತದೆ.
- ಅವರು ಸುಫ್ ಎಂಬ ಒರಟಾದ ಉಣ್ಣೆಯ ಬಟ್ಟೆಗಳನ್ನು ಧರಿಸಿದ್ದರಿಂದ, ಈ ಮುಸ್ಲಿಂ ಸಂತರನ್ನು 'ಸೂಫಿಗಳು' ಎಂದು ಕರೆಯಲಾಗುತ್ತಿತ್ತು.
- ಪ್ರೀತಿ ಮತ್ತು ಭಕ್ತಿಯ ಮೂಲಕ ದೇವರು ಅಥವಾ ಅಲ್ಲಾಹನನ್ನು ತಲುಪಲು ಸಾಧ್ಯ ಎಂದು ಅವರು ಬೋಧಿಸಿದರು.
- ಎಲ್ಲಾ ವರ್ಗದ ಜನರನ್ನು ಗೌರವಿಸುವ ಮಹತ್ವವನ್ನು ಅವರು ಒತ್ತಿ ಹೇಳಿದರು.
- ಭಕ್ತಿಯಿಂದ ತುಂಬಿದ ನೃತ್ಯ ಮತ್ತು ಸಂಗೀತವು ನಮ್ಮನ್ನು ದೇವರಿಗೆ ಹತ್ತಿರ ತರುತ್ತದೆ ಎಂದು ಅವರು ನಂಬಿದ್ದರು.
- ಭಕ್ತಿಯ ಮಹತ್ವವನ್ನು ಘೋಷಿಸಲು ಅವರು ಉರ್ದು ಮತ್ತು ಹಿಂದಿಯಲ್ಲಿ ಅನೇಕ ಹಾಡುಗಳನ್ನು ರಚಿಸಿದರು.
- ಕುತುಬನ್‌ನ 'ಮೃಗಾವತಿ' ಮತ್ತು ಮಲ್ಲಿಕ್ ಮೊಹಮ್ಮದ್ ಜೈಸಿಯ 'ಪದ್ಮಾವತ್' ಕಾವ್ಯ ಕೃತಿಗಳು ಸೂಫಿ ತತ್ವಶಾಸ್ತ್ರವನ್ನು ಎತ್ತಿಹಿಡಿಯುತ್ತವೆ.

18.

- ಚೈತನ್ಯರು ಭಕ್ತಿ ಚಳುವಳಿಯ ಪ್ರಸಿದ್ಧ ಸಂತರಲ್ಲಿ ಒಬ್ಬರು.
- ಜಾತಿಯ ವ್ಯತ್ಯಾಸಗಳನ್ನು ಶಿಸ್ತಿನಿಂದ ತೆಗೆದುಹಾಕಬಹುದು ಮತ್ತು ಮನುಷ್ಯನು ಭಕ್ತಿಯ ಮೂಲಕ ಶುದ್ಧನಾಗುತ್ತಾನೆ ಎಂದು ಅವರು ಬೋಧಿಸಿದರು.
- ಅವರು ಕೃಷ್ಣನ ಆರಾಧನೆಯನ್ನು ಜನಪ್ರಿಯಗೊಳಿಸಿದರು.
- ಅವರು ಕೃಷ್ಣನ ಸ್ತುತಿಯಲ್ಲಿ ಅನೇಕ ಭಕ್ತಿಗೀತೆಗಳನ್ನು ರಚಿಸಿದರು.
- ಅವರು ಜಾತಿ ವ್ಯವಸ್ಥೆಯನ್ನು ವಿರೋಧಿಸಿದರು ಮತ್ತು ಜನರಲ್ಲಿ ಸಹೋದರತ್ವದ ಭಾವನೆಯನ್ನು ಮೂಡಿಸಲು ಪ್ರಯತ್ನಿಸಿದರು.
- ಅವರ ತಾತ್ವಿಕ ಚಿಂತನೆಗಳು ಮತ್ತು ಬೋಧನೆಗಳನ್ನು "ಚೈತನ್ಯ ಚರಿತಾಮೃತ" ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ.

V.

19.

- ಇವರು ರಾಮಾನಂದರ ವಿದ್ಯಾರ್ಥಿಯಾಗಿದ್ದರು ಮತ್ತು ಹೆಚ್ಚಿನ ಸಮಯವನ್ನು ವಾರಣಾಸಿಯಲ್ಲಿ ಕಳೆದರು.
- ಅವರು ತಮ್ಮ ಹೊಸ ತತ್ವಶಾಸ್ತ್ರವನ್ನು ಬೋಧಿಸಲು ಪ್ರಾರಂಭಿಸಿದರು.
- ಅವರು ಜಾತಿ ವ್ಯವಸ್ಥೆ ಮತ್ತು ಬಹು ವಿಗ್ರಹಾರಾಧನೆಯನ್ನು ಖಂಡಿಸಿದರು ಮತ್ತು ದೇವರು ಒಬ್ಬನೇ, ಮತ್ತು ಅವನು ಹಿಂದೂಗಳು ಮತ್ತು ಮುಸ್ಲಿಮರಿಬ್ಬರಿಗೂ ಒಂದೇ ಎಂದು ಘೋಷಿಸಿದರು.
- ಅವರು ಎರಡು ಸಮುದಾಯಗಳ ನಡುವೆ ಸಾಮರಸ್ಯ ಮತ್ತು ಸಹಿಷ್ಣುತೆಯನ್ನು ತರಲು ಪ್ರಯತ್ನಿಸಿದರು.
- ಕಬೀರರು ದೋಹಾಗಳು ಎಂದು ಕರೆಯಲ್ಪಡುವ ದ್ವಿಪದಿಗಳನ್ನು ರಚಿಸಿದರು.
- ಉತ್ತರ ಭಾರತದಲ್ಲಿ ಇಂದಿಗೂ ಹಿಂದೂಗಳು ಮತ್ತು ಮುಸ್ಲಿಮರು ಈ ದೋಹಾಗಳನ್ನು ಪಠಿಸುತ್ತಾರೆ.
- ಕಬೀರನ ಅನುಯಾಯಿಗಳನ್ನು "ಕಬೀರಪಂಥಿಗಳು" ಎಂದು ಕರೆಯಲಾಗುತ್ತದೆ, ಅಂದರೆ ಕಬೀರನ ಮಾರ್ಗದಲ್ಲಿ ಹೋಗುವ ಪ್ರವಾಸಿಗರು.
- ಕಬೀರನು ಭಾರತದ ಪ್ರಮುಖ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಕ.

20.

- ಅಸ್ಸಾಂನ ಸಾಂಸ್ಕೃತಿಕ ಮತ್ತು ಧಾರ್ಮಿಕ ಇತಿಹಾಸದಲ್ಲಿ ಶ್ರೀಮಂತ ಶಂಕರದೇವರ ಪಾತ್ರ ಬಹಳ ಮುಖ್ಯ.
- ಅವರ ಹೆಸರು ಭಾರತದಲ್ಲಿ ಸಂಸ್ಕೃತಿ ಮತ್ತು ಸಂಗೀತದಲ್ಲಿ ಹೊಸತನವನ್ನು ತರುವಲ್ಲಿ ಸಂಬಂಧಿಸಿದೆ.
- ಶಂಕರದೇವರ ಭಾಗವತವು ಸಂಸ್ಕೃತ, ಅಸ್ಸಾಮೀ ಮತ್ತು ಬ್ರಜಾವಳಿ ಭಾಷೆಗಳಲ್ಲಿದೆ.
- ಅಸ್ಸಾಂನಲ್ಲಿ ಅವರು ಪ್ರಾರಂಭಿಸಿದ ಭಕ್ತಿ ಚಳುವಳಿಯು ಭಾರತದ ಇತರ ಭಾಗಗಳ ಮೇಲೆ ತನ್ನ ಪ್ರಭಾವವನ್ನು ಹರಡಿತು.
- ಅವರು ಪ್ರಾರಂಭಿಸಿದ ಚಳುವಳಿಯನ್ನು ಸರಿಯಾಗಿ ಏಕಾಸರಣ ಧರ್ಮ ಅಥವಾ ವೈಷ್ಣವ ಚಳುವಳಿ ಎಂದು ಕರೆಯಲಾಯಿತು.

- ನಾವು ಕೃಷ್ಣನ ಮೇಲೆ ಅಚಲ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು, ಅವನ ಮೇಲೆ ಹಾಡುಗಳನ್ನು ಹಾಡಬೇಕು ಮತ್ತು ಅದನ್ನು ಕೇಳುವ ಮೂಲಕ ನಾವು ಭಗವಂತನಲ್ಲಿ ಭಕ್ತಿಯನ್ನು ಗಳಿಸಬೇಕು ಎಂದು ಅವರು ಹೇಳುತ್ತಾರೆ.
- ದೇವರ ಸೇವಕನಾಗಿ ಅವರು ಒಳ್ಳೆಯ ಭಾವನೆಗಳನ್ನು ಹೊಂದಿರಬೇಕು. ಇತರ ವೈಷ್ಣವರಂತೆ ಈ ಚಳುವಳಿಯು ಕೃಷ್ಣನೊಂದಿಗೆ ರಾಧೆಯನ್ನು ಪೂಜಿಸುವುದಿಲ್ಲ.
- ಶ್ರೀಮಂತ ಶಂಕರದೇವರು ಸರನಿಯ ಪದ್ಧತಿಯನ್ನು ಪ್ರಾರಂಭಿಸಿದರು.
- ಸಮಾಜದಲ್ಲಿನ ಅಸಮಾನತೆಯ ವಿರುದ್ಧ ಅವರು ಹೋರಾಡಿದರು.

ಅಧ್ಯಾಯ- 19.
ಆಧುನಿಕ ಯುರೋಪ್

I.

1. A) ಫ್ರಾನ್ಸಿಸ್ಕೊ ಪೆಟ್ರಾರ್ಕ್

2. B) ಪ್ರೊಟೆಸ್ಟಂಟ್

3. D) ಇಗ್ನೇಷಿಯಸ್ ಲೊಯೊಲಾ

4. D) ಹಾಗ್ರೀವ್ಸ್

5. D) ಹಿಡುವಳಿದಾರ

6. A) 1453

II.

7. ಜಾನ್ ವೈಕ್ಲಿಫ್.

8. ಇಟಲಿ

9. ಬಾರ್ತಲೋಮಿಯೋ ಡಯಾಸ್.

10. 1498 ರಲ್ಲಿ, ವಾಸ್ಕೋ-ಡ-ಗಾಮಾ

11. ಕೊಪರ್ನಿಕಸ್

12. ನ್ಯೂಟನ್

13. 18ನೇ ಶತಮಾನದ ಯೂರೋಪಿನಲ್ಲಿ ಯಂತ್ರಾಧಾರಿತ ಕೈಗಾರಿಕೆಗಳು ಹೆಚ್ಚಿ ಉತ್ಪಾದನೆಯ ಪ್ರಮಾಣದಲ್ಲಿ ಅಗಾಧವಾದ ಹೆಚ್ಚಳ ಉಂಟಾಯಿತು. ಇದನ್ನೇ ಕೈಗಾರಿಕಾ ಕ್ರಾಂತಿಯೆನ್ನುವರು.

IV.

15.

- ಇಟಲಿ ಮಹಾನ್ ಬರಹಗಾರರ ತಾಯ್ನಾಡು.
- ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ ಮತ್ತು ಸ್ಪೇನ್ ಕೂಡ ಸಾಹಿತ್ಯಕ್ಕೆ ಬಹಳಷ್ಟು ಕೊಡುಗೆ ನೀಡಿತು.
- ಈ ಅವಧಿಯ ಸಾಹಿತ್ಯದ ವಿಷಯವು ಧರ್ಮಕ್ಕಿಂತ ಹೆಚ್ಚಾಗಿ ಲೌಕಿಕ ವಿಷಯಗಳಾಗಿತ್ತು.
- ಮಾನವ ದೇಹ, ಅಂಗಸೌಷ್ಟವ ಮತ್ತು ಇತರ ವಿಷಯಗಳ ಬಗ್ಗೆ ಬರೆಯಲಾಯಿತು.
- ಲ್ಯಾಟಿನ್ ಬದಲಿಗೆ, ಅನೇಕ ಯೂರೋಪಿನ ಪ್ರಾದೇಶಿಕ ಭಾಷೆಗಳು ಬಳಕೆಗೆ ಬಂದವು

16.

- ಹೊಸದಾಗಿ ಅನ್ವೇಷಿಸಲಾದ ಭೂಮಿಯಲ್ಲಿ ವಸಾಹತುಗಳನ್ನು ನಿರ್ಮಿಸಲು ಯುರೋಪಿನ ದೇಶಗಳ ನಡುವೆ ಸ್ಪರ್ಧೆ ಪ್ರಾರಂಭವಾಯಿತು. ಅಮೆರಿಕ, ಆಫ್ರೀಕಾ ಮತ್ತು ಏಷ್ಯಾದಲ್ಲಿ ವ್ಯಾಪಾರದಲ್ಲಿ ಬಲವನ್ನು ಪಡೆಯಲು ಸ್ಪರ್ಧೆಯು ತೀವ್ರವಾಗಿತ್ತು. ಇದು ಅವರು ವಶಪಡಿಸಿಕೊಂಡ ದೇಶಗಳಲ್ಲಿ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಪಡೆಯಲು ಅವರಿಗೆ ಸಹಾಯ ಮಾಡಿತು.
- ವಸಾಹತು ಕಚ್ಚಾವಸ್ತುಗಳಿಂದ ಯುರೋಪಿಯನ್ ಕಂಪನಿಗಳು ಶ್ರೀಮಂತಗೊಂಡವು.
- ಯುರೋಪಿಯನ್ ದೇಶಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆ ಬೆಳೆದು ಕೈಗಾರಿಕಾ ಕ್ರಾಂತಿ ಆರಂಭವಾಯಿತು.
- ಕ್ರೈಸ್ತ ಮಿಷನರಿಗಳು ಜಗತ್ತಿನ ಎಲ್ಲೆಡೆ ಹೋಗಿ ಕ್ರೈಸ್ತ ಧರ್ಮದ ಪ್ರಚಾರ ಕೈಗೊಂಡರು

- ವಸಾಹತು ಶಾಹಿತ್ವ ಮತ್ತು ಸಾಮ್ರಾಜ್ಯಶಾಹಿತ್ವದ ಬೆಳವಣಿಗೆಯು ದೇಶೀಯರು ಮತ್ತು ವಿದೇಶೈರ ನಡುವೆ ವೈಮನಸ್ಸಿಗೆ ಕಾರಣವಾಯಿತು.
- ಉತ್ತರ ಅಮೆರಿಕದ ಆರ್ಥಿಕ ಅಭಿವೃದ್ಧಿಗೆ ಆಫ್ರಿಕಾದ ಗುಲಾಮರನ್ನು ಬಳಸಲು ಪ್ರಾರಂಭಿಸಿದ್ದರಿಂದ ಗುಲಾಮರ ವ್ಯಾಪಾರ ಅಸ್ತಿತ್ವಕ್ಕೆ ಬಂದಿತು.

17.

- ಮಾರ್ಟಿನ್ ಲೂಥರ್ ಕ್ಯಾಥೋಲಿಕ್ ಚರ್ಚ್‌ನ ಧರ್ಮೋಪದೇಶಗಳನ್ನು ತಿರಸ್ಕರಿಸಿದರು.
- 1517 ರಲ್ಲಿ, ಕ್ಷಮಾಪಣ ಪತ್ರಗಳನ್ನು ಮಾರಾಟ ಮಾಡಿದ್ದಕ್ಕಾಗಿ ಅವರು ಚರ್ಚ್ ವಿರುದ್ಧ ವಿರೋಧ ವ್ಯಕ್ತಪಡಿಸಿದರು.
- ಮಾರ್ಟಿನ್ ಲೂಥರ್ ಕ್ಷಮಾದಾನ ಪತ್ರಗಳ ಮಾರಾಟವನ್ನು ತೀವ್ರವಾಗಿ ವಿರೋಧಿಸಿದರು.
- ಮಾರ್ಟಿನ್ ಲೂಥರ್ ಅವರ ಅನುಯಾಯಿಗಳನ್ನು 'ಪ್ರೊಟೆಸ್ಟೆಂಟ್‌ಗಳು' ಎಂದು ಕರೆಯಲಾಗುತ್ತಿತ್ತು. ಜರ್ಮನಿಯ ಜನಸಂಖ್ಯೆಯ ಸುಮಾರು ಅರ್ಧದಷ್ಟು ಜನರು ಪ್ರೊಟೆಸ್ಟೆಂಟ್‌ಗಳಾದರು.

18.

- ಟರ್ಕರಿದ ಕಾನ್ಸ್‌ಟಂಟಿನೋಪಲ್ ವಶ
- ಹೆಚ್ಚಿದ ವ್ಯಾಪಾರ ಚಟುವಟಿಕೆಗಳು
- ಪುನರುಜ್ಜೀವನ
- ಭೌಗೋಳಿಕ ಅನ್ವೇಷಣೆ
- ಧಾರ್ಮಿಕ ಸುಧಾರಣಾ ಚಳವಳಿ
- ಕೈಗಾರಿಕಾ ಕ್ರಾಂತಿ

IV.

19.

- ಪುನರುಜ್ಜೀವನದ ಪ್ರಭಾವದಿಂದ ಸಾಧ್ಯವಾದ ವೈಜ್ಞಾನಿಕ ಆವಿಷ್ಕಾರಗಳು ಯಂತ್ರಗಳ ನಿರ್ಮಾಣಕ್ಕೆ ಕಾರಣವಾಯಿತು.
- ವಸಾಹತುಗಳ ಸ್ಥಾಪನೆಯಿಂದ ವ್ಯಾಪಾರ ವಹಿವಾಟು ಹೆಚ್ಚಿ ಸಿದ್ಧ ವಸ್ತುಗಳಿಗೆ ಬೇಡಿಕೆಹೆಚ್ಚಾಯಿತು.
- ವಸಾಹತುಗಳಿಂದ ಅತ್ಯಂತ ಕಡಿಮೆ ದರದಲ್ಲಿ ಅಗಾದ ಪ್ರಮಾಣದ ಕಚ್ಚಾವಸ್ತುಗಳ ಪೂರೈಕೆಯಾಯಿತು.
- ಕೈಗಾರಿಕೆಯನ್ನು ಅವಲಂಬಿಸಿದ ಕಾರ್ಮಿಕ ವರ್ಗದ ಉದಯ.
- ಬಂಡವಾಳ ಹೂಡಿಕೆಯಲ್ಲಿ ಹೆಚ್ಚಳ.
- ಇಂಗ್ಲೆಂಡಿನಲ್ಲಿದ್ದ ರಾಜಕೀಯ ಸ್ಥಿರತೆ.

20.

- ೧೪೫೩ರಲ್ಲಿ ಕಾನ್ಸ್ಟಾಂಟಿನೋಪಲ್‌ನ ಪತನ,
- ಊಳಿಗಮಾನ್ಯ ಪದ್ಧತಿಯ ಅವನತಿ,
- ಜರ್ಮನಿಯ ಗುಟನ್‌ಬರ್ಗ್‌ನ ಮುದ್ರಣ ಯಂತ್ರದ ಸಂಶೋಧನೆ,
- ಭೌಗೋಳಿಕ ಅನ್ವೇಷಣೆಗಳು
- ಯುರೋಪಿನ ರಾಜಕುಮಾರರು, ಶ್ರೀಮಂತರು, ವ್ಯಾಪಾರಿಗಳು ಹಾಗೂ ಪಾದ್ರಿಗಳು, ವಿದ್ವಾಂಸರನ್ನು, ಕಲಾವಿದರನ್ನು, ವಿಜ್ಞಾನಿಗಳನ್ನು ಹಾಗೂ ತತ್ವಜ್ಞಾನಿಗಳನ್ನು ಪೋಷಿಸಿದುದು

21.

- ಪುನರುಜ್ಜೀವನದ ಕಾಲದಿಂದಲೇ ಆಧುನಿಕ ವಿಜ್ಞಾನವು ಜನ್ಮ ತಾಳಿತು.
- ವಿಜ್ಞಾನವು ಧಾರ್ಮಿಕ ನಂಬಿಕೆಗಳನ್ನು ಬದಿಗೊತ್ತಿ ಹೊಸ ಸಂಶೋಧನೆಗಳನ್ನು ಪ್ರಕಟಿಸಿತು
- ಮಾನವನ ಬಗ್ಗೆ ತಿಳಿಯುವ ವಿಷಯವು ಹೊಸ ಆವಿಷ್ಕಾರಗಳಿಗೆ ನಾಂದಿಯಾಯಿತು
- ಅವಶ್ಯಕತೆ ಮತ್ತು ಪ್ರಶ್ನಿಸುವ ಮನೋಭಾವ ಬೆಳೆದಂತೆ ವೈಜ್ಞಾನಿಕ ಸಂಶೋಧನೆಗಳು ಹೆಚ್ಚಿದವು
